ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ


ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 09
ಫೆಬ್ರವರಿ 26, 2012

ಪುಟ 16 ರೂ. 5/-





ದುಷ್ಟ ಹಿಂದುತ್ವದ ಭಯೋತ್ಪಾದಕ ಸಂಚುಗಳು




ಪಠ್ಯ ಬದಲಾವಣೆ : ಮುಗ್ಧ ಮನಸುಗಳಿಗೆ ವಿಷ ತುಂಬುವ ಯತ್ನ

ಕಾಟಾಚಾರದಲ್ಲೇ ಕೊನೆಗೊಂಡ ಅಧಿವೇಶನ



ಲೈಂಗಿಕ ಚಿತ್ರ ವೀಕ್ಷಣೆ ಹಗರಣ : ಸತ್ಯದ ನೆತ್ತಿಗೆ ಮೊಳೆ ಹೊಡೆಯುವವರು

ಫೆಬ್ರವರಿ 28 : ಸಾರ್ವತ್ರಿಕ ಮುಷ್ಕರದಲ್ಲಿ ದುಡಿವ ಜನರು



ಕಲ್ಲಡ್ಕ ಪ್ರಭಾಕರ್ ಭಟ್ ಬಂಧನಕ್ಕೆ ಆಗ್ರಹಿಸಿ ಪ್ರತಿಭಟನೆ

ದಕ್ಷಿಣ ಕನ್ನಡದ ಪುತ್ತೂರಿನಲ್ಲಿ ಕೋಮುದ್ವೇಷ ಹುಟ್ಟಿಸುವ, ಅಲ್ಪಸಂಖ್ಯಾತರ ಮೇಲೆ ಧಾಳಿ ಮಾಡುವಂತಹ ಹಿಂಸಾತ್ಮಕ ಕೃತ್ಯಗಳಿಗೆ ಪ್ರಚೋದನೆ ನೀಡಿದ ಘಟನೆಗಾಗಿ ಪ್ರಭಾಕರ್‌ಭಟ್‌ನನ್ನು ಬಂಧಿಸಿ ಕ್ರಮ ವಹಿಸಲು, ಸದನಲ್ಲಿ ನೋಡಿದ ಶಾಸಕರನ್ನು ಅನರ್ಹಗೊಳಿಸಿ ಕ್ರಿಮಿನಲ್ ಮೊಕದ್ದಮೆ ಆಗ್ರಹಿಸಿ, ಸರ್ವ. ಭ್ರಷ್ಟ



ಬಿಜೆಪಿ ಸರ್ಕಾರ ರಾಜೀನಾಮೆ ನೀಡಲು ಆಗ್ರಹಿಸಿ ಪ್ರತಿಭಟನೆ ನಡೆಸಲು ಕರೆ ನೀಡಲಾಗಿತ್ತು. ವಿವಿಧ ಜಿಲ್ಲೆಗಳ ವರದಿ.

ಬೆಂಗಳೂರಿನ ಮೈಸೂರ್ ಬ್ಯಾಂಕ್ ವೃತ್ತದಲ್ಲಿ ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ಪ್ರತಿಭಟನೆ ಮಾಡಲಾಯಿತು. ಬೆಂ.ದಕ್ಷಿಣ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಪ್ರಕಾಶ್, ಕಾರ್ಯದರ್ಶಿ ಮಂಡಳಿ ಸದಸ್ಯರಾದ ಟಿ.ಸುರೇಂದ್ರರಾವ್ ಮಾತನಾಡಿದರು. ಉತ್ತರ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಗೋಪಾಲಕೃಷ್ಣ ಅರಳಹಳ್ಳಿ, ಗೌರಮ್ಮ, ಪ್ರತಾಪ್ ಸಿಂಹ ಮುಂತಾದವರು ಭಾಗವಹಿಸಿದ್ದರು.

ಉಡುಪಿ ಜಿಲ್ಲೆಯಲ್ಲಿ ಸಿಪಿಐ(ಎಂ) ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ 3 ಜನ ಸಚಿವರು ವಿಧಾನಸೌಧದಲ್ಲಿ ಆಶ್ಲೀಲ ಚಿತ್ರ ವೀಕ್ಷಣೆ ಮಾಡಿರುವುದು, ಕಲ್ಲಡ್ಕ ಪ್ರಭಾಕರ್ ಭಟ್‌ನ ಕೋಮು ದಳ್ಳುರಿಯುತ ಭಾಷಣ, ಮಲ್ಪೆಯ ಹತ್ತಿರ ಸೈಂಟ್ ಮೇರಿಸ್ ದ್ವೀಪದಲ್ಲಿ ನಡೆದ ಆಶ್ಲೀಲ ಚಟುವಟಿಕೆಗಳನ್ನು ಖಂಡಿಸಿ ಬೃಹತ್ ಪ್ರತಿಭಟನೆ ಮತ್ತು ಸಾರ್ವಜನಿಕ ಸಭೆ ನಡೆಯಿತು. ಜಿಲ್ಲಾ ಕಾರ್ಯದರ್ಶಿ ಕೆ.ಶಂಕರ್, ರಾಜ್ಯ ಸಮಿತಿ ಸದಸ್ಯರಾದ ಮಹಾಬಲ ವಡೇರಹೋಬಳಿ, ವೆಂಕಟೇಶ್ ಕೋಣಿ, ಎಚ್.ನರಸಿಂಹ, ರಾಜೀವ ಪಡುಕೋಣೆ, ಸುರೇಶ ಕಲ್ಲಾಗರ ಮುಂತಾದ ಮುಖಂಡರು ಭಾಗವಹಿಸಿದ್ದರು.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಜಿಲ್ಲಾ ಕೇಂದ್ರದಲ್ಲಿ ಮೆರವಣಿಗೆ ಮಾಡಿ ಸೂಪರ್‌ಡೆಂಟ್ ಆಫ್ ಪೋಲಿಸ್ ಕಛೇರಿ ಮುಂಭಾಗ ಪ್ರತಿಭಟನೆ ಮಾಡಿ ಮನವಿ ನೀಡಿದರು. ಸುಮಾರು 150ಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸಿದ್ದರು.

ಕೋಲಾರದಲ್ಲಿ ಜಿಲ್ಲಾಧಿಕಾರಿ ಕಛೇರಿ ಬಳಿ ಪ್ರತಿಭಟನೆ ನಡೆಸಲಾಯಿತು. ಸುಮಾರು 50 ಜನ ಭಾಗವಹಿಸಿದ್ದರು. ಅರ್ಜುನನ್, ಗಾಂಧಿನಗರ ನಾರಾಯಣಸ್ವಾಮಿ, ಗೀತಾ, ಸೂರ್ಯನಾರಾಯಣ್ ಮುಂತಾದವರು ಭಾಗವಹಿಸಿದ್ದರು.

ಕೊಪ್ಪಳ ಜಿಲ್ಲೆಯಲ್ಲಿ ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ಆಶೋಕ ಸರ್ಕಲ್‌ನಲ್ಲಿ ಮಾನವ ಸರಪಳಿ ನಡೆಸಿ ಭೂತ ದಹನ ಮಾಡಲಾಗಿದೆ. ಸುಮಾರು 100 ಜನ ಭಾಗವಹಿಸಿದ್ದರು. ಗಂಗಾವತಿಯ ಕೃಷ್ಣದೇವರಾಯ ಸರ್ಕಲ್‌ನಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ ನೇತೃತ್ವದಲ್ಲಿ ಪ್ರತಿಭಟನೆ ಮಾಡಿ ಭೂತ ದಹನ ಮಾಡಲಾಗಿದೆ.



ಯಲಬುರ್ಗಾದಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ ಮತ್ತು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ನೇತೃತ್ವದಲ್ಲಿ ಮೆರವಣಿಗೆ ಮಾಡಿದ ಸಂದರ್ಭದಲ್ಲಿ ಪೊಲೀಸರು ಬಂಧಿಸಿ, ಬಿಡುಗಡೆಯ ನಂತರ ಮತ್ತೆ ಮರವಣಿಗೆ ನಡೆಸಿ ತಹಶೀಲ್ದಾರ್‌ರವರಿಗೆ ಮನವಿ ನೀಡಿದ್ದಾರೆ.

ಮಂಡ್ಯದಲ್ಲಿ ಜಿಲ್ಲಾಧಿಕಾರಿ ಕಛೇರಿ ಬಳಿ ಧರಣಿ ನಡೆಸಲಾಗಿದೆ. ಸುಮಾರು 60 ಜನರು ಭಾಗವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಪುಟ್ಟಮಾದು, ಜಿ.ರಾಮಕೃಷ್ಣ, ದೇವಿ, ಕುಮಾರಿ, ಸುರೇಂದ್ರ, ಯಶವಂತ್ ಮುಂತಾದವರು ಭಾಗವಹಿಸಿದ್ದರು.



ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ಮತ್ತು ಶಿರಸಿಯಲ್ಲಿ ಪ್ರತಿಭಟನೆ ನಡೆದಿವೆ. ಸಿ.ಆರ್.ಶ್ಯಾನ್‌ಬಾಗ್, ಕಲ್ಪನಾ ನಾಯಕ್, ಬಂಗಾರಿ ಸಿರಿಗೌಡ, ನಾಗಪ್ಪ ನಾಯಕ್ ಮುಂತಾದವರು ಭಾಗವಹಿಸಿದ್ದರು. ಸುಮಾರು 50ಕ್ಕೂ ಅಧಿಕ ಜನರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಬಳ್ಳಾರಿ ಜಿಲ್ಲೆಯಲ್ಲಿ ಶಿರಗುಪ್ಪದಲ್ಲಿ ಪ್ರತಿಭಟನೆ ಮಾಡಿ ಮನವಿ ನೀಡಲಾಗಿದೆ. ಅಡಿವೆಪ್ಪ ಮತ್ತು ತಿಮ್ಮಯ್ಯರವರು ಪ್ರತಿಭಟನೆಯ ನೇತೃತ್ವವನ್ನು ವಹಿಸಿದ್ದರು. ಹಗರಿಬೊಮ್ಮನಹಳ್ಳಿಯಲ್ಲಿ ಫೆಬ್ರವರಿ 12ರಂದು ರಾಜ್ಯ ಸರ್ಕಾರದ ಸಚಿವ ಮುರುಗೇಶ್ ನಿರಾಣಿರವರು ಬಂದ ಸಂದರ್ಭದಲ್ಲಿ ಸಚಿವರ ಆಶ್ಲೀಲ ಚಿತ್ರ ವೀಕ್ಷಣೆ ಖಂಡಿಸಿ ಮತ್ತು ಕಲ್ಲಡ್ಕ ಪ್ರಭಾಕರ್ ಭಟ್‌ರನ್ನು ಬಂಧಿಸಬೇಕೆಂದು ಆಗ್ರಹಿಸಿ ಕಪ್ಪು ಬಾವುಟ ಪ್ರದರ್ಶಿಸಿ ಪ್ರತಿಭಟನೆಯನ್ನು ನಡೆಸಲಾಗಿದೆ. 74 ಜನರನ್ನು ಬಂಧಿಸಿದರು. ನೂರಕ್ಕೂ ಹೆಚ್ಚು ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಎಸ್.ಜಗನ್ನಾಥ್, ರಂಗಪ್ಪ ದಾಸರ್, ಬಿ.ಮಾಳಮ್ಮ, ಎ.ಕೆ.ಬಸವರಾಜು ಮುಂತಾದವರು ಭಾಗವಹಿಸಿದ್ದರು. ಕುರುಗೋಡಿನಲ್ಲಿ ಮೆರವಣಿಗೆ ನಡೆಸಿ ಮನವಿ ನೀಡಲಾಗಿದೆ. ಸುಮಾರು 80 ಜನರು ಭಾಗವಹಿಸಿದ್ದರು. ಗಾದಿಲಿಂಗಪ್ಪರವರು ಪ್ರತಿಭಟನೆಯ ನೇತೃತ್ವವನ್ನು ವಹಿಸಿದ್ದರು.

ದಾವಣಗೆರೆಯ ಜಿಲ್ಲಾಧಿಕಾರಿ ಕಛೇರಿ ಬಳಿ ಪ್ರತಿಭಟನೆ ಮಾಡಿ ಮನವಿ ನೀಡಲಾಗಿದೆ.

ಬೆಂಗಳೂರು:ಪ್ರತಿಷ್ಠಿತ ಕೈಗಾರಿಕೆಗಳಲ್ಲಿ ಸಿಐಟಿಯುಗೆ ಗೆಲುವು

ಬೆಂಗಳೂರಿನ ಪ್ರತಿಷ್ಟಿತ ಬೃಹತ್ ಕೈಗಾರಿಕೆಗಳ ಪಟ್ಟಿಯಲ್ಲಿರುವ 'ಮೈಕೋ', ಮತ್ತು 'ಐಟಿಸಿ'ಯ ಕಾರ್ಮಿಕ ಸಂಘಕ್ಕೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಸಿಐಟಿಯು ಬೆಂಬಲಿತ ತಂಡವು ಜಯಭೇರಿ ಭಾರಿಸಿದೆ.

ಬಾಷ್(ಮೈಕೋ) ಕಾರ್ಖಾನೆ

80ರ ದಶಕದ ಮೈಕೋ ಕಾರ್ಮಿಕರ ಹೋರಾಟ ರಾಜ್ಯದ ಕಾರ್ಮಿಕ ಚಳುವಳಿಗಳ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಜರ್ಮನಿ ಮೂಲದ ಬಹುರಾಷ್ಟ್ರೀಯ ಕಂಪನಿ ಮೈಕೋ(ಈಗ ಬಾಷ್) ಕಾರ್ಖಾನ'(ಆಡುಗೋಡಿ ಘಟಕ)ಯಲ್ಲಿ ಇತ್ತೀಚಿಗೆ ನಡೆದ ಚುನಾವಣೆಯಲ್ಲಿ ಸಿಐಟಿಯು ಬೆಂಬಲಿತ ಆನೆ ತಂಡ ವಿಜಯ ಸಾಧಿಸಿದೆ.

ಆಧ್ಯಕ್ಷರಾಗಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ಪ್ರಸನ್ನಕುಮಾರ್, ಉಪಾಧ್ಯಕ್ಷರಾಗಿ ಟಿ.ಶಿವಶಂಕರ್ ಮತ್ತು ಆರ್.ಎಲ್.ಮೋಹನಕುಮಾರ್, ಖಜಾಂಚಿ ಕೆ.ಕೃಷ್ಣ, ಸಹ ಕಾರ್ಯದರ್ಶಿ ಕೆ.ಕುಲಕರ್ಣಿ, ಸಂಘಟನಾ ಕಾರ್ಯದರ್ಶಿ ರಾಘವೇಂದ್ರರಾವ್ ರವರು ಚುನಾಯಿತರಾಗಿದ್ದಾರೆ. 7 ಜನರ ಪದಾಧಿಕಾರಿಗಳಲ್ಲಿ ಸಿಐಟಿಯು ತಂಡಕ್ಕೆ 6 ಸ್ಥಾನ ಲಭಿಸಿದೆ. 21 ಸ್ಥಾನ ಕಾರ್ಯಕಾರಿ ಸಮಿತಿ ಸದಸ್ಯರಲ್ಲಿ ಸಿಐಟಿಯುಗೆ 11 ಸ್ಥಾನ, 50 ಜನರ ಜನರಲ್ ಕೌನ್ಸಿಲ್ ಸ್ಥಾನದಲ್ಲಿ ಸಿಐಟಿಯುಗೆ 34 ಸ್ಥಾನ ಲಭಿಸಿದೆ.

ಐಟಿಸಿ ಕಾರ್ಖಾನೆ

ಐಟಿಸಿ ಕಾರ್ಖಾನೆಯ ಕಾರ್ಮಿಕ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಸಿಐಟಿಯು ತಂಡವು ವಿಜಯ ಸಾಧಿಸಿದೆ. ಒಟ್ಟು ಮತದಾರರು 1044 ಇದ್ದು, ಶೇ.97 ಮತದಾನವಾಗಿದ್ದು ಸಿಐಟಿಯು ತಂಡಕ್ಕೆ 65 ಶೇಕಡಾ ಮತ ಬಂದಿದೆ.

ಆಧ್ಯಕ್ಷರಾಗಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ಪ್ರಸನ್ನಕುಮಾರ್, ಪ್ರಧಾನ ಕಾರ್ಯದರ್ಶಿಯಾಗಿ ರೊನಾಲ್ಡ್ ವಾಜ್, ಖಜಾಂಚಿಯಾಗಿ ಅಬ್ದುಲ್ ಸುಬಾನ್, ಉಪಾಧ್ಯಕ್ಷರಾಗಿ ರವಿಚಂದ್ರನ್ ಮತ್ತು ಬಾಲಕೃಷ್ಣಗೌಡ, ಜಂಟಿ ಕಾರ್ಯದರ್ಶಿಯಾಗಿ ನಾಗರಾಜ್ ಮತ್ತು ಸಹಕಾರ್ಯದರ್ಶಿಯಾಗಿ ಸರವಣನ್ ಆಯ್ಕೆಯಾಗಿದ್ದಾರೆ. 7 ಜನರ ಪದಾಧಿಕಾರಿಗಳ ಸ್ಥಾನದಲ್ಲಿ 7 ಸ್ಥಾನವು ಸಿಐಟಿಯುಗೆ ಲಭಿಸಿದೆ. 24 ಜನರ ಕಾರ್ಯಕಾರಿ ಸದಸ್ಯರಲ್ಲಿ 13 ಸ್ಥಾನವು ಸಿಐಟಿಯು ತಂಡಕ್ಕೆ ಲಭಿಸಿದೆ.

ಎರಡೂ ಕಾರ್ಖಾನೆಯಲ್ಲಿ ನಡೆದ ಚುನಾವಣೆಯು ಅವಧಿಗೆ ಮುಂಚಿತವಾಗಿದ್ದು, ಹಿಂದಿನ ಅವಧಿಯಲ್ಲಿ ಎಐಟಿಯುಸಿ ಸಂಘಟನೆ ಅಧಿಕಾರದಲ್ಲಿತ್ತು. ಈಗ ನಡೆದ ಚುನಾವಣೆಯಲ್ಲಿ ಸಿಐಟಿಯು ತಂಡವು ಕಾರ್ಮಿಕರ ಮನ್ನಣೆಗೆ ಪಾತ್ರವಾಗಿದೆ.

ಸಂಪಾದಕೀಯ

ಸತ್ಯದ ನೆತ್ತಿಗೆ ಮೊಳೆಹೊಡೆಯುವವರು


ಕರ್ನಾಟಕದ ಮೂವರು ಸಚಿವರು ಸದನದೊಳಗೆ ಲೈಂಗಿಕ ಚಿತ್ರ ವೀಡಿಯೋ ನೋಡುತ್ತಾ ಸಿಕ್ಕಿಬಿದ್ದ ಪ್ರಕರಣವನ್ನು ಮುಚ್ಚಿಹಾಕುವ ಹುನ್ನಾರಗಳು ತೀವ್ರಗತಿಯಲ್ಲಿ ನಡೆಯುತ್ತಿರುವುದು ನಿಚ್ಚಳವಾಗುತ್ತಿದೆ. ದೇಶದ ಸದನದ ಇತಿಹಾಸದಲ್ಲೇ ಕಪ್ಪು ಚುಕ್ಕೆಯಾದ, ಸದನದ ಘನತೆ, ಗೌರವ, ನೈತಿಕತೆಗಳನ್ನೇ ಮಣ್ಣುಪಾಲು ಮಾಡಿದ ಈ ಘಟನೆಯ ಬಗ್ಗೆ ಎಲ್ಲರಿಗಿಂತಲೂ ಅತೀ ಹೆಚ್ಚಿನ ಕಳಕಳಿ ಮತ್ತು ನೈತಿಕತೆಯ ತಲ್ಲಣದಿಂದ ಸದನದ ಘನತೆ ಕಾಯಬೇಕಾದ ಸಬಾಧ್ಯಕ್ಷರೇ ಇಂತಹ ಆಡಳಿತ ಪಕ್ಷದ, ಸರ್ಕಾರದ ಹುನ್ನಾರಗಳಲ್ಲಿ ತೊಡಗಿ ಬಿಟ್ಟಿದ್ದಾರೆಂಬುದು ದಿಗ್ಭ್ರಮೆ ಹುಟ್ಟಿಸುವ ಸಂಗತಿಯಾಗಿದೆ. ಆರಂಭದಲ್ಲಿ ಅವರು ಕೊಟ್ಟ ನಿಷ್ಠುರ, ನಿಷ್ಪಕ್ಷಪಾತ ಕ್ರಮ ವಹಿಸುವ ಭರವಸೆಗಳು , ಮುಖ್ಯಮಂತ್ರಿ, ಮಾಜಿ ಮುಖ್ಯಮಂತ್ರಿ, ಬಿಜೆಪಿ ಅದ್ಯಕ್ಷರ ಒತ್ತಡಗಳನ್ನು ಧಿಕ್ಕರಿಸಿದ್ದಾರೆಂಬ ಸುದ್ದಿಗಳಿಂದ ಹುಟ್ಟಿಸಿದ್ದ ನಿರೀಕ್ಷೆಗಳು ನಂತರದ ದಿನಗಳಲ್ಲಿ ಹುಸಿಯಾಗಿ ಬಿಟ್ಟಿವೆ. ಅವರು ಸದನದ ಸಂಪ್ರದಾಯ, ರೂಡಿಗತ ನೀತಿಗಳನ್ನು ಪಾಲಿಸುವುದಿದ್ದರೆ ಏಕಪಕ್ಷೀಯವಾಗಿ ಸದನದ ಸಮಿತಿಯನ್ನು ರಚಿಸುವುದಾಗಿ ಘೋಷಿಸುತ್ತಿರಲಿಲ್ಲ. ಈ ಪ್ರಕರಣವನ್ನು ನಿರ್ವಹಿಸುವ ಬಗ್ಗೆ ಎಲ್ಲಾ ಪಕ್ಷಗಳೊಂದಿಗೆ ಸಮಾಲೋಚಿಸಬಹುದಿತ್ತು. ದುರಂತವೆಂದರೆ ಈಗಲೂ ವಿರೋದದ ನಡುವೆಯೇ ಸದನದ ಸಮಿತಿಗೆ ಏಕ ಪಕ್ಷೀಯವಾಗಿಯೇ ಸದಸ್ಯರನ್ನು ನೇಮಿಸಿರುವುದು, ಮಾರ್ಚ್ 15ರ ಗಡುವು ನೀಡಿರುವುದು ತನಿಖೆಯ ಅಂಶಗಳಲ್ಲಿ ಎಸಗಲಾದ ಅಪರಾಧದ ಅಂಶಕ್ಕಿಂತ ಮಾಧ್ಯಮಗಳಲ್ಲಿ ಪ್ರಸಾರ,ವೀಕ್ಷಣೆಯ ಹಿನ್ನೆಲೆ ಮೂಲಗಳ ಬಗ್ಗೆಯೇ ಇರುವುದು ಅದರ ಉದ್ದೇಶಗಳನ್ನು ಸಾರುತ್ತಿದೆ. ಮೇಲಾಗಿ ಸಚಿವರು ಅಶ್ಲೀಲ ಚಿತ್ರ ನೋಡುತ್ತಿರುವುದು ಅತ್ಯಂತ ಸ್ಪಷ್ಟವಾಗಿ ಕಣ್ಣಿಗೆ ರಾಚುತ್ತಿರುವಾಗ, ದಾಖಲೆಗಳೇ ತೆರೆದು ಕೊಂಡಿರುವಾಗ ಮತ್ತೊಂದು ತನಿಖೆಯ ಅವಶ್ಯಕತೆಯೇನಿತ್ತು?. ಬದಲಾಗಿ ಕಳಂಕಿತರ ಮೇಲೆ ಕ್ರಮವಹಿಸಿ ಸದನದ ಘನತೆ, ಮೌಲ್ಯಗಳನ್ನು ಎತ್ತಿ ಹಿಡಿಯಬೇಕಾಗಿತ್ತು. ಶಾಸಕತ್ವ ಅನರ್ಹಗೊಳಿಸಿ ಅವರಿಗಿರುವ ಸಂವಿಧಾನದತ್ತವಾದ ಅಧಿಕಾರವನ್ನು, ಅವಕಾಶಗಳನ್ನು ಬಳಸಿ ಅಂತಹ ಅನೈತಿಕ, ಜನದ್ರೋಹವನ್ನು ಸಹಿಸುವುದಿಲ್ಲ ಎಂಬ ಎಚ್ಚರಿಕೆಯ ಸಂದೇಶವನ್ನು ಸಭಾಧ್ಯಕ್ಷರು ನೀಡಬಹುದಿತ್ತು. ಇದಾವುದೂ ಇಲ್ಲದಿರುವುದು ಈಗಲೂ ಅವರು ಪ್ರಕಟಿಸಿದ ಸದನದ ಸಮಿತಿಯ ತನಿಖೆ ಕೇವಲ ನಾಟಕವೆಂದು ಸ್ಪಷ್ಟವಾಗುತ್ತದೆ. ಇದನ್ನು ವಿರೋಧಿಸಿರುವ ವಿರೋಧ ಪಕ್ಷಗಳೊಂದಿಗೆ ಸಮಾಲೋಚನೆಯನ್ನೂ ನಡೆಸುತ್ತಿಲ್ಲ. ಇದೇ ಹೊತ್ತಿನಲ್ಲಿ ಮಾಜಿ ಮಂತ್ರಿಗಳಿಂದ ವಿವರಣೆ ಕೇಳಿ ಕಾಲಾವಕಾಶ ನೀಡಲಾಗಿರುವುದು ಪ್ರಕರಣ ತಿರುಚಲು, ತಮಗೆ ಅನುಕೂಲವಾಗುವ ತಜ್ಞರ ಸಲಹೆ ಪಡೆಯಲು ಅವರಿಗೆ ನೀಡಿದ ಮುಕ್ತ ಅವಕಾಶವೇ ಆಗಿದೆ. ಇಂತಹ ವಿಳಂಬದ ಅನುಸರಣೆ ಎಷ್ಟರ ಮಟ್ಟಿಗೆ ನ್ಯಾಯ ತರಬಲ್ಲದು?. ಇದರೊಟ್ಟಿಗೆ ಮುಖ್ಯಮಂತ್ರಿ ಸದಾನಂದಗೌಡರು ಬಿಜೆಪಿ ಪಕ್ಷಧ್ಯಕ್ಷ ಈಶ್ವರಪ್ಪ ,ಮಾಜಿ ಸಿ.ಎಂ. ಯಡಿಯೂರಪ್ಪನವರು ಕಳಂಕಿತ ಮಾಜಿ ಸಚಿವರನ್ನು ಬಹಿರಂಗವಾಗಿಯೇ ಸಮರ್ಥಿಸಿಕೊಂಡು ತಿರುಗುತ್ತಿದ್ದಾರೆ. ಸಚಿವರು ರಾಜೀನಾಮೆ ಕೊಟ್ಟಿರುವುದೇ ಸರಿಯಲ್ಲವೆಂದು ಪಕ್ಷಾಧ್ಯಕ್ಷರು ತೀರ್ಪು ನೀಡಿರುವುದು ಸದನ ಸಮಿತಿಯ ತನಿಖೆಯನ್ನು ಒಂದು ಅಪಹಾಸ್ಯ ಪ್ರಹಸನಕ್ಕೆ ಈಡು ಮಾಡುವಂತಹದ್ದಾಗಿದೆ. ಜೊತೆಗೆ ಪ್ರಶ್ನೆ ಮಾಡುವವರರ ಮೇಲೆ ವಿತಂಡವಾದದ ವಾಗ್ದಾಳಿ ನಡೆಸುತ್ತಿರುವುದು ಆ ಪಕ್ಷ ತಲುಪಿರುವ ನೈತಿಕ, ರಾಜಕೀಯ, ಅದಃ ಪತನದ ಸೂಚಕವಾಗಿದೆ.

ಈ ಎಲ್ಲಾ ವರ್ತನೆಗಳಿಂದಾಗಿ ಅಪರಾಧ ಎಸಗದವರಿಗೆ ತಮ್ಮ ಕುಕೃತ್ಯಗಳನ್ನು ಸಮರ್ಥಿಸಿಕೊಳ್ಳುವ ಭಂಡ ಧೈರ್ಯ ತಂದಿದೆ. ಅದಕ್ಕಾಗಿಯೇ ಅವರು ತಾವು ನೋಡಿದ್ದು ವಿದೇಶಗಳಲ್ಲಿ ನಡೆದ ಕ್ರೌರ್ಯ ದೃಶ್ಯಗಳೇ ಹೊರತು ಬೇರೇನೂ ಅಲ್ಲವೆಂದು ಸಬೂಬು ನೀಡಿ ಸಮರ್ಥಿಸಿಕೊಳ್ಳುತ್ತಿರುವುದು ಹೇಯಕರ. ಇಡೀ ಜಗತ್ತೆ ಇವರ ಕೀಳು ಅಭಿರುಚಿಯ ವೀಡಿಯೋ ನೋಡಿರುವಾಗ ಸತ್ಯದ ನೆತ್ತಿಗೆ ಮೊಳೆ ಹೊಡೆಯುತ್ತಿರುವುದು ಸಂವಿದಾನ, ಬಿಜೆಪಿ ಪಕ್ಷ ಹೇಳುವ 'ರಾಜಧರ್ಮ' ಪಾಲಿಸಬೇಕಾದ ಚುನಾಯಿತರು, ಸಚಿವರು ತಲುಪಿರುವ ಸರ್ವ ಭ್ರಷ್ಟತೆಗೆ ಹಿಡಿದ ಕನ್ನಡಿಯಾಗಿದೆ. ಇದು ಅಪಾಯಕಾರಿಯಾಗಿದೆ.

ದುರಂತವೆಂದರೆ ಸಭಾಧ್ಯಕ್ಷ ಭೋಪಯ್ಯನವರು ಇಂತಹ ಪ್ರಕರಣ ಹೊರತಂದ ಮಾಧ್ಯಮಗಳನ್ನು ಅಭಿನಂದಿಸದೇ ಆಳುವ ಪಕ್ಷದ ಧಾಟಿಯಲ್ಲೇ ಕಲಾಪ ವರದಿಗಾರಿಕೆಯಿಂದ ಮಾಧ್ಯಮಗಳನ್ನು ಅಭಿನಂದಿಸದೇ ಆಳುವ ಪಕ್ಷದ ಧಾಟಿಯಲ್ಲೇ ಕಲಾಪ ವರದಿಗಾರಿಕೆಯಿಂದ ಅವರನ್ನೆಲ್ಲಾ ಹೊರಗಟ್ಟುವ ಸರಕಾರಿ ವಾಹಿನಿ ಬಗ್ಗೆ ಮಾತನಾಡುವುದು ಗಂಭೀರ ವಿಚಾರ. ಸದಸ್ಯರು ಸದನದೊಳಗೆ ಅಂತಹ ವರ್ತನೆ ತೋರದಂತೆ, ನೈತಿಕವಾಗಿ, ರಾಜಕೀಯ ಹಾಗೂ ಸಂವಿಧಾನಾತ್ಮಕವಾಗಿ ವರ್ತಿಸುವಂತೆ ಶಿಸ್ತು, ಎಚ್ಚರ ತರುವ ಬದಲು, ಮಾಧ್ಯಮಗಳ ಹದ್ದಿನ ಕಣ್ಣಿಗೆ ಮುಳ್ಳು ಚುಚ್ಚಿ, ನಿರ್ಭಂಧಿಸಿ ನಿರಾಂತಕ ಗೊಳಿಸುತ್ತಿರುವ ಪ್ರಸ್ತಾಪ ಈ ಸನ್ನಿವೇಶದಲ್ಲಿ ದುರುದ್ದೇಶದ್ದೂ, ಸರ್ವಾಧಿಕಾರತನದೂ ಆಗಿದೆ ಮಾತ್ರವಲ್ಲ, ಈ ಧಾಟಿಯೇ ಲಂಗುಲಗಾಮಿಲ್ಲದ ಸಂವಿಧಾನ, ಪರಂಪರೆ ವಿರೋಧಿ ಕೃತ್ಯಗಳಾಗಿವೆ. ಹೀಗೆ ಸಭಾಧ್ಯಕ್ಷರ ಸ್ಥಾನವನ್ನು ಮತ್ತೇ ಅವಡು ಅವಹೇಳನ ಮಾಡಿದ್ದಾರೆ. ಹೀಗಾಗಿ ಒಂದು ನಿರ್ಲಜ್ಯ ಪ್ಯಾಶಿಸ್ಟ್ ಮನೋಭಾವದ ಪಕ್ಷದ ಆಡಳಿತವಿರುವ ಸರ್ಕಾರ, ಅದಕ್ಕೆ ತಾಳ ಹಾಕುವ ಸಭಾಧ್ಯಕ್ಷರು ಕರ್ನಾಟಕವನ್ನೂ, ಪ್ರಜಾಪ್ರಭುತ್ವದ ಮೌಲ್ಯಗಳನ್ನು ಉಳಿಸಿಯಾರೇ?.

ಕಾಟಾಚಾರದ ಈ ಅಧಿವೇಶನ

ಇದು ಹತ್ತು ದಿನಗಳ ಅಧಿವೇಶನ, ಬಜೆಟ್ ಪೂರ್ವದ ಮಹತ್ವದ ಅಧವೇಶನ ಎಂದೆಲ್ಲಾ ಹೇಳಿದ್ದರು ಮುಖ್ಯಮಂತ್ರಿಗಳು ಆದರೆ.....ಹತ್ತು ದಿನಗಳ ಈ ವಿಧಾನಸಭಾ ಅಧಿವೇಶನ ಎರಡು ದಿನಗಳಿಗೇ ಮೊಟಕುಗೊಂಡಿತು! ಸದನದೊಳಗೆ ಬರಗಾಲದ ಬಗ್ಗೆ ಚರ್ಚೆ ಸಾಗುತ್ತಿರುವಾಗಲೇ ಮೂವರು 'ಮಹಾಮಂತ್ರಿಗಳು' ಲೈಂಗಿಕ ವೀಡಿಯೋ ನೋಡುತ್ತಾ ಹುರುಪುಗೊಂಡು ಖುಷಿಯನ್ನು ಅನುಭವಿಸುತ್ತಿದ್ದ ಹೀನ ಪ್ರಸಂಗ ಬಹಿರಂಗಗೊಂಡ ನಂತರ ಜನರ ಹಾಗೂ ವಿರೋಧ ಪಕ್ಷಗಳ ಪ್ರತಿಭಟನೆಗೆ ಉತ್ತರ ನೀಡಲಾಗದೇ, ರೂಢಿಯಂತೆ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ಚರ್ಚೆಯೂ ಇಲ್ಲದೇ ತರಾತುರಿಯಲ್ಲಿ ಎರಡು ದಿನಗಳ ಮೊದಲೆ ಅಧಿವೇಶನವನ್ನು ಅನಿರ್ದಿಷ್ಟ ಅವಧಿಗೆ ಮುಂದೂಡಿ ಸರ್ಕಾರ ಪಲಾಯನ ಮಾಡಿತು.



ಜನ ದ್ರೋಹ

ಯಾವ ಅಧಿವೇಶನ ನಾಡಿನ ಜನರ ಕಷ್ಟಕಾರ್ಪಣ್ಯಗಳ ಬಗ್ಗೆ, ನೀತಿ ನಿರೂಪಣೆಗಳ ಬಗ್ಗೆ ಸಮಗ್ರವಾಗಿ ಚರ್ಚಿಸಿ ಪರಿಹಾರೋಪಾಯದ ನಿರ್ಧಾರಗಳನ್ನು ಕೈಗೊಂಡು ಬವಣೆ ನೀಗಬೇಕಿತ್ತೋ ಆ ಅಮೂಲ್ಯ ವಿಧಾನಸಭಾ ವೇದಿಕೆ. ಅಲ್ಲಿನ ಕಲಾಪಗಳ ಅತ್ಯಮೂಲ್ಯ ಸಮಯ ಪ್ರತಿ ದಿನವೂ ವ್ಯರ್ಥವಾಗುತ್ತಲೇ ಬಂತು. ಶ್ರದ್ಧಾಂಜಲಿಗೆ ಒಂದು ದಿನ, ಸುಪ್ರೀಂಕೋರ್ಟನಿಂದ ಛೀಮಾರಿಗೀಡಾದ ಸಭಾಧ್ಯಕ್ಷ ಬೋಪಯ್ಯನವರು ರಾಜೀನಾಮೆ ನೀಡದೇ ಸ್ಥಾನದಲ್ಲಿ ಮುಂದುವರಿದದ್ದನ್ನು ಪ್ರತಿಭಟಿಸಿ ಮೂರು ದಿನ, ಉಳಿದ ಮೂರು ದಿನಗಳು 'ಬ್ಲೂ ಫಿಲಂ' ರಾಮಾಯಣ, ಇದರಲ್ಲಿ ಜ್ವಲಂತ ಪ್ರಶ್ನೆಗಳ ಬಗ್ಗೆ ಚರ್ಚಿಸಲು ಉಳಿದದ್ದೆಷ್ಟು?.... ರಾಜ್ಯದ ದುರಂತ ಮತ್ತು ಜನ ದ್ರೋಹವೆಂದರೆ ಇದೇ ಅಲ್ಲವೇ?.


ಏನೀ ಪಾಲನೆ

ರಾಜ್ಯದಲ್ಲಿನ ಹಗರಣ, ಅಕ್ರಮಗಳು
ಬ್ರಹಾಂಡ ಭ್ರಷ್ಟಾಚಾರ, ನಿಶ್ಯ
ರಾಜ್ಯಪಾಲರೊಂದಿಗೆ, ಸಂವಿಧಾನಾತ್ಮ
ಸಂಸ್ಥೆಗಳ ವಿರುದ್ಧ ಆಳುವ ಬಿಜೆಪಿಯ ಸ
ಧಾಳಿಗಳು, ಲೋಕಾಯುಕ್ತ ಸಂಸ
ದುರ್ಬಲಗೊಳಿಸುವ ಹುನ್ನಾರಗಳು, ನಿರ್ಲಕ್ಷಿ
ಜನ ಸಮಸ್ಯೆಗಳು ಇಂತಹ ಸನ್ನಿವೇಶದ
ರಾಜ್ಯಪಾಲರು ತಮ್ಮ ಭಾಷಣದಲ್ಲೂ ಚಾ
ಬೀಸುವ ಅರ್ಥಾತ್ ಸರ್ಕಾರದ ಎಂಥದೊ
ನಿಲುವನ್ನಾದರೂ ಖಚಿತವಾಗಿ ಹೇಳುವ ನಿರೀ
ಇತ್ತು... ಅದು ಆಗಲಿಲ್ಲ, ನೈತಿಕವಾ
ಅನರ್ಹಗೊಂಡಿರುವ ಸಭಾಧ್ಯಕ್ಷರ
ನಿರ್ಗಮಿಸಬೇಕಾಗಿತ್ತು. ಆದ
ಅವರ ಭಂಡತನದ, ಬಿಜೆಪಿ
ಸಂಘಪರಿವಾರದ 'ಕರ್ತವ
ಪಾಲನೆಯು' ಎದುರಿನ
ಅಸಾದ್ಯವನಿಸಿತು
ಹೀಗಿರುವಾಗಲೂ ಆರಂಭದ
ಪಕ್ಷೇತರರು ಕಪ್ಪು ಬಾವುಟ ಎತ್ತಿದರಷ್ಟೆ
ವಿರೋಧ ಪಕ್ಷಗಳಾದ ಕಾಂಗ್ರೇಸ್, ಜೆಡಿ(ಎಸ್
ಗಳಾದರೂ ಕೈಎತ್ತುವವೇ ಎಂದರೆ 'ಅಂತರಂಗ
ಅನುಸಂಧಾನದಲ್ಲಿ ಅವೆಲ್ಲಾ ಕುಂಯ್‌ಗು
'ಘನಪಾತ್ರ, ನಿರ್ವಹಿಸಿ ಮಲಗಿ ಬಿಟ್ಟ
ನಂತರದ್ದು 'ಬ್ಲೂ ಫಿಲಂ'!

ಕತ್ತು ಹಿಸುಕುವ ಕ್ರಮಗಳಿ

ಆ ಮೊದಲೇ ಸರ್ಕಾರವೇ ಹೇಳಿದ್ದಂ
ಬಜೆಟ್ ಪೂರ್ವ ಅಧಿವೇಶನವನ್ನು ಗಂಭೀ
ಹಾಗೂ ಗವುನಾರ್ಹಗೊಳಿ
ಅರ್ಥಪೂರ್ಣಗೊಳಿಸಬೇಕಿದ್ದ ಯಾ
ಕ್ರಮಗಳನ್ನು ಆಡಳಿತ ಪಕ್ಷವಾ
ಬಿಜೆಪಿಯಾಗಲೀ, ಸದಾನಂದಗೌಡ
ಸರ್ಕಾರವಾಗಲೀ ಕೈಗೊಂಡಿರಲೇ ಇಲ್ಲ. ಅದ
ಇದು ಬೇಕಿರಲೇ ಇಲ್ಲ ಹಾಗ
ಯಡಿಯೂರಪ್ಪನವರ ಬೆದರಿಕೆ ಎದುರಿನ

ಪುಟ 14ಕ್ಕೆ...



ಎಲ್ಲಾ ಶಿಕ್ಷಕರನ್ನು ಖಾಯಂ ಮಾಡಿ

ಕಂಪ್ಯೂಟರ್ ಶಿಕ್ಷಕರ ರಾಜ್ಯ ಸಮಾವೇಶದ ಆಗ್ರಹ

ವರದಿ : ವಿನೋದ್ ಶ್ರೀರಾಂಪುರ

ಯಾವುದೇ ದೇಶ ಅಭಿವೃದ್ಧಿಯಾಗಬೇಕಾದರೆ ಅದರ ಒಂದು ಪ್ರಧಾನ ಆಧಾರ ಶಿಕ್ಷಣ ಕ್ಷೇತ್ರ, ಶಿಕ್ಷಣ ಎನ್ನುವುದು ಪ್ರತಿಯೊಬ್ಬ ಪ್ರಜೆಗೂ ಸಿಗಬೇಕಾದ ಒಂದು ಮಹತ್ವದ ಅವಕಾಶ, ಅದನ್ನು ಒದಗಿಸುವುದು ಸರ್ಕಾರದ ಹಕ್ಕು ಮತ್ತು ಕರ್ತವ್ಯ. ದೇಶ ಅಭಿವೃದ್ಧಿ ಆದಂತೆ ಶಿಕ್ಷಣ ಕ್ಷೇತ್ರದಲ್ಲೂ ಬದಲಾವಣೆಗಳು ಆಗುತ್ತವೆ. ಅದೇ ರೀತಿಯಲ್ಲಿ ಶಿಕ್ಷಣ ಪಡೆಯುವ ಎಲ್ಲಾ ಮಕ್ಕಳಿಗೂ ಕಂಪ್ಯೂಟರ್ ಶಿಕ್ಷಣ ಒದಗಿಸುವ ಅಗತ್ಯ ಇಂದು ಹಿಂದೆಂದಿಗಿಂತ ಹೆಚ್ಚಿದೆ.

ಕಂಪ್ಯೂಟರ್ ಶಿಕ್ಷಣದ ಯೋಜನೆ ದೇಶದಲ್ಲಿ ಎಲ್ಲಾ ಕಡೆ ಜಾರಿಯಲ್ಲಿದೆ, ರಾಜ್ಯದಲ್ಲೂ ಜಾರಿಯಲ್ಲಿದ್ದು, ಶಿಕ್ಷಣ ನೀಡುವ ಶಿಕ್ಷಕರು ಮಾತ್ರ ಗುತ್ತಿಗೆ ಆಧಾರದಲ್ಲಿದ್ದಾರೆ. ಕಳೆದ 4 ತಿಂಗಳಿನಿಂದ ಸಂಬಳ ನೀಡಿಲ್ಲ. ವಿಮಾ, ಹೆರಿಗೆ ಸೌಲಭ್ಯ, ಭವಿಷ್ಯ ನಿಧಿ, ಸವಲತ್ತು ಇದೆ ಎಂದರೂ ಸರಿಯಾದ ದಾಖಲೆಗಳಿಲ್ಲ. ಹೆರಿಗೆ ರಜೆ, ಬೇಸಿಗೆ ರಜೆ, ದಸರಾ ರಜೆ ನೀಡುವುದಿಲ್ಲ. ಈ ಸಮಸ್ಯೆಗಳ ಪರಿಹಾರಕ್ಕಾಗಿ ಸಂಘಟಿತರಾದ ಶಿಕ್ಷಕರು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿಐಟಿಯು) ನೇತೃತ್ವದಲ್ಲಿ 12, ಫೆಬ್ರವರಿ 2012 ರಂದು ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಸಮಾವೇಶ ನಡೆಸಿ, ಆ ಮೂಲಕ ಹೋರಾಟವನ್ನು ಕೈಗೊಳ್ಳುವ ದೃಢ ತೀರ್ಮಾನ ಮಾಡಿದರು.

ರಾಜ್ಯದಲ್ಲಿ ಅಧಿಕಾರದಲ್ಲಿರುವ ಪಕ್ಷವು ಅಬ್ಬರದಿಂದ ದೇಶದಲ್ಲಿ ಎಲ್ಲೂ ಇಲ್ಲದ 'ಅಭಿವೃದ್ಧಿ' ಈ ರಾಜ್ಯದಲ್ಲಿ ಮಾತ್ರ ಆಗುತ್ತಿದೆ ಎಂದು ಹೇಳುತ್ತಿದೆ. ಆದರೆ ಯಾವುದೇ ಸರ್ಕಾರದ ಕೆಲಸ ನಡೆದರೂ ಅದು ಹೊರಗುತ್ತಿಗೆ ಅಥವಾ ಟೆಂಡರ್ ಆಧಾರದಲ್ಲಿದೆ. ಅದು ಧೀರ್ಘವಾದ ಮತ್ತು ನಿರಂತರವಾದ ಯೋಜನೆಗಳು ಇದ್ದರೂ ಅದನ್ನು ಹೊರಗುತ್ತಿಗೆ ಮೂಲಕ ಕೆಲಸ ಮಾಡಿಸಲಾಗುತ್ತಿದೆ.

ಆಂಧ್ರ ಪ್ರದೇಶದಲ್ಲಿ ಪ್ರತಿ ಶಾಲೆಗೆ ಕಂಪ್ಯೂಟರ್ ಶಿಕ್ಷಕರು ಇಬ್ಬರು ಇದ್ದಾರೆ. ಕೇರಳದಲ್ಲಿ ಕಂಪ್ಯೂಟರ್ ಶಿಕ್ಷಣವನ್ನು ಕಡ್ಡಾಯ ಮಾಡಿದ್ದು ಆ ಶಿಕ್ಷಕರನ್ನು ಖಾಯಂ ಮಾಡಲಾಗಿದೆ. ಆದರೆ ಕರ್ನಾಟಕದಲ್ಲಿ ಮಾತ್ರ ಒಂದು ಶಾಲೆಗೆ ಒಬ್ಬರೇ ಶಿಕ್ಷಕರು ಇದ್ದಾರೆ.

ಐಸಿಟಿ (Information Communication Technology) ಯೋಜನೆಯಲ್ಲಿ ಸಾವಿರಾರು ಬಿ.ಎ. ಮತ್ತು ಕಂಪ್ಯೂಟರ್ ಡಿಪ್ಲೋಮೊ ಪದವೀಧರರನ್ನು ಸರ್ಕಾರ ಅವರ ವಿದ್ಯಾಭ್ಯಾಸಕ್ಕೂ ಬೆಲೆ ಕೊಡದೆ ಕೇವಲ ರೂ.3,320ಗಳ ತಿಂಗಳ ಸಂಬಳದಲ್ಲಿ ದುಡಿಸುತ್ತಿದೆ.

ಇಡೀ ದೇಶಾದ್ಯಂತ ಎಜುಕ್ಯಾಂಪ್ ಸೆಲ್ಯುಷನ್ ಎಂಬ ಕಂಪನಿಯ ಮೂಲಕ ಕಂಪ್ಯೂಟರ್ ಶಿಕ್ಷಕರು ಉನ್ನತ ಶೈಕ್ಷಣಿಕ ಪ್ರಗತಿಗೆ ದುಡಿಯುತ್ತಿದ್ದಾರೆ. ಕಂಪ್ಯೂಟರ್ ಪಾಠದ ಜೊತೆಗೆ ಶಾಲೆಯ ಎಲ್ಲಾ ಕಛೇರಿ ಕೆಲಸಗಳಲ್ಲಿ, ಶಾಲಾ ಪರೀಕ್ಷೆಗಳಲ್ಲಿಯೂ ದುಡಿಸಲಾಗುತ್ತದೆ. ಇವರು ಇಂದಿನ ಬೆಲೆಯೇರಿಕೆಯ ದಿನಗಳಲ್ಲಿ 8 ಗಂಟೆಗಳ ಕಾಲ ವಾರದ 6 ದಿನಗಳು ಕೆಲಸ ಮಾಡುತ್ತಾರೆ.

ಶಿಕ್ಷಣ ಕ್ಷೇತ್ರದಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬದೇ ಇರುವುದರಿಂದ ಶಿಕ್ಷಕರಿಗೆ ಕೆಲಸದ ಒತ್ತಡ, ಶಾಲೆಗಳಲ್ಲಿ ಶೌಚಾಲಯಗಳಿಂದ ಹಿಡಿದು ಇತರೆ ಮೂಲ ಸೌಕರ್ಯಗಳು ಇಲ್ಲದಿರುವುದು, ಪಠ್ಯ ಪುಸ್ತಕಗಳ ಮುದ್ರಣ ವಿಳಂಬ, ಬಿಸಿಯೂಟದ ಖಾಸಗೀಕರಣ, ಖಾಸಗಿ ಮತ್ತು ಕಾನ್ವೆಂಟ್ ಶಾಲೆಗಳನ್ನು ತೆರೆಯಲು ಉತ್ತೇಜನ ನೀಡಿರುವುದು, ಶಿಕ್ಷಣ ಇಲಾಖೆಯ ಹಲವಾರು ಯೋಜನೆಗಳನ್ನು ಹೊರಗುತ್ತಿಗೆಯಲ್ಲಿ ಕೊಟ್ಟು ಅತ್ಯಂತ ಕನಿಷ್ಟ ಸೌಲಭ್ಯಗಳನ್ನೂ ಕೊಡದೆ ದುಡಿಸುತ್ತಿರುವುದು, ಆದರ್ಶ ಶಾಲೆಗಳೆಂದು ಹೇಳಿ 95 ತಾಲೂಕುಗಳಲ್ಲಿ 6 ರಿಂದ 12ನೇ ತರಗತಿಗಳಲ್ಲಿ ಗುತ್ತಿಗೆಯಾಧಾರದಲ್ಲಿ ಶಿಕ್ಷಕರನ್ನು ನೇಮಿಸಿರುವುದು ಇಂತಹವುಗಳನ್ನು ಇಲ್ಲಿ ನೋಡಬಹುದಾಗಿದೆ.



ಎಲ್ಲಾ ಯೋಜನೆಗಳು ಖಾಯಂ ಆಗಲಿ. ಸಮಾವೇಶದ ಉದ್ಘಾಟನೆಯಲ್ಲಿ ಡಾ॥ಬರಗೂರು ರಾಮಚಂದ್ರಪ್ಪ ರವರಿಂದ

ಸಮಾವೇಶದ ಉದ್ಘಾಟನೆ ಮಾಡಿ ಮಾತನಾಡಿದ ಬರಗೂರು ರಾಮಚಂದ್ರಪ್ಪನವರು "ಸರ್ಕಾರವು ತಮ್ಮ ಜವಾಬ್ದಾರಿಯನ್ನು ಖಾಸಗಿಯವರಿಗೆ ವರ್ಗಾಯಿಸುತ್ತಿದೆ. ಸರ್ಕಾರಿ ಕೆಲಸ ದೇವರ ಕೆಲಸ ಎಂದು ದೇವರ ಮೇಲೆ ಬಾರ ಹಾಕಿ ಸಚಿವರು ಸದನದಲ್ಲಿ ನೀಲಿ ಚಿತ್ರ ನೋಡುತ್ತಿದ್ದಾರೆ. ಕುರ್ಚಿ ಕೇಂದ್ರೀತ ಸರ್ಕಾರ ಇದಾಗಿದೆ.

ಖಾಸಗೀಕರಣದ ನಂತರ ಸರ್ಕಾರಿ ಕೆಲಸವನ್ನು ಹೊರಗುತ್ತಿಗೆ ನೀಡುವುದು. ಖಾಸಗೀಕರಣದ ಪರಿಣಾಮ ಬಂಡವಾಳದಾರರು ಸರ್ಕಾರ ಹೇಳಿದಂತೆ ಕೇಳುವುದಿಲ್ಲ. ಸರ್ಕಾರವೇ ಬಂಡವಾಳದಾರರು ಹೇಳಿದಂತೆ ಕೇಳುತ್ತಿದೆ. ಮಾಹಿತಿ ತಂತ್ರಜ್ಞಾನವನ್ನು ಯಾರೂ ವಿರೋಧ ಮಾಡುವುದಿಲ್ಲ. ಜ್ಞಾನ ಎಲ್ಲರಿಗೂ ಸಿಗಬೇಕು. ಜ್ಞಾನ ಮೇಲುಗೈ ಪಡೆಯಬೇಕೆ ಹೊರತು ಉದ್ದಿಮೆ ಮೈಲುಗೈ ಅಲ್ಲ. ಕಂಪ್ಯೂಟರ್ ಶಿಕ್ಷಕರ ವಿಷಯದಲ್ಲಿ ಉದ್ದಿಮೆ ಮೈಲುಗೈ ಪಡೆದಿದೆ. ಎಲ್ಲಾ ಶಾಲೆಗಳಿಗೂ ಕಂಪ್ಯೂಟರ್ ಬೇಕು. ಆದರೆ ಶಿಕ್ಷಕರಿಗೆ ಮಾತ್ರ ಸಂಬಳ ಮತ್ತು ಮೂಲಭೂತ ಸೌಲಭ್ಯಗಳು ಇಲ್ಲ. ಯಾವುದೇ ರಕ್ಷಣೆ ಇಲ್ಲದೆ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದಾರೆ. ಉಚಿತ ಶಿಕ್ಷಣ ಸಿಗುತ್ತಿಲ್ಲ ಆದರೆ ವಿದ್ಯಾರ್ಥಿಗಳಿಗೆ ಸರ್ಕಾರ ಸೈಕಲ್ ನೀಡುತ್ತದೆ. ಆಹಾರ ಒದಗಿಸುವುದಿಲ್ಲ, ಹೆಣ್ಣು ಮಕ್ಕಳಿಗೆ ಸೀರೆ ಹಂಚುತ್ತದೆ. ಪ್ರಜಾಪ್ರಭುತ್ವದ ಆಶಯಗಳನ್ನು ಗಾಳಿಗೆ ತೂರಿದೆ. ಬರ್ನಾಡ್ ಷಾ ಹೇಳಿದಂತೆ ಪ್ರಜಾಪ್ರಭುತ್ವ ಎಂಬುವುದು ಬಿಸಿಗಾಳಿ ತುಂಬಿದ ಬಲೂನು ಇದ್ದಂತೆ. ಅದು ಆಕಾಶದಲ್ಲಿ ಹಾರಾಡುತ್ತಿರುತ್ತದೆ. ನಾವು ಅದನ್ನು ನೋಡುತ್ತಿರುವ ಸಂದರ್ಭದಲ್ಲೇ ಮತ್ಯಾರೋ ನಮ್ಮ ಕಿಸೆಯನ್ನು ತೂತು ಮಾಡಿರುತ್ತಾರೆ. ಸರ್ಕಾರದ ಕಾರ್ಯಕ್ರಮಗಳು ದೂರಗಾಮಿಯಾಗಿ ಉಳಿದಿಲ್ಲ. ಬದಲಾಗಿ ತಾತ್ಕಾಲಿಕ ಅಥವಾ ಕೆಲವೇ ವರ್ಷಗಳ ಯೋಜನೆಯಾಗಿ ಮಾಡಿದೆ. ಅಧಿಕಾರದಲ್ಲಿರುವರಿಗೆ 5 ವರ್ಷ ಮಾತ್ರ ಅವಧಿ. ಆದರೆ ಜನರಿಗೆ ಸಿಗಬೇಕಾದ ಯೋಜನೆಗಳು ಧೀರ್ಘಕಾಲಿಕವಾದ ಯೋಜನೆಗಳನ್ನು ಸಹ ತಾತ್ಕಾಲಿಕ ಮಾಡಲು ಹೊರಟಿದ್ದಾರೆ.

ಶಿಕ್ಷಣಕ್ಕೆ ಸಂಬಂಧಿಸಿದ ಎಲ್ಲಾ ಯೋಜನೆಗಳು ಖಾಯಂ ಆಗಬೇಕು. ಸೌಲಭ್ಯ ಎಲ್ಲಾ ವಿದ್ಯಾರ್ಥಿಗಳಿಗೂ ಸಿಗಬೇಕು. ಆದ್ದರಿಂದ ಖಾಯಂ ಉದ್ಯೋಗಿಗಳೇ ಬೇಕು. ಸರ್ಕಾರಿ ಕಾಯ್ದೆಯ ಪ್ರಕಾರ ಒಂದು ದಿನದ ಕೂಲಿ 148 ರೂ. ಆದರೆ ನಿಮಗೆ ನೀಡುವುದು 3,220 ರೂ. ಅಂದರೆ ಸರ್ಕಾರಿ ಕಾಯ್ದೆಯನ್ನೇ ಉಲ್ಲಂಘಿಸುವ ಕೆಲಸ. ತನ್ನ ಒಪ್ಪಂದವನ್ನು ಜಾರಿ ಮಾಡಬೇಕು. ಅದು ನೈತಿಕ ವಿಚಾರ, 4 ತಿಂಗಳ ಸಂಬಳ ನೀಡದೆ ಸರ್ಕಾರ ತನ್ನ ಅನೈತಿಕತೆಯನ್ನು ಪ್ರದರ್ಶಿಸಿದೆ. ಸದಾ ಅಭದ್ರತೆಯಲ್ಲಿಡಲು ಹೊರಟಿದೆ. ಇದು ಅಮಾನವೀಯವಾದದ್ದು, ನಿಮ್ಮದೇ ಶಾಲೆಯಲ್ಲಿ 10 ಪಟ್ಟು ಸಂಬಳ ಪಡೆಯುವವರು ಇದ್ದಾರೆ. ನೆಮ್ಮದಿ ಕೇಂದ್ರದಿಂದ 12 ಕೋಟಿ ಲಾಭ ಮಾಡಿವೆ ಸರ್ಕಾರ. ಶಿಕ್ಷಣ ಉದ್ದೇಶ ಲಾಭದ ದೃಷ್ಟಿ ಅಲ್ಲ, ಜ್ಞಾನವನ್ನು ವಿಸ್ತರಿಸುವುದು. ಶಿಕ್ಷಣ ಸಂಬಂಧದಲ್ಲಿ ಕೆಲಸ ಮಾಡುವ ಎಲ್ಲಾ ಶಿಕ್ಷಕರನ್ನು ಖಾಯಂ ಮಾಡಬೇಕು. ....ನಾನು ಸದಾ ನಿಮ್ಮ ಹೋರಾಟದಲ್ಲಿ ಭಾಗವಹಿಸುತ್ತೇನೆ. ಸಂಘಟಿತರಾಗಿ ಹೋರಾಟವನ್ನು ಮುಂದುವರಿಸಿ ಕಠಿಣವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಿ ಎಂದು ತಿಳಿಸಿದರು.

ಕಾನೂನನ್ನು ಜಾರಿ ಮಾಡಿ

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ಪ್ರಸನ್ನಕುಮಾರ್ ಮಾತನಾಡಿ "ಐಸಿಟಿ ಯೋಜನೆಯು ಕೇಂದ್ರ ಸರ್ಕಾರದ ಯೋಜನೆ, ರಾಜ್ಯ ಸರ್ಕಾರಗಳು ಅದನ್ನು ಜಾರಿ ಮಾಡಬೇಕು. ಈ ಹಿಂದೆ ಇದೇ ಮಾದರಿಯಲ್ಲಿ ಮಾಹಿತಿ ಸಿಂಧು ಎಂಬ ಯೋಜನೆ ಜಾರಿಯಲ್ಲಿತ್ತು. ಸರ್ಕಾರವು ಇಂದು "ಸರ್ಕಾರಿ–ಖಾಸಗಿ–ಒಡಂಬಡಿಕೆ(ಪಿಪಿಪಿ)" ನೀತಿಯನ್ನು ಅನುಸರಿಸುತ್ತಿದೆ. ಸರ್ಕಾರದ ಅಸಂಘಟಿತ ಕಾಯ್ದೆಯ ಪ್ರಕಾರ 20 ಕ್ಕಿಂತ ಹೆಚ್ಚು ಕಾರ್ಮಿಕರು ಒಂದು ಕಡೆ ಕೆಲಸ ಮಾಡುತ್ತಿದ್ದರೆ, ಅವರಿಗೆ ಗುತ್ತಿಗೆ ಕಾರ್ಮಿಕ ಕಾನೂನು ಜಾರಿ ಮಾಡಬೇಕು. ಖಾಯಂ ಕಾರ್ಮಿಕರ ಸಂಬಳ ಗುತ್ತಿಗೆ ಕಾರ್ಮಿಕರಿಗೂ ನೀಡಬೇಕು. ಸರ್ಕಾರವೇ ಕಾನೂನು ಮಾಡಿದೆ. ಆದರೆ ಜಾರಿ ಮಾಡಲು ಹೊರಟ್ಟಿಲ್ಲ. ಎಲ್ಲಾ ಕಾನೂನುಗಳನ್ನು ಉಲ್ಲಂಘನೆ ಮಾಡುತ್ತಿದೆ. ಸರ್ಕಾರ ಕೊಳ್ಳುವವರು ಶಿಕ್ಷಕಕರು ಸರಕನ್ನಾಗಿ ಮಾಡಿದ್ದಾರೆ. ಕನ್ಸೂಮರ್ ಪ್ರೈಸ್ ಪ್ರಕಾರ ರೂ.4,284 ಇದೆ. ಅಂದರೆ ಇಂದಿನ ಒಬ್ಬ ಮನುಷ್ಯನ ಪರಿಪೂರ್ಣ ಜೀವನಕ್ಕೆ ಕನಿಷ್ಟ ಕೂಲಿ ರೂ.13,000 ನೀಡಬೇಕು. ವಿಶ್ವ ಕಾರ್ಮಿಕ ಸಂಘಟನೆ ಅಂದಾಜಿಸಿದಂತೆ ಭಾರತದಲ್ಲಿ ದೊಡ್ಡ ಪ್ರಮಾಣದಲ್ಲಿ ಅಭಿವೃದ್ಧಿಯಾಗುತ್ತಿದೆ. ಆದರೆ ಕಾರ್ಮಿಕರ ವೇತನ ಹಾಗೇ ಇದೆ. ಅವರ ಜೀವನ ಕೆಳ ಮಟ್ಟಕ್ಕೆ ಇಳಿದಿದೆ. ಆದ್ದರಿಂದ ಸಂಘಟಿತ ಹೋರಾಟವನ್ನು ಮಾಡಿ ಕೂಲಿ ಹೆಚ್ಚಿಸಬೇಕು, ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು ಎಂಬ ಆಧಾರದಲ್ಲಿ ಫೆ.28ರಂದು ದೇಶದ ಎಲ್ಲಾ ಕಾರ್ಮಿಕ ಸಂಘಟನೆಗಳು ಅಖಿಲ ಭಾರತ ಮುಷ್ಕರಕ್ಕೆ ಕರೆ ನೀಡಿವೆ. ಈ ಹೋರಾಟದಲ್ಲಿ ತಾವೆಲ್ಲರೂ ಭಾಗವಹಿಸಬೇಕೆಂದು ಕರೆ ನೀಡಿದರು.

ದೃಢ ಹೋರಾಟ ಮಾಡಿ

ಸಿಐಟಿಯು ರಾಜ್ಯ ಕಾರ್ಯದರ್ಶಿ ಎಸ್.ವರಲಕ್ಷ್ಮಿ ಮಾತನಾಡಿ ನಾವು ಒಂದು ದೃಢವಾದ ಸಂಘಟಿತ ಹೋರಾಟ ಮಾಡಿದರೆ ಮಾತ್ರ ನಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳು ಸಾಧ್ಯ, ಹಲವರು ಸರ್ಕಾರದ ಏಜೆಂಟರಂತೆ ಕೆಲಸವನ್ನು ಮಾಡಿ ನಮ್ಮ ಹೋರಾಟವನ್ನು ದಿಕ್ಕು ತಪ್ಪಿಸುತ್ತಾರೆ, ಆಗ ನಮ್ಮ ಸಮಸ್ಯೆಗಳು ಪರಿಹಾರ ಆಗುವುದಿಲ್ಲ. ಅವರು ಮಾತ್ರ ಹಣ ಮಾಡುವ ದಂಧೆಗೆ ಇಳಿಯುತ್ತಾರೆ ಎಂದು ಎಚ್ಚರಿಸಿದರು.

ಕಾರ್ಯಕ್ರಮದಲ್ಲಿ ಕಾರ್ಮಿಕ ಮುಖಂಡರಾದ ಬಿ.ಎಂ.ಭಟ್, ಸರ್ಕಾರಿ ಸಚಿವಾಲಯ ನೌಕರರ ಕಾರ್ಯದರ್ಶಿ ಮಹದೇವ ಮಠಪತಿ, ಗ್ರಾಮ ಪಂಚಾಯತಿ ನೌಕರರ ಸಂಘಟನೆಯ ರಾಜ್ಯ ಉಪಾಧ್ಯಕ್ಷರಾದ ಬಾಲಕೃಷ್ಣ ಶೆಟ್ಟಿ, ಎಸ್.ಎಫ್.ಐ.ನ ರಾಜ್ಯ ಅಧ್ಯಕ್ಷರಾದ ಅನಂತನಾಯಕ್, ಡಿವೈಎಫ್ಐನ ರಾಜ್ಯ ಕಾರ್ಯದರ್ಶಿ ಬಿ.ರಾಜಶೇಖರಮೂರ್ತಿ ಭಾಗವಹಿಸಿದರು.

ರಾಜ್ಯ ಸಮಾವೇಶದ ಮೂಲಕ ಹೊಸದಾದ ರಾಜ್ಯ ಸಂಚಾಲನಾ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಫೆ.28– ಕಾರ್ಮಿಕರ ಸಾರ್ವತ್ರಿಕ ಮುಷ್ಕರ ಮತ್ತು ಕೂಲಿಕಾರರು, ರೈತರು ಹಾಗೂ ಇತರ ದುಡಿಯುವ ಜನಗಳು

ಸಾರ್ವತ್ರಿಕ ಮುಷ್ಕರದ ಪ್ರಾಮುಖ್ಯತೆ

ಜಿ.ಎನ್ ನಾಗರಾಜ್



ರಂಗಣ್ಣ ಬಸ್ ಹತ್ತಿ ನಗರಕ್ಕೆ ಹೋಗುತ್ತಿದ್ದ. "ಏನಪ್ಪಾ ರಂಗಣ್ಣ, ಎಲ್ಲಿಗೆ ಹೊಂಟೆಪ್ಪಾ, ಬೆಳಗ್ಗೆನೇ" ಎಂದೆ. "ಏನಿಲ್ಲಾ ಸಾರು ಡಿ.ಸಿ. ಆಫೀಸ್ ಮುಂದೆ ಸ್ಟ್ರೈಕ್ ಮಾಡಾಕೆ ಹೊಂಟೇನಿ ಸಾರು" ಎಂದು ಉತ್ತರಿಸಿದ. ಹಾಗೆಯೇ ನಮ್ಮ ಕಾಲೇಜು ಹುಡುಗರೂ ಆಗಿಂದಾಗ್ಗೆ ಸ್ಟ್ರೈಕ್ ಮಾಡುತ್ತಿರುತ್ತಾರೆ. ಹೀಗೆ ಮೆರವಣಿಗೆ, ಧರಣಿ, ಸತ್ಯಾಗ್ರಹ, ಶಾಲಾ-ಕಾಲೇಜು ಬಂದ್ ಎಲ್ಲವನ್ನೂ ಮುಷ್ಕರ ಅಥವಾ ಸ್ಟ್ರೈಕ್ ಎಂದು ಜನರು ತಿಳಿದುಕೊಂಡಿದ್ದಾರೆ. ಇದು ನಮ್ಮ ದೇಶದಲ್ಲಿ ಕಾರ್ಮಿಕರು ಬಳಸುವ ಪ್ರಬಲ ಆಯುಧವಾದ ಮುಷ್ಕರ ಇತರೆಲ್ಲರ ಮೇಲೆ ಉಂಟುಮಾಡಿರುವ ಪ್ರಭಾವವನ್ನು ತೋರಿಸುತ್ತದೆ.

ಆದರೆ ಮುಷ್ಕರವೆಂದರೆ ಕಾರ್ಮಿಕರು ಉತ್ಪಾದನೆಯನ್ನು ನಿಲ್ಲಿಸುವುದು ಎಂದೇ ಅರ್ಥ. ಸರಿಸುಮಾರು ಬೇರೆ ಯಾರೂ ಕಾರ್ಮಿಕರು ಮಾಡುವಂತೆ ಉತ್ಪಾದನೆಯನ್ನು ನಿಲ್ಲಿಸಲಾರರು. ಬೇರೆ ಎಲ್ಲಾ ದುಡಿಯುವ ಜನರೂ ಕೆಲಸವನ್ನು ಮುಂದೂಡಬಹುದು, ವಿಳಂಬ(ತಡ) ಮಾಡಬಹುದು ಅಷ್ಟೆ. ಅದಕ್ಕಾಗಿಯೇ ಬಂಡವಾಳಗಾರರಿಗೆ ಮುಷ್ಕರವೆಂದರೆ ಬಹಳ ಭಯ. ಉತ್ಪಾದನೆಯನ್ನು ನಿಲ್ಲಿಸುವ ಮೂಲಕ ಅವರ ಲಾಭದ ಬುಡಕ್ಕೆ ಕೊಳ್ಳಿಯಿಡುತ್ತದೆ.

ಸಾಮಾನ್ಯವಾಗಿ ಮುಷ್ಕರವೆಂದರೆ ಒಂದು ಕಾರ್ಖಾನೆಯ ಕಾರ್ಮಿಕರು ಆ ಕಾರ್ಖಾನೆಯ ಮಾಲೀಕರಾದ ಒಬ್ಬ ಬಂಡವಾಳಶಾಹಿ ಅಥವಾ ಕೆಲವು ಬಂಡವಾಳಶಾಹಿಗಳ ವಿರುದ್ಧ ಎಂದರ್ಥ. ಅದೇ ರೀತಿ ಒಂದೇ ಉತ್ಪನ್ನವನ್ನು ತಯಾರಿಸುವ ಹಲವು ಕಾರ್ಖಾನೆಗಳ ಕಾರ್ಮಿಕರು ಏಕಕಾಲಕ್ಕೆ ಮುಷ್ಕರ ಹೂಡುವುದೂ ಉಂಟು. ಈ ಮುಷ್ಕರಗಳು ಆಯಾ ಬಂಡವಾಳಶಾಹಿಗಳಿಗೆ ನಷ್ಟವನ್ನುಂಟು ಮಾಡುತ್ತವೆ. ಅವರನ್ನು ಮಣಿಸಿ ಕಾರ್ಮಿಕರ ಹಕ್ಕುಗಳನ್ನು ಮಾನ್ಯ ಮಾಡುವಂತೆ ಮಾಡುತ್ತವೆ.

ಏಕಕಾಲಕ್ಕೆ ದೇಶದೆಲ್ಲಾ ಕೈಗಾರಿಕೆಗಳ, ವ್ಯಾಪಾರ ಸಂಸ್ಥೆ... ಇತರ ಸೇವಾ ಸಂಸ್ಥೆಗಳ ಕಾರ್ಮಿಕರು ಇಡೀ ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಮುಷ್ಕರ ಮಾಡುವುದಕ್ಕೆ ಸಾರ್ವತ್ರಿಕ ಮುಷ್ಕರ ಎನ್ನುತ್ತಾರೆ. ಇದು ಸರ್ಕಾರವೂ ಸೇರಿದಂತೆ ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧದ ಸೆಣಸಾಟ. ದೇಶದೆಲ್ಲಾ ದುಡಿಯುವ ಜನರಿಗೆ ಸಂತಸ ತರುವ ವಿಷಯ.

ಬಂಡವಾಳಶಾಹಿಯ ಬಿಗಿಮುಷ್ಟಿಯಲ್ಲಿ ಎಲ್ಲಾ ದುಡಿಯುವ ಜನರು :

ಇಂದು ನಮ್ಮ ದೇಶದ ಆರ್ಥಿಕತೆ ನಮ್ಮ ದೇಶದ ದೊಡ್ಡ ಬಂಡವಾಳಶಾಹಿಯ ಹಾಗೂ ಅವರು ಸ್ನೇಹ ಬೆಳೆಸುತ್ತಿರುವ ವಿದೇಶದ ಬೃಹತ್ ಬಂಡವಾಳಶಾಹಿಯ ಬಿಗಿ ಮುಷ್ಟಿಯಲ್ಲಿದೆ. ಕಾರ್ಮಿಕರಿಗೆ ಅತ್ಯಂತ ಕಡಿಮೆ ವೇತನ ನೀಡಿ, ಹೆಚ್ಚು ದುಡಿಸಿ ಅತಿ ಲಾಭ ಮಾಡಿಕೊಳ್ಳುವಂತೆ, ರೈತರು ಬೆಳೆದ ಬೆಳೆಗೆ ಅತಿ ಕಡಿಮೆ ಬೆಲೆ ನೀಡಿ, ಕೈಗಾರಿಕೆಯ ಉತ್ಪನ್ನಗಳಾದ ರಸಗೊಬ್ಬರ, ಕೀಟನಾಶಕ, ಉಪಕರಣಗಳನ್ನು, ಅವರ ಕುಟುಂಬಕ್ಕೆ ಬೇಕಾದ ಬಟ್ಟೆ ಬರೆಗಳನ್ನೂ ದುಬಾರಿ ಬೆಲೆಗೆ ಮಾರಿ ದುರ್ಲಾಭ ಗಳಿಸುತ್ತಾರೆ. ಕೃಷಿ ಕೂಲಿಕಾರರ, ಕಟ್ಟಡ ಕಾರ್ಮಿಕರ, ಹಮಾಲಿ, ಅಂಗಡಿ, ಹೋಟೆಲ್, ಗ್ಯಾರೇಜ್, ಇತ್ಯಾದಿ ಕಾರ್ಮಿಕರ ದುಡಿಮೆಯ ಲಾಭ ಎದುರಿಗೆ ಕಾಣುವ ಮಾಲೀಕರಿಗೆ ಸಂದರೂ ಅಂತಿಮವಾಗಿ ಅದು ಸೇರುವುದು ದೊಡ್ಡ ಬಂಡವಾಳಶಾಹಿಗಳಿಗೇ. ಯುವಕರ ನಿರುದ್ಯೋಗ, ಅರೆ ಉದ್ಯೋಗಗಳ ಸಂಕಟದ ಲಾಭವೂ, ಮಹಿಳೆಯರ ಅಸಮಾನ ವೇತನದ, ಅವರ ಮೇಲಿನ ದೌರ್ಜನ್ಯಗಳ ಲಾಭವೂ ಈ ಬೃಹತ್ ಬಂಡವಾಳಶಾಹಿಗಳಿಗೇ ಎಂಬುದು ಬಹಳ ಜನರಿಗೆ ಅರಿವಿಲ್ಲ. ರೈತರು, ಕೂಲಿಕಾರರು ಇತರೆಲ್ಲಾ ದುಡಿಯುವ ಜನರೂ ಅನೇಕ ಬಾರಿ ಪ್ರತ್ಯೇಕ ಹೋರಾಟಗಳನ್ನು ಮಾಡಿ ಬಸವಳಿದಿದ್ದಾರೆ. ತಮ್ಮ ಎದುರಿನ ಬಂಡವಾಳಶಾಹಿ ಶಕ್ತಿಗಳ ಬಲದ ಪ್ರಮಾಣವನ್ನರಿಯದೆ ಕಂಗೆಟ್ಟಿದ್ದಾರೆ. ಇಂತಹ ಸನ್ನಿವೇಶದಲ್ಲಿ ಕಾರ್ಮಿಕರು ತಮ್ಮ ಅಗಾಧ ಶಕ್ತಿಯನ್ನು ಒಗ್ಗೂಡಿಸಿ ಹೋರಾಟಕ್ಕೆ ಧುಮುಕುವ ಈ ಸಾರ್ವತ್ರಿಕ ಮುಷ್ಕರ ಅವರಿಗೆ ಸ್ಥೈರ್ಯವನ್ನು ನೀಡುತ್ತದೆ. ತಮ್ಮ ಶತ್ರುಗಳ ವಿರುದ್ಧ ತಮಗಿಂತಾ ಪ್ರಬಲವಾಗಿ ಸೆಣಸಾಡಬಲ್ಲ ಈ ಕಾರ್ಮಿಕ ಶಕ್ತಿಯ ಜೊತೆ ಕೈ ಜೋಡಿಸಿದರೆ ಮಾತ್ರ ತಮಗೆ ಜಯ ದೊರಕುತ್ತದೆ ಎಂಬ ನೆಚ್ಚಿಕೆ ಮೂಡುತ್ತದೆ. ಅದೇ ಈ ಮುಷ್ಕರದ ಮಹತ್ವ. ಆದ್ದರಿಂದ ಫೆ.28 ರಂದು ನಡೆಯುತ್ತಿರುವ ಸಾರ್ವತ್ರಿಕ ಮುಷ್ಕರವನ್ನು ಕಾರ್ಮಿಕರ ಜೊತೆ ಎಲ್ಲರೂ ಸೇರಿ ಯಶಸ್ವಿಗೊಳಿಸಬೇಕಾದ ಅಗತ್ಯವಿದೆ.

> **ತಮ್ಮ ಶತ್ರುಗಳ ವಿರುದ್ಧ ತಮಗಿಂತಾ ಪ್ರಬಲವಾಗಿ ಸೆಣಸಾಡಬಲ್ಲ ಈ ಕಾರ್ಮಿಕ ಶಕ್ತಿಯ ಜೊತೆ ಕೈ ಜೋಡಿಸಿದರೆ ಮಾತ್ರ ತಮಗೆ ಜಯ ದೊರಕುತ್ತದೆ ಎಂಬ ನೆಚ್ಚಿಕೆ ಮೂಡುತ್ತದೆ. ಅದೇ ಈ ಮುಷ್ಕರದ ಮಹತ್ವ.**

ಅಡ್ವೋಕೇಟ್ ಜನರಲ್‌ರಾಗಿದ್ದ ಶ್ರೀ ಬಿ.ವಿ.ಆಚಾರ್ಯರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದು ಹಲವು ಪ್ರಶ್ನೆಗಳನ್ನೆತ್ತಿದೆ. ಆ ಕುರಿತು ವಿವರಿಸುವಂತೆ ಸಿಪಿಐ(ಎಂ) ಪಕ್ಷ ಬರೆದ ಪತ್ರ ಹೀಗಿದೆ.

ಅಡ್ವೋಕೇಟ್ ಜನರಲ್ ಹುದ್ದೆಗೆ ತಮ್ಮ ರಾಜಿನಾಮೆ ಪತ್ರ ಕುರಿತು

ಮಾನ್ಯ ಶ್ರೀ ಬಿ.ವಿ.ಆಚಾರ್ಯರವರಿಗೆ
ಮಾಜಿ ಅಡ್ವೋಕೇಟ್ ಜನರಲ್‌ರವರು
ಬೆಂಗಳೂರು.

ಮಾನ್ಯರೇ,
ವಂದನೆಗಳು.

ನಮ್ಮ ಪಕ್ಷವು ಜನ ಸಾಮಾನ್ಯರ ಸಮಸ್ಯೆಗಳ ಬಗ್ಗೆ ಹೆಚ್ಚು ಕಳಕಳಿ ಹೊಂದಿರುವಾಗಲೇ, ಸಮಾಜದಲ್ಲಿ ನ್ಯಾಯಕ್ಕಾಗಿ ಹೋರಾಡುವವರು ಮತ್ತು ಪ್ರಾಮಾಣಿಕ ವ್ಯಕ್ತಿಗಳು ಉನ್ನತ ಹುದ್ದೆಗಳಲ್ಲಿ ಇರಬೇಕೆಂದು ಬಯಸುತ್ತದೆ. ಅಂತಹ ಒಂದು ಹುದ್ದೆ ಅಡ್ವೋಕೇಟ್ ಜನರಲ್ ಹುದ್ದೆ.

ತಾವು ಈ ಹುದ್ದೆಯನ್ನು 5ನೇ ಬಾರಿಗೆ ಸ್ವೀಕರಿಸಿ, ಈಗ ರಾಜೀನಾಮೆ ನೀಡಿರುತ್ತೀರಿ: ಪತ್ರಿಕೆಗಳಲ್ಲಿ ಬಂದ ವರದಿಯ ಪ್ರಕಾರ ಮುಖ್ಯಮಂತ್ರಿ ಹಾಗೂ ಗೃಹಮಂತ್ರಿಯವರೊಂದಿಗೆ ಮಾತುಕತೆ ನಡೆಸಿದ ನಂತರ ತಾವು ರಾಜಿನಾಮೆ ನೀಡಿರುತ್ತೀರಿ. ಕೆಲವು ಪತ್ರಿಕೆಗಳ ವರದಿಯ ಪ್ರಕಾರ ಮುಖ್ಯಮಂತ್ರಿಗಳಾಗಿರುವ ಜಯಲಲಿತಾರವರು ಅಕ್ರಮ ಆಸ್ತಿ ಗಳಿಕೆಯ ಪ್ರಕರಣದಲ್ಲಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿರುವ ಹುದ್ದೆಯನ್ನು ತಾವು ತ್ಯಜಿಸಬೇಕೆಂದು ಬಿಜೆಪಿ ಹೈಕಮಾಂಡ್ ಮತ್ತು ಕರ್ನಾಟಕ ರಾಜ್ಯ ಸರ್ಕಾರ ಒತ್ತಾಯಿಸಿವೆ ಎಂಬ ವರದಿಗಳಿವೆ. ಪತ್ರಿಕೆಗಳಲ್ಲಿ ಬಂದ ಇನ್ನೊಂದು ವರದಿಯ ಪ್ರಕಾರ 'ಎರಡು ಹುದ್ದೆಗಳಲ್ಲಿ ಮುಂದುವರಿಯುವುದು ಕಾನೂನು ಬಾಹಿರವಲ್ಲ' ಎಂದು ತಾವು ಸರಕಾರಕ್ಕೆ ಸ್ಪಷ್ಟಪಡಿಸಿರುತ್ತೀರಿ. ಹಾಗಾದರೆ ತಾವು ಯಾಕೆ ರಾಜಿನಾಮೆ ನೀಡಿದ್ದೀರಿ ಎಂದು ಸಾರ್ವಜನಿಕರು ಅನುಮಾನಕ್ಕೊಳಗಾಗಿ ವಿವಿಧ ಚರ್ಚೆಗೆ ಗ್ರಾಸವಾಗಿದೆ.

ಈ ಹಿನ್ನೆಲೆಯಲ್ಲಿ ತಾವು ಯಾಕೆ ರಾಜಿನಾಮೆ ನೀಡಿದ್ದೀರಿ ಎಂದು ಸಾರ್ವಜನಿಕವಾಗಿ ಬಹಿರಂಗ ಪಡಿಸುವುದು ಅಗತ್ಯ ಎಂದು ಸಿಪಿಐ(ಎಂ) ನಂಬುತ್ತದೆ. ಇದೊಂದು ಗಂಭೀರ ವಿಷಯವಾಗಿದೆ. ನ್ಯಾಯಾಂಗದ ವ್ಯವಹಾರಗಳಲ್ಲಿ ಸರಕಾರ ಹಸ್ತಕ್ಷೇಪ ಮಾಡಿದಂತಾಗಿದೆ ಎಂದು ಸಿಪಿಐ(ಎಂ) ಭಾವಿಸುತ್ತದೆ. ಆದ್ದರಿಂದ ದಯವಿಟ್ಟು ಸೂಕ್ತವಾದ ಹೇಳಿಕೆ ನೀಡುವುದರ ಮೂಲಕ ಸತ್ಯಾಸತ್ಯತೆಯನ್ನು ಜನರಿಗೆ ಮನದಟ್ಟು ಮಾಡಬೇಕೆಂದು ಮನವಿ ಮಾಡುತ್ತೇವೆ.

ಇಂತಿ, ತಮ್ಮ ಆತ್ಮೀಯ
ಜಿ.ವಿ. ಶ್ರೀರಾಮರೆಡ್ಡಿ
ಕಾರ್ಯದರ್ಶಿ.
16-02-2012

ಸರಕಾರದ ಕುಮ್ಮಕ್ಕು ಮಾಲೀಕರ ವಂಚನೆಗೆ ಖಂಡನೆ ಇನ್ನಷ್ಟು ಹೋರಾಟಕ್ಕೆ ಸಂಕಲ್ಪ

ಬೀಡಿ ಕಾರ್ಮಿಕರ ಸಂಘದ ದ.ಕ. ಜಿಲ್ಲಾ ಸಮ್ಮೇಳನ

ಕಡಲತಡಿ

ವರದಿ : ವಾ.ಉ.

ಯುಪಿಎ ಸರಕಾರ ಎರಡನೇ ಬಾರಿಗೆ ಆಡಳಿತ ನಡೆಸುತ್ತಿದ್ದರೂ ಬೆಲೆಯೇರಿಕೆಯನ್ನು ತಡೆಯಲು ವಿಫಲವಾಗಿದೆ. ಪದೇ ಪದೇ ಸರಕಾರ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳನ್ನು ಏರಿಸುತ್ತಿರುವುದೇ ಬೆಲೆಯೇರಿಕೆ ತಡೆಯಲು ವಿಫಲವಾಗುತ್ತಿರುವುದಕ್ಕೆ ಕಾರಣ. ಯುಪಿಎ 2ನೇ ಸರಕಾರ ಬಂದ ಅನಂತರ 17 ಬಾರಿ ಪೆಟ್ರೋಲಿಯಂ ಉತ್ಪನ್ನಗಳ ದರಗಳನ್ನು ಹೆಚ್ಚಿಸಲಾಗಿದೆ. ಪೆಟ್ರೋಲಿಯಂ ಮೇಲಿನ ತೆರಿಗೆಗಳನ್ನು ಕಡಿಮೆ ಮಾಡಬೇಕು ಎಂದು ಕಾರ್ಮಿಕ ಸಂಘಟನೆಗಳು ಒತ್ತಾಯಿಸುತ್ತಾ ಬಂದಿದ್ದರೂ, ಅದನ್ನು ಸರಕಾರ ಜಾರಿ ಮಾಡುತ್ತಿಲ್ಲ. ಬೆಲೆ ಏರಿಕೆಯ ಬಗ್ಗೆಯಾಗಲೀ ಜನತೆಯ ಬೇರೆ ಸಮಸ್ಯೆಗಳ ಬಗ್ಗೆಯಾಗಲೀ ಪ್ರಧಾನ ಮಂತ್ರಿಗಳು ಮಾತೇ ಆಡದೆ ನಿರ್ಲಕ್ಷ್ಯ ತೋರುತ್ತಿದ್ದಾರೆ. ಕಾರ್ಮಿಕ ಸಂಘಟನೆಗಳಿಂದ ಕನಿಷ್ಟ ಕೂಲಿ ಸಂಬಂಧಿಸಿ ಕೇಂದ್ರ ಕಾನೂನು ಸಚಿವರಿಗೆ ಮನವಿ ಸಲ್ಲಿಸಿದ್ದರೂ, ಇನ್ನು ಕೂಡಾ ಬೇಕಾದ ಕ್ರಮ ಕೈಗೊಂಡಿಲ್ಲ. 2010ರಲ್ಲೇ ಕನಿಷ್ಟ ಕೂಲಿ ಕರಡು ನೀತಿಯನ್ನು ಸರಕಾರ ಸಿದ್ಧಪಡಿಸಿದ್ದರೂ, ಅದನ್ನು ಇನ್ನೂ ಅಂತಿಮಗೊಳಿಸಿಲ್ಲ. ಈ ಎಲ್ಲ ಹಿನ್ನೆಲೆಯಲ್ಲಿ ಹಾಗೂ ಕಾರ್ಮಿಕರಿಗೆ ಸಿಗಬೇಕಾದ ಸವಲತ್ತುಗಳ ವಂಚನೆಯ ವಿರುದ್ಧ ಫೆಬ್ರವರಿ 28ರಂದು 11 ಕಾರ್ಮಿಕ ಸಂಘಟನೆಗಳು ಅಖಿಲ ಭಾರತ ಮುಷ್ಕರವನ್ನು ಹಮ್ಮಿಕೊಂಡಿವೆ ಎಂಬುದಾಗಿ ಸಿಐಟಿಯು ಅಖಿಲ ಭಾರತ ಬೀಡಿ ವರ್ಕರ್ಸ್ ಫೆಡರೇಶನ್ನಿನ ಅಧ್ಯಕ್ಷ ಬಿ.ಮಾಧವ ಹೇಳಿದರು. ಅವರು ಮೂಡಬಿದ್ರೆಯ ಕಾ॥ ಜೆ.ವೀರಪ್ಪ ನಗರದ ಕಾ॥ ಕೆ.ಮಂಜಪ್ಪ ವೇದಿಕೆಯಲ್ಲಿ ನಡೆದ ದ.ಕ. ಜಿಲ್ಲಾ ಬೀಡಿ ವರ್ಕರ್ಸ್ ಫೆಡರೇಶನ್ನಿನ ಜಿಲ್ಲಾ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಬೀಡಿ ಕಾರ್ಮಿಕರಿಗೆ ಸಿಗಬೇಕಾದ ರಜಾ ಸಂಬಳ, ಪಿಂಚಣಿ, ಬೋನಸ್, ಲಾಗ್‌ಬುಕ್, ಗುರುತು ಚೀಟಿ, ವಿದ್ಯಾರ್ಥಿವೇತನ ಎಲ್ಲದಕ್ಕೂ ಸರ್ಕಾರದ ನೀತಿಗಳ ಕುಮ್ಮಕ್ಕಿನಿಂದ ಮಾಲಕರು ವಂಚನೆ ಮಾಡುತ್ತಿದ್ದಾರೆ. ಅತ್ಯಂತ ವಂಚನೆ, ಶೋಷಣೆಗೊಳಗಾದ ಕಾರ್ಮಿಕರು ಬೀಡಿ ಕಟ್ಟುವವರಾಗಿದ್ದಾರೆ. ಬೀಡಿ ಕಾರ್ಮಿಕರಿಗೆ ಹಲವಾರು ರೀತಿಯಲ್ಲಿ ನಡೆಯುತ್ತಿರುವ ವಂಚನೆಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗದೆ ಇರುವ ಸಮಸ್ಯೆ ನಮ್ಮ ಮುಂದಿದೆ. ಆದಾಗ್ಯೂ ಹಲವಾರು ವರ್ಷಗಳ ತುಟ್ಟಿಭತ್ತೆ ಬಾಕಿಯನ್ನು ದೀರ್ಘ ಹೋರಾಟದ ಮೂಲಕ ಸಿಐಟಿಯು ಸಂಘಟನೆಗೆ ನಾಲ್ಕೂವರೆ ಲಕ್ಷ ಬೀಡಿ ಕಾರ್ಮಿಕರಿಗೆ ಕೊಡಿಸಲು ಸಾಧ್ಯವಾಗಿದೆ. ಬೀಡಿ ಕಾರ್ಮಿಕರಿಗೆ ನಡೆಯುವ ಎಲ್ಲ ವಂಚನೆಗಳನ್ನು ಬಯಲಿಗೆಳೆದು ಸಲ್ಲಬೇಕಾದ ಸವಲತ್ತುಗಳನ್ನು ಒದಗಿಸಿಕೊಡಲು ಇನ್ನಷ್ಟು ಹೋರಾಟಗಳನ್ನು ಆಯೋಜಿಸಲು ಸಂಘಟನೆ ಕರೆಕೊಡಲಿದೆ ಎಂದು ಬಿ. ಮಾಧವ ಹೇಳಿದರು.



ಮುಖ್ಯ ಅತಿಥಿಯಾಗಿ ಭಾಗವಹಿಸಿದ ಸಿಐಟಿಯು ಅಖಿಲ ಭಾರತ ಕಾರ್ಯದರ್ಶಿಗಳಲ್ಲೊಬ್ಬರಾದ ಎಸ್.ವರಲಕ್ಷ್ಮಿ ಮಾತನಾಡಿ ದೇಶದಲ್ಲಿ ಹುಟ್ಟಿದ ಒಂದು ಸಾವಿರ ಮಕ್ಕಳಲ್ಲಿ 50 ಮಂದಿ ಅಪೌಷ್ಟಿಕತೆಯಿಂದ ಸಾಯುತ್ತಿದ್ದಾರೆ. 100ರಲ್ಲಿ 80 ಮಹಿಳೆಯರು ಕಬ್ಬಿಣದಂಶದ ಕೊರತೆ ಎದುರಿಸುತ್ತಿದ್ದಾರೆ. ಗರ್ಭಿಣಿ ಮಹಿಳೆಗೆ ಪೌಷ್ಟಿಕಾಹಾರದ ಕೊರತೆಯಿಂದಾಗಿ ಹುಟ್ಟುವ ಮಕ್ಕಳು ಅಪೌಷ್ಟಿಕತೆಗೆ ಒಳಗಾಗುತ್ತಿದ್ದಾರೆ. ಕಾರ್ಮಿಕ ಹಾಗೂ ಬಡಜನರಿಗೆ ದುಡಿಮೆಗೆ ತಕ್ಕ ಕನಿಷ್ಟ ಕೂಲಿಯೇ ಸಿಗುತ್ತಿಲ್ಲ. ಕನಿಷ್ಟ ಕೂಲಿ ದೊರೆಯದಿರುವುದೇ ಮಹಿಳೆಯರ ಮತ್ತು ಮಕ್ಕಳ ಅನಾರೋಗ್ಯ, ಅಪೌಷ್ಟಿಕತೆಗೆ ಕಾರಣ ಎಂದು ಅವರು ವಿವರಿಸಿದರು.

ನಮ್ಮ ದೇಶ ಮಾಲಕರ, ಶ್ರೀಮಂತರ, ಬಂಡವಾಳಶಾಹಿಗಳ ಕೈಯಲ್ಲಿದೆ. ಅವರನ್ನು ಓಲೈಸಲು ಸರ್ಕಾರಗಳು ನೀತಿಗಳನ್ನು ರೂಪಿಸುತ್ತಿವೆ. ಇದನ್ನು ಕಾರ್ಮಿಕ ವರ್ಗ ಒಕ್ಕೊರಲಿನಿಂದ ವಿರೋಧಿಸಬೇಕೆಂದು ವರಲಕ್ಷ್ಮಿ ಕರೆ ನೀಡಿದರು.

ಉದ್ಘಾಟನಾ ಸಭೆಯನ್ನುದ್ದೇಶಿಸಿ ಹಿರಿಯ ರೈತ ಕಾರ್ಮಿಕ ನಾಯಕ ಕೆ.ಆರ್.ಶ್ರೀಯಾನ್, ಬೀಡಿ ಕಾರ್ಮಿಕರ ರಾಜ್ಯ ಫೆಡರೇಶನ್ನಿನ ಪ್ರಧಾನ ಕಾರ್ಯದರ್ಶಿ ಸಯ್ಯದ್ ಮುಜೀಬ್ ಕೂಡಾ ಮಾತನಾಡಿದರು.

ದ.ಕ. ಜಿಲ್ಲಾ ಬೀಡಿ ಕಾರ್ಮಿಕ ಸಂಘಟನೆಯ ಅಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ ಉದ್ಘಾಟನಾ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಸಮಿತಿ ಕಾರ್ಯದರ್ಶಿ ಸುಕುಮಾರ್, ಕಾರ್ಮಿಕ ಮುಖಂಡರಾದ ಯು.ಬಿ. ಲೋಕಯ್ಯ, ವಸಂತ ಆಚಾರಿ, ಕಾಸರಗೋಡಿನ ಬಾಲಕೃಷ್ಣನ್, ಉಡುಪಿಯ ರಮೇಶ ಮೆಂಡನ್ ಮುಂತಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಜಿಲ್ಲಾ ಸಮ್ಮೇಳನದ ಸ್ವಾಗತ ಸಮಿತಿಯ ಗೌರವಾಧ್ಯಕ್ಷರಾದ ಕೆ.ಯಾದವ ಶೆಟ್ಟಿ ಸ್ವಾಗತಿಸಿದರು. ಕಾರ್ಯಾಧ್ಯಕ್ಷರಾದ ರಮಣಿ ಮೂಡಬಿದ್ರೆ ಧನ್ಯವಾದ ಸಲ್ಲಿಸಿದರು.

ಸಮ್ಮೇಳನದ ಧ್ವಜಾರೋಹಣವನ್ನು ಬೀಡಿ ಕಾರ್ಮಿಕ ಸಂಘಟನೆಯ ಹಿರಿಯ ಮುಖಂಡ ಯು.ಬಿ.ಲೋಕಯ್ಯ ನೆರವೇರಿಸಿದರು. ಉದ್ಘಾಟನಾ ಸಭೆಯಲ್ಲಿ ಸಾವಿರಕ್ಕೂ ಮೀರಿದ ಕಾರ್ಮಿಕರು, ಹಿತೈಷಿಗಳು ಸಭಾಂಗಣದಲ್ಲಿ ಕಿಕ್ಕಿರಿದು ಭಾಗವಹಿಸಿದ್ದರು. ಅದಕ್ಕೂ ಮೊದಲು ಮೂಡಬಿದ್ರಿಯ ಸ್ವರಾಜ್ ಮೈದಾನದಿಂದ 2 ಕಿ.ಮೀ. ದೂರದ ಸಮ್ಮೇಳನ ಸಭಾಂಗಣದವರೆಗೆ ಬೃಹತ್ ಮೆರವಣಿಗೆ ನಡೆದಿದ್ದು, ಮೆರವಣಿಗೆಯ ಮುಂಭಾಗದಲ್ಲಿ ಸಮವಸ್ತ್ರದ ಪುರುಷರ ಕೆಂಪು ಪಡೆ ಹಾಗೂ ಕೆಂಪು ಸೀರೆಯ ಮಹಿಳಾ ತಂಡದ ವಾದ್ಯ ಘೋಷದ ನಡೆ ಮೂಡಬಿದ್ರಿಯ ಜನತೆಗೆ ವಿಸ್ಮಯ ಮೂಡುವಂತೆ ಸಾಗಿ ಬಂತು.

ಕಾನೂನು ಬದ್ಧ ಸವಲತ್ತು ನೀಡದೇ ವಂಚನೆ

ಮೆಸ್ಕಾಂ ವಿರುದ್ಧ ಸಿಐಟಿಯು ಪ್ರತಿಭಟನೆ

ಮೆಸ್ಕಾಂ ಗುತ್ತಿಗೆ ನೌಕರರನ್ನು ಖಾಯಂಗೊಳಿಸುವಂತೆ ಒತ್ತಾಯಿಸಿ 'ಮೆಸ್ಕಾಂ ನಾನ್ ಪರ್ಮನೆಂಟ್ ನೌಕರರ ಸಂಘ' ಹಾಗೂ ಸಿಐಟಿಯು ವತಿಯಿಂದ ಮಂಗಳೂರಿನ ಮೆಸ್ಕಾಂ ಕಚೇರಿ ಎದುರು ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು.



ಮೆಸ್ಕಾಂ ಮಂಗಳೂರು ವ್ಯಾಪ್ತಿಯಲ್ಲಿ ಸೆಕ್ಷನ್ ಆಪರೇಟರ್ಸ್ ಆಗಿ ಕೆಲಸ ನಿರ್ವಹಿಸುತ್ತಿರುವ ಗುತ್ತಿಗೆ ಕಾರ್ಮಿಕರಿಗೆ ನೀಡಬೇಕಾದ ಕಾನೂನು ಬದ್ಧ ಸವಲತ್ತುಗಳನ್ನು ನೀಡದೆ ಶೋಷಿಸಲಾಗುತ್ತಿದೆ; ಕೇವಲ ರೂ. 3000 ಸಂಬಳ ನೀಡಿ ವಂಚಿಸಲಾಗುತ್ತಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಮೆಸ್ಕಾಂ ನಾನ್ ಪರ್ಮನೆಂಟ್ ನೌಕರರ ಸಂಘದ ಅಧ್ಯಕ್ಷ ಬಿ.ಎಂ.ಭಟ್, ಸಿಐಟಿಯು ದ.ಕ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ, ಸಿಐಟಿಯು ಮುಖಂಡರಾದ ಸುನೀಲ್ ಕುಮಾರ್ ಬಜಾಲ್, ಶಿವಮೊಗ್ಗದ ಶಿವಶಂಕರ್ ಮಾತನಾಡಿದರು.

ಕನಿಷ್ಟ ವೇತನ ಕಾಯಿದೆ 1948ರ ಆಧಾರದ ಮೇಲೆ ಪರಿಣಿತ ನೌಕರರಿಗೆ ಸಿಗಬೇಕಾದ ಎಲ್ಲ ಸೌಲಭ್ಯ ನೀಡಬೇಕು. 2 ತಿಂಗಳಿಂದ ಬಾಕಿ ಇರುವ ಸಂಬಳ ಪಾವತಿ ಮಾಡಬೇಕು. ಮಾಪನ ಓದುವವರಿಗೆ ಕನಿಷ್ಟ ವೇತನ ಜೊತೆ ಪ್ರಯಾಣ ಭತ್ತೆ, ದಿನಭತ್ತೆ ನೀಡಬೇಕು. ಪಿಎಫ್, ಇಎಸ್ಐ, ಉದ್ಯೋಗ ಹಾಗೂ ವೇತನ ಚೀಟಿ ನೀಡಬೇಕು ಎಂಬ ಬೇಡಿಕೆಗಳನ್ನು ಸಲ್ಲಿಸಲಾಯಿತು.

ಪ್ರತಿಭಟನೆಯ ನೇತೃತ್ವವನ್ನು ಮೆಸ್ಕಾಂ ನಾನ್ ಪರ್ಮನೆಂಟ್ ನೌಕರರ ಸಂಘದ ಪದಾಧಿಕಾರಿಗಳು ವಹಿಸಿದ್ದರು.

ಸಮ್‌ಝೌತಾ ಎಕ್ಸ್‌ಪ್ರೆಸ್ ಭಯೋತ್ಪಾದಕ ಬಾಂಬ್ ಸ್ಫೋಟದಲ್ಲಿ ಭಾಗಿಯಾಗಿದ್ದ ಎಂಬ ಅಪಾದನೆಯ ಮೇಲೆ ಇನ್ನೊಬ್ಬ ಆರೆಸ್ಸೆಸ್ ಕಾರ್ಯಕರ್ತ ಬಂಧಿತನಾಗಿದ್ದಾನೆ. ಆರೆಸ್ಸೆಸ್, ಮತ್ತೆ, ಹಿಂದೆ ಗೋಡ್ಸೆ ವಿಷಯದಲ್ಲಿ ಹೇಳಿದಂತೆ, ಇಂತಹ ಕೆಲವೇ 'ದಾರಿ ತಪ್ಪಿದವರ' ಕೃತ್ಯಗಳಿಗೆ ಸಂಘಟನೆಯನ್ನು ಇಡಿಯಾಗಿ ದೂಷಿಸಬಾರದು ಎಂದು ಉಪದೇಶ ನೀಡಬಹುದು. ಆದರೆ ಇದು ಭಾರತದ ಆಧುನಿಕ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣರಾಜ್ಯವನ್ನು ಉನ್ಮತ್ತ ಧಾರ್ಮಿಕ ಅಸಹಿಷ್ಣುತೆಯ ಆರೆಸ್ಸೆಸ್ ನೋಟದ ಒಂದು 'ಹಿಂದೂ ರಾಷ್ಟ್ರ'ವಾಗಿ ಪರಿವರ್ತಿಸುವ ಸೈದ್ಧಾಂತಿಕ ಬೇರುಗಳ ಪ್ರತಿಫಲನ ಎಂಬುದಂತೂ ಖಂಡಿತ. ಇದನ್ನು ಸೋಲಿಸಲೇಬೇಕು.

ದುಷ್ಟ ಹಿಂದುತ್ವ ಭಯೋತ್ಪಾದಕ ಸಂಚುಗಳು

'ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಫೆಬ್ರವರಿ 16, 2012 ರ ಸಂಚಿಕೆಯ ಸಂಪಾದಕೀಯದಿಂದ

ಇನ್ನೊಂದು ಆರೆಸ್ಸೆಸ್ ಮತ್ತು ಅದರ ಪರಿವಾರದವರು ಬೀಸಿದ ಭಯೋತ್ಪಾದಕ ಜಾಲದ ಕೊಂಡಿ ಸಾಬೀತಾಗಿದೆ. ರಾಷ್ಟ್ರೀಯ ತನಿಖಾ ಏಜೆಂಸಿ(ಎನ್‌ಐಎ) ಕಮಲ್ ಚೌಹಾನ್ ಎಂಬಾತನನ್ನು ಬಂಧಿಸಿದೆ. ಆತ ಫೆಬ್ರುವರಿ 18, 2007ರ ಮಧ್ಯರಾತ್ರಿಯ ವೇಳೆಗೆ ದಿಲ್ಲಿ-ಲಾಹೋರ್ ರೈಲಿನ 68 ಮುಗ್ಧ ಪ್ರಯಾಣಿಕರ ಜೀವಬಲಿ ತೆಗೆದುಕೊಂಡ ಸಮ್‌ಝೌತಾ ಎಕ್ಸ್‌ಪ್ರೆಸ್ ಭಯೋತ್ಪಾದಕ ಬಾಂಬ್ ಸ್ಫೋಟದಲ್ಲಿ ಭಾಗಿಯಾಗಿದ್ದ ಎಂಬ ಅಪಾದನೆಯ ಮೇಲೆ ಬಂಧಿತನಾಗಿದ್ದಾನೆ.

ಮಧ್ಯಪ್ರದೇಶದ ಈ ದೀರ್ಘಕಾಲದ ಆರೆಸ್ಸೆಸ್ ಕಾರ್ಯಕರ್ತನ ಬಂಧನ ಈ ಮೊಕದ್ದಮೆಯಲ್ಲಿ ಎರಡನೆಯದ್ದು. ಈ ಹಿಂದೆ ಜೂನ್ 2010ರಲ್ಲಿ ಲೋಕೇಶ ಶರ್ಮ ಎಂಬಾತನನ್ನು ಈ ಭಯೋತ್ಪಾದಕ ದಾಳಿಯನ್ನು ಯೋಜಿಸಿದ ಒಂದು ಸಭೆಯಲ್ಲಿ ಭಾಗವಹಿಸಿದ್ದ ಎಂಬ ಆಪಾದನೆಯ ಮೇಲೆ ಬಂಧಿಸಲಾಗಿತ್ತು. ಆತನೂ ಮಧ್ಯಪ್ರದೇಶದವನೇ. ಈಗ ತನಿಖಾ ಏಜೆಂಸಿಗಳು ಆತ ನಿಜವಾದ ಬಾಂಬು ದಾಳಿಯಲ್ಲಿ ಸ್ವತಃ ಭಾಗಿಯಾಗಿದ್ದ ಎಂದು ಹೊಸ ಆರೋಪಗಳನ್ನು ರೂಪಿಸುತ್ತಿವೆ ಎಂದು ಮಾಧ್ಯಮ ವರದಿಗಳು ಸೂಚಿಸುತ್ತಿವೆ.

ಸಮ್‌ಝೌತಾ ಎಕ್ಸ್‌ಪ್ರೆಸ್ ಬಾಂಬು ದಾಳಿಯಲ್ಲಿ ಆರೆಸ್ಸೆಸ್ ಮತ್ತು ಅದರ ಪರಿವಾರದವರ ಪಾತ್ರವನ್ನು ಸೂಚಿಸುವ ನಿರ್ಣಾಯಕ ಸಂಕೇತಗಳು ಈ ಸಂಘಟನೆಗಳಿಗೂ ಮಾಲೆಗಾಂವ್(ಸಪ್ಟಂಬರ್ 8, 2008), ಹೈದರಾಬಾದಿನ ಮಕ್ಕಾ ಮಸೀದಿ(ಮೇ 18, 2007) ಮತ್ತು ಅಜ್ಮೇರ್ ಶರೀಫ್‌ನ ದರ್ಗಾದಲ್ಲಿ (ಅಕ್ಟೋಬರ್ 11, 2007) ನಡೆಸಿದ ಭಯೋತ್ಪಾದಕ ದಾಳಿಗಳಿಗೂ ಸಂಬಂಧವಿದೆ ಎಂದು ತನಿಖೆಗಳಲ್ಲಿ ಸಾಬೀತಾದ ಮೇಲೆ ಸಿಕ್ಕವು. ಹಿಂದುತ್ವ ಭಯೋತ್ಪಾದನೆಯ ಈ ಜಾಲವನ್ನು ಸೃಷ್ಟಿಸುವಲ್ಲಿ ಆರೆಸ್ಸೆಸ್ ಸಂಪರ್ಕವನ್ನು ಇವು ಸಾಬೀತು ಮಾಡಿವೆ.

ಎನ್‌ಡಿಎ ತಂದ ಭ್ರಮನಿರಸನ?

ಇದಕ್ಕೆ ಬಹಳ ಮೊದಲೇ, ಅಕ್ಟೋಬರ್ 13, 2008ರ ರಾಷ್ಟ್ರೀಯ ಸಮಗ್ರತಾ ಮಂಡಳಿಯ ಒಂದು ಸಭೆಯಲ್ಲಿ ಸಿಪಿಐ(ಎಂ) ಈ ಸಂಗತಿಯತ್ತ ಕೇಂದ್ರ ಸರಕಾರದ ಗಮನವನ್ನು ಸೆಳೆದಿತ್ತು. "ಕಳೆದ ಕೆಲವು ವರ್ಷಗಳಲ್ಲಿ ಪೋಲೀಸ್ ತನಿಖೆಗಳು ಭಜರಂಗ ದಳ ಅಥವ ಇತರ ಆರೆಸ್ಸೆಸ್ ಕಬಂಧ ಬಾಹುಗಳ ಶಾಮೀಲನ್ನು ಗಮನಿಸಿವೆ-2003ರಲ್ಲಿ ಮಹಾರಾಷ್ಟ್ರದ ಪರ್ಬಾನಿ, ಜಾಲ್ನಾ ಮತ್ತು ಜಲಗಾಂವ್ ಜಿಲ್ಲೆಗಳಲ್ಲಿ; 2005ರಲ್ಲಿ ಉತ್ತರ ಪ್ರದೇಶದ ಮಾವು ಜಿಲ್ಲೆಯಲ್ಲಿ; 2006ರಲ್ಲಿ ನಾಂದೇಡಿನಲ್ಲಿ; ಜನವರಿ 2008ರಲ್ಲಿ ತೆಂಕಾಶಿ, ತಿರುನಲ್ವೇಲಿಯಲ್ಲಿ; ಆಗಸ್ಟ್ 2008ರಲ್ಲಿ ಕಾನ್ಪುರದಲ್ಲಿ ಇತ್ಯಾದಿ, ಇತ್ಯಾದಿ. ಇಂತಹ ಎಲ್ಲ ಕೇಸುಗಳನ್ನು ಅಷ್ಟೇ ಪ್ರಮಾಣದ ತೀವ್ರತೆಯಿಂದ ನಿಷ್ಪಕ್ಷಪಾತದಿಂದ ತನಿಖೆ ಮಾಡಿದರೆ ಮಾತ್ರವೇ ನಮ್ಮ ದೇಶದ ಆಂತರಿಕ ಭದ್ರತೆಯನ್ನು ಬಲಪಡಿಸಲು ಸಾಧ್ಯ" ಎಂದು ಸಿಪಿಐ(ಎಂ) ಹೇಳಿತ್ತು.

ಇದನ್ನು ಅನುಸರಿಸಿ ಮತ್ತು ನಂತರ ದೊರೆತ ಸಂಕೇತಗಳಿಂದ, ಕೇಂದ್ರ ಗೃಹ ಮಂತ್ರಾಲಯ ಜುಲೈ 2010ರ ವರದಿ ಪತ್ರ ಎನ್‌ಐಎ ಸಮ್‌ಝೌತಾ ಎಕ್ಸ್‌ಪ್ರೆಸ್ ಮೇಲಿನ ಭಯೋತ್ಪಾದಕ ದಾಳಿಯ ತನಿಖೆ ನಡೆಸುವುದಾಗಿ ಪ್ರಕಟಿಸಿತು. ಈ ತನಿಖೆಗಳೇ ಪ್ರಸಕ್ತ ಬಂಧನಗಳಿಗೆ ದಾರಿ ಮಾಡಿಕೊಟ್ಟಿರುವುದು. ಮಾಧ್ಯಮ ವರದಿಗಳ ಪ್ರಕಾರ, ಆರೆಸ್ಸೆಸ್ ಮುಖಂಡರ ಒಂದು ಪ್ರಧಾನ ಗುಂಪು ಸ್ಫೋಟಕಗಳ ತಯಾರಿಯಲ್ಲಿ ತೊಡಗಿತ್ತು ಮತ್ತು 2002ರಲ್ಲಿ ಆರಂಭವಾದ ಹಿಂದುತ್ವ ಭಯೋತ್ಪಾದಕ ದಾಳಿಗಳ ಒಂದು ಸರಣಿಯನ್ನು ಯೋಜಿಸಿತ್ತು ಎಂಬುದು ತನಿಖೆಗಳಿಂದ ಪ್ರಕಟವಾಗಿದೆ.

ಆಗ ಆಳ್ವಿಕೆ ನಡೆಸುತ್ತಿದ್ದ ವಾಜಪೇಯಿ ನೇತೃತ್ವದ ಕೇಂದ್ರ ಸರಕಾರ ಪ್ರಧಾನ ಹಿಂದುತ್ವ ಅಜೆಂಡಾವನ್ನು ದುರ್ಬಲಗೊಳಿಸಿತು (ಅಯೋಧ್ಯೆಯಲ್ಲಿ ದೇವಸ್ಥಾನ ನಿರ್ಮಾಣದಂತಹ ಪ್ರಶ್ನೆಗಳನ್ನು ಸರಕಾರದ ಉಳಿವಿಗಾಗಿ ತನ್ನ ಎನ್‌ಡಿಎ ಮಿತ್ರರನ್ನು ತುಷ್ಟೀಕರಿಸಲು ಹಿನ್ನೆಲೆಗೆ ಸರಿಸಿ) ಎಂದೂ, ಮತ್ತು 2002ರಲ್ಲಿ ಗುಜರಾತಿನಲ್ಲಿ ನಡೆದ ಕೋಮು



ನರಹತ್ಯಾಕಾಂಡವನ್ನು ದೇಶವ್ಯಾಪಿಯಾಗಿ ಪುನರಾವರ್ತಿಸಲು ನಿರಾಕರಿಸಿದಂತೆ ಕಾಣಬಂದುದರಿಂದ ಆರೆಸ್ಸೆಸ್‌ನ ಕೆಲವು ವಿಭಾಗಗಳಲ್ಲಿ ಉಂಟಾದ ಭ್ರಮನಿರಸನ ಉಗ್ರ ಹಿಂದುತ್ವ ಭಯೋತ್ಪಾದನೆಯ ಉದಯಕ್ಕೆ ಕಾರಣ ಎಂದು ನಂಬಲಾಗಿದೆ.

ಭಯೋತ್ಪಾದನೆಯ ಇತಿಹಾಸ

ಆರೆಸ್ಸೆಸ್, ಖಂಡಿತವಾಗಿಯೂ, ಇಂತಹ ಭಯೋತ್ಪಾದಕ ಕೃತ್ಯಗಳು ಕೆಲವೇ 'ದಾರಿ ತಪ್ಪಿದವರ' ಕ್ರಿಯೆಗಳ ಫಲಿತಾಂಶವಷ್ಟೇ ಎಂದು ಮತ್ತೊಮ್ಮೆ ಸಾರುತ್ತದೆ. ಅದಕ್ಕೆ ಸಂಘಟನೆಯನ್ನು ಇಡಿಯಾಗಿ ದೂಷಿಸಬಾರದು ಎಂದೂ ಆಗ್ರಹಿಸುತ್ತದೆ. ಇದರಲ್ಲೇನೂ ಮೌಲಿಕತೆ ಇಲ್ಲ. ಮಹಾತ್ಮ ಗಾಂಧಿಯವರ ಹತ್ಯೆಯ ನಂತರ ನಾಥೂರಾಂ ಗೋಡ್ಸೆಯ ಬಗ್ಗೆ ಹೇಳಿದ್ದೂ ಇದನ್ನೇ. ಆದರೆ ಅದೇ ಗೋಡ್ಸೆಯ ಸೋದರ, ತಮ್ಮ ಕುಟುಂಬದ ಎಲ್ಲ ಸೋದರರೂ ಆರೆಸ್ಸೆಸ್‌ನ ಸಕ್ರಿಯ ಕಾರ್ಯಕರ್ತರು ಎಂದು ಒಂದು ಮಾಧ್ಯಮ ಸಂದರ್ಶನದಲ್ಲಿ ಹೇಳಿರುವ ದಾಖಲೆಯಿದೆ.

ಆರೆಸ್ಸೆಸ್‌ನ ಮತ್ತು ಅದರ ಕಾರ್ಯನಿರ್ವಹಣೆಯ ವಿಧಾನದ ಇತಿಹಾಸ ಈ ರೀತಿ 'ತಿರುಳು' ಮತ್ತು 'ಅಂಚು' ಎಂದು ಭಿನ್ನವಾಗಿ ಕಾಣುವ ಇಂತಹ ಸಿದ್ಧಾಂತಗಳೆಲ್ಲ ಬೊಗಳೆ ಎಂದು ತೋರಿಸುತ್ತದೆ. ಹಿಂದೂಗಳಿಗೆ ಮಿಲಿಟರಿ ತರಬೇತಿ ಮತ್ತು ಹಿಂಸಾಚಾರವನ್ನು ಒಂದು ರಾಜಕೀಯ ಅಸ್ತ್ರವಾಗಿ ಬಳಸುವಲ್ಲಿ ಆರೆಸ್ಸೆಸ್ ಒಂದು ದೀರ್ಘ ಇತಿಹಾಸವನ್ನೇ ಹೊಂದಿದೆ. 'ಎಲ್ಲ ರಾಜಕೀಯಗಳನ್ನು ಹಿಂದೂಕರಿಸಿ ಮತ್ತು ಹಿಂದೂವಾದವನ್ನು ಮಿಲಿಟರೀಕರಿಸಿ' ಎಂಬ ಘೋಷಣೆ ನೀಡಿದವರು ಸಾವರ್ಕರ್ (ಈತ, ಸಾಮಾನ್ಯವಾಗಿ, ಹಿಂದೂಗಳು ಮತ್ತು ಇಸ್ಲಾಮಿಗಳು ಎರಡು ಪ್ರತ್ಯೇಕ ದೇಶಗಳು ಎಂಬ ಸಿದ್ಧಾಂತ ಮುಂದಿಟ್ಟವರೆನ್ನಲಾದ ಜಿನ್ನಾರಿಗಿಂತ ಎರಡು ವರ್ಷಗಳ. ಮೊದಲೇ ಈ ಎರಡು ದೇಶಗಳ ಸಿದ್ಧಾಂತವನ್ನು ಪ್ರತಿಪಾದಿಸಿದ ನಿಜವಾದ ಮೂಲವ್ಯಕ್ತಿ ಕೂಡಾ). ಇದರಿಂದ ಸ್ಫೂರ್ತಿ ಪಡೆದ ಡಾ. ಬಿ.ಎಸ್.ಮೂಂಜೆ, ಆರೆಸ್ಸೆಸ್ ಸ್ಥಾಪಕ ಡಾ.ಹೆಡ್ಗೆವಾರ್‌ರವರ ಗುರು, ಫ್ಯಾಸಿಸ್ಟ್ ಸರ್ವಾಧಿಕಾರಿ ಮುಸ್ಸೊಲಿನಿಯನ್ನು ಭೇಟಿ ಮಾಡಲು ಇಟಲಿಗೆ ಪ್ರಯಾಣ ಬೆಳೆಸಿದರು. ಈ ಭೇಟಿ ಮಾರ್ಚ್ 19, 1931ರಂದು ನಡೆಯಿತು.

ಮಾರ್ಚ್ 20ರ ಅವರ ವೈಯಕ್ತಿಕ ದಿನಚರಿಯ ಟಿಪ್ಪಣಿಗಳು ಅವರು ಇಟಾಲಿಯನ್ ಫ್ಯಾಸಿಸಂ ತನ್ನ ಯುವಜನರಿಗೆ (ಗಲಭೆಕೋರರಿಗೆ ಎಂದು ಓದಿಕೊಳ್ಳಿ) ಮಿಲಿಟರಿ ತರಬೇತಿ ನೀಡುತ್ತಿದ್ದ ಪರಿಯತ್ತ ಯಾವ ರೀತಿಯಲ್ಲಿ ಆಕರ್ಷಿತರಾದರು, ಆ ಬಗ್ಗೆ ಎಂತಹ ಮೆಚ್ಚುಗೆ ವ್ಯಕ್ತಪಡಿಸಿದರು ಎಂಬುದನ್ನು ಬಹಿರಂಗ ಪಡಿಸಿದೆ. ಭಾರತಕ್ಕೆ ಹಿಂದಿರುಗಿದ ಮೇಲೆ ಡಾ.ಮೂಂಜೆ ನಾಸಿಕ್‌ನಲ್ಲಿ 1935ರಲ್ಲಿ 'ಸೆಂಟ್ರಲ್ ಹಿಂದೂ ಮಿಲಿಟರಿ ಎಜ್ಯುಕೇಶನ್ ಸೊಸೈಟಿ' ಎಂಬುದನ್ನು ಸ್ಥಾಪಿಸಿದರು; ಇದು 1937ರಲ್ಲಿ ಸ್ಥಾಪನೆಗೊಂಡ ಭೋಂಸಾಲ ಮಿಲಿಟರಿ ಸ್ಕೂಲಿನ ಪೂರ್ವವರ್ತಿ ಸಂಸ್ಥೆ. ಇದೇ ಈಗ ಹಿಂದುತ್ವ ಭಯೋತ್ಪಾದನೆಗೆ ತರಬೇತಿ ನೀಡುತ್ತಿರುವ ಆಪಾದನೆಗೊಳಗಾಗಿರುವ ಸಂಸ್ಥೆ. 1939ರಲ್ಲಿ ಗೋಲ್ವಾಲ್ಕರ್, ಯೆಹೂದಿಗಳನ್ನು ನಾಝಿ ಫ್ಯಾಸಿಸಂನ ಅಡಿಯಲ್ಲಿ ಹಿಟ್ಲರ್ ಮೆಟ್ಟಿ ಹಾಕಿದ ರೀತಿಯನ್ನು ಪ್ರಶಂಸಿಸುತ್ತಾ "ಇದು ಹಿಂದೂಸ್ತಾನದಲ್ಲಿರುವ ನಾವು ಕಲಿಯಬೇಕಾದ ಮತ್ತು ಪ್ರಯೋಜನ ಪಡೆಯಬೇಕಾದ ಒಂದು ಉತ್ತಮ ಪಾಠ" ಎಂದು ಹೇಳುತ್ತಾರೆ! ಮುಂದೆ, ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಿದ ನಂತರ, ಆರೆಸ್ಸೆಸ್‌ನ ವಿಭಾಂಗಗಳಾದ ವಿಹೆಚ್‌ಪಿ ಮತ್ತು ಭಜರಂಗ ದಳ, 'ಕರಸೇವಕ'ರಿಗೆ ನೀಡಿದ ತರಬೇತಿಯ ಬಗ್ಗೆ ಸಾರ್ವಜನಿಕವಾಗಿಯೇ ಹೆಮ್ಮೆ ಪಟ್ಟುಕೊಂಡರು.

ಭಿನ್ನ ಮಾನದಂಡವೇಕೆ ?

ಆರೆಸ್ಸೆಸ್ ಸಾಮಾನ್ಯವಾಗಿ 'ಹಿಂದೂ ಭಯೋತ್ಪಾದನೆ' ಎಂಬ ಪದವನ್ನು ಪ್ರಶ್ನಿಸುತ್ತದೆ. 'ನೀವು ಹೇಗೆ ತಾನೇ ಒಂದಿಡೀ ಸಮುದಾಯವನ್ನು ಭಯೋತ್ಪಾದನೆಯ ಪರಿಕಲ್ಪನೆಯೊಂದಿಗೆ ಜೋಡಿಸುತ್ತೀರಿ?' ಎಂದು ಕೇಳುತ್ತದೆ. ಅದರ ಹಿಂದಿನ ಮುಖ್ಯಸ್ಥರಂತೂ ಇನ್ನೂ ಮುಂದೆ ಹೋಗಿ, "ಇಂತಹ ಪದಗಳ ರಚನೆ ಸಂಘಕ್ಕೆ ಅಪಖ್ಯಾತಿ ತರುವ ಸಂಚು. ಇದು ಹಿಂದುತ್ವ ಶಕ್ತಿಗಳನ್ನು ಸೋಲಿಸುವ, ಅವುಗಳ ಹೆಸರು ಕೆಡಿಸುವ ಒಂದು ರಾಜಕೀಯ ಸಂಚು" ಎಂದಿದ್ದರು. ಬಹಳ ಜಾಣತನದಿಂದ 'ಹಿಂದುತ್ವ' ಮತ್ತು 'ಹಿಂದೂ' ಎಂಬ ಎರಡು ಭಿನ್ನ ಪದಗಳನ್ನು ಒಂದೇ ಅರ್ಥದಲ್ಲಿ ಅವರು ಬಳಸುತ್ತಾರೆ. ನಾವು ಹೇಳುತ್ತಿರುವುದು ಹಿಂದೂ ಭಯೋತ್ಪಾದನೆ ಎಂದಲ್ಲ, ಹಿಂದುತ್ವ ಭಯೋತ್ಪಾದನೆಯೆಂದೇ. ಖಂಡಿತವಾಗಿಯೂ, ಯಾವುದೇ ಧಾರ್ಮಿಕ ಸಮುದಾಯವನ್ನು ಇಡಿಯಾಗಿ ಆ ಧರ್ಮಾವಲಂಬಿ ವ್ಯಕ್ತಿಗಳ ಭಯೋತ್ಪಾದಕ ಚಟುವಟಿಕೆಗಳಿಗೆ ಹೊಣೆಯಾಗಿಸಬಾರದು. ಆದರೆ ಈ ಮಾನದಂಡ ಎಲ್ಲ ಧರ್ಮಗಳಿಗೂ ಸಮಾನವಾಗಿ ಅನ್ವಯವಾಗಬೇಕು ತಾನೇ? ಆದರೆ ಆರೆಸ್ಸೆಸ್ ಪ್ರಕಾರ 'ಅನ್ವಯವಾಗುವುದಿಲ್ಲ'. ಏಕೆಂದರೆ, ಆರೆಸ್ಸೆಸ್, ಸಾಮಾನ್ಯವಾಗಿ ಅಂಗೀಕರಿಸುವ ನಿರ್ಣಯ "ಇಸ್ಲಾಮೀ ಭಯೋತ್ಪಾದನೆಯನ್ನು ಕಠಿಣ ರೀತಿಯಲ್ಲಿ ಮೆಟ್ಟಿ ಹಾಕಬೇಕು" ಎಂದು ಕೇಳುತ್ತದೆ. ಇದು ಇಬ್ಬಂದಿತನದ ಅಭಿವ್ಯಕ್ತಿಯಷ್ಟೇ ಅಲ್ಲ, ಇದು ಭಾರತದ ಆಧುನಿಕ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣರಾಜ್ಯವನ್ನು ಉನ್ಮತ್ತ ಧಾರ್ಮಿಕ ಅಸಹಿಷ್ಣುತೆಯ ಆರೆಸ್ಸೆಸ್ ನೋಟದ ಒಂದು 'ಹಿಂದೂ ರಾಷ್ಟ್ರ'ವಾಗಿ ಪರಿವರ್ತಿಸುವ ಸೈದ್ಧಾಂತಿಕ ಬೇರುಗಳ ಪ್ರತಿಫಲನ.

ಭಯೋತ್ಪಾದನೆಗೆ ಧರ್ಮವಿಲ್ಲ ಎಂಬುದನ್ನು ಈ ಅಂಕಣದಲ್ಲಿ ನಾವು ಹೇಳುತ್ತಾ ಬಂದಿದ್ದೇವೆ, ಈಗಲೂ ಹೇಳುತ್ತೇವೆ. ಭಯೋತ್ಪಾದನೆ ನೇರವಾಗಿ ದೇಶ-ವಿರೋಧಿ ಮತ್ತು, ಅದರಿಂದಾಗಿ ದೇಶ ಅದರ ಬಗ್ಗೆ ಎಳ್ಳಷ್ಟೂ ಸಹನೆ ತೋರಬಾರದು. ಅಲ್ಲದೆ, ಎಲ್ಲ ವಿಧಗಳ **ಭಯೋತ್ಪಾದನೆಗಳು ಪರಸ್ಪರ ಪೋಷಿಸುತ್ತವೆ ಮತ್ತು ಬಲಪಡಿಸಿಕೊಳ್ಳುತ್ತವೆ, ನಮ್ಮ ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನೇ ಧ್ವಂಸ ಮಾಡುತ್ತವೆ.**

ಆಧುನಿಕ ಭಾರತದ ಜಾತ್ಯಾತೀತ ಪ್ರಜಾಸತ್ತಾತ್ಮಕ ತಳಹದಿಯನ್ನು ರಕ್ಷಿಸಿಕೊಳ್ಳಲು ಮತ್ತು ಬಲಪಡಿಸಲು, ಆರೆಸ್ಸೆಸ್‌ನ ರಾಜಕೀಯ ಗುರಿಗಳನ್ನು ಈಡೇರಿಸಿಕೊಳ್ಳುವ ಇಂತಹ ದುಷ್ಟ ಭಯೋತ್ಪಾದಕ ವಿಧಾನಗಳನ್ನು ನಿರ್ಣಾಯಕವಾಗಿ ಸೋಲಿಸುವುದು ಅತ್ಯಗತ್ಯ.

ಪಠ್ಯ ಬದಲಾವಣೆ : ಮುಗ್ಧ ಮನಸುಗಳಿಗೆ ವಿಷ ತುಂಬುವ ಯತ್ನ

ಆರ್.ರಾಮಕೃಷ್ಣ

ಶಾಲಾ ಪಠ್ಯಗಳನ್ನು ರಚಿಸಬೇಕಾದವರು ಯಾರು ? ಅದಕ್ಕೆ ಆಧಾರವಾದ ಮೂಲಭೂತ ಸಿದ್ಧಾಂತ, ತತ್ತ್ವಗಳೇನು ಎಂಬುದು ಒಂದು ಗಂಭೀರವಾದ ಪ್ರಶ್ನೆ. ತಜ್ಞರ ಸಮಿತಿ ಪಠ್ಯ ರೂಪಿಸಬೇಕು. ಭಾರತದ ಸಂವಿಧಾನ ಒಪ್ಪಿಕೊಂಡ ಜಾತ್ಯತೀತತೆ, ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ, ಸಮಾನತೆಗಳಂತಹ ಮೌಲ್ಯಗಳು, ವೈಚಾರಿಕತೆ, ವೈಜ್ಞಾನಿಕ ಚಿಂತನೆಗಳು ಇದಕ್ಕೆ ಆಧಾರವಾಗಬೇಕು, ಆದರೆ ನಮ್ಮ ರಾಜ್ಯದಲ್ಲಿ ನಡೆದಿರುವುದೇನು?
ಡಿಎಸ್‌ಇಆರ್‌ಟಿ ಪಠ್ಯ ಪುಸ್ತಕ ರಚಿಸಲು ಹೊರಟರೆ, ಅದರ ಮೇಲೆ ಸವಾರಿ ಮಾಡುವ ಸಲಹಾ ಸಮಿತಿ. ಮತ್ತು ಸಂಚಾಲಕರು. ಸಂವಿಧಾನ ಬದ್ಧ ಮೌಲ್ಯಗಳ ಬದಲಿಗೆ ಆರೆಸ್ಸೆಸ್ ಚಿಂತನೆಗಳ ಅಡಿಪಾಯ. ಈ ಆರೆಸ್ಸೆಸ್‌ನ ಚಿಂತನೆ –ಸಿದ್ಧಾಂತವಾದರೂ ಏನು? ಸಮಾಜದ ಮೇಲೆ ಮೇಲ್ಜಾತಿ, ಮೇಲ್ವರ್ಗಗಳ ಹಿಡಿತವನ್ನು ಮುಂದುವರಿಸುವುದಕ್ಕೆ ಪೂರಕವಾದ, ಶೋಷಣಾತ್ಮಕ ವ್ಯವಸ್ಥೆಯ ರಕ್ಷಣೆಯ ತಂತ್ರವಾಗಿ ಫ್ಯಾಸಿಸ್ಟ್ ಮಾದರಿಯ 'ಹಿಂದೂ ರಾಷ್ಟ್ರದ' ಅಮಲನ್ನು ವಿದ್ಯಾರ್ಥಿಗಳು ಮತ್ತು ಜನರ ಮನಸ್ಸಿನಲ್ಲಿ ಹರಡುವುದು. ಇದಕ್ಕೆ ಪೂರಕವಾಗಿದೆ. ಪಠ್ಯ ಬದಲಾವಣೆಯ ಯತ್ನ.

ಕರ್ನಾಟಕ ರಾಜ್ಯದ ಪ್ರಜ್ಞಾವಂತ ಜನತೆ ನಿರೀಕ್ಷಿಸುತ್ತಿದ್ದಂತೆ ರಾಜ್ಯ ಬಿಜೆಪಿ ಸರ್ಕಾರವು ಶಾಲಾ ಪಠ್ಯ ಪುಸ್ತಕಗಳನ್ನು ಆರೆಸೆಸ್ಸಿನ ಮತಾಂಧ, ಜಾತಿವಾದಿ, ಪ್ರಗತಿ ವಿರೋಧಿ, ಕಂದಾಚಾರಿ ವಿಚಾರಗಳನ್ನು ತುರುಕುವ ಮೂಲಕ ಪಠ್ಯ ಪುಸ್ತಗಳನ್ನು ವಿಕೃತಗೊಳಿಸಿರುವ ಪ್ರಕರಣ ಬಯಲಾಗಿದೆ. ಮುಂದಿನ ಶೈಕ್ಷಣಿಕ ವರ್ಷದಲ್ಲಿ ರಾಜ್ಯದಲ್ಲಿ ಜಾರಿಗೆ ತರುವ ಉದ್ದೇಶದೊಂದಿಗೆ 5ನೇ ತರಗತಿಯ ಮತ್ತು 8ನೇ ತರಗತಿಯ ಪಠ್ಯ ಪುಸ್ತಕಗಳ ಕರಡನ್ನು ಅಂತಿಮಗೊಳಿಸಲಾಗಿದೆ. ರಾಜ್ಯ ಸಚಿವ ಸಂಪುಟವು ಅದಕ್ಕೆ ಅನುಮೋದನೆಯನ್ನೂ ನೀಡಿದೆ. ಅಂದರೆ ರಾಜ್ಯದ ಜನತೆ ತೀವ್ರವಾಗಿ ವಿರೋಧಿಸದಿದ್ದರೆ ಈ ವಿಷಮಯ ಪಠ್ಯಗಳು ಜಾರಿಗೆ ಬಂದು ನಮ್ಮ ಮಕ್ಕಳ ಮನಸ್ಸುಗಳು ವಿಷಪೂರಿತ ಗೊಳ್ಳುವ ಅಪಾಯ ಕಾದಿದೆ.

ಈ ಪಠ್ಯಗಳನ್ನು ನೋಡಿದರೆ ಸಂಘ ಪರಿವಾರ ಇಂತಹ ಪಠ್ಯಗಳಲ್ಲಿ ಏನೆಲ್ಲಾ ತುಂಬಲು ತಹತಹಿಸುತ್ತದೆಯೋ ಅದೆಲ್ಲವನ್ನೂ ತುಂಬಲು ಸಾಧ್ಯವಾಗಿಲ್ಲದೇ ಇರಬಹುದು ಅನಿಸುತ್ತದೆ. ಬಹುಶ: ಅದಕ್ಕೆ ಪಠ್ಯಪುಸ್ತಕ ಸಮಿತಿಯೊಳಗಿನ ವಿರೋಧವೂ ಕಾರಣವಾಗಿರಬಹುದು. ಆದರೆ ಅದರ ಅರ್ಥ ಈ ಪಠ್ಯದೊಳಗೆ ಸುರಿಯಲಾಗಿರುವ ವಿಷ ಕಡಿಮೆ ಅಪಾಯಕಾರಿ ಅಂತ ಖಂಡಿತ ಅಲ್ಲ.

ಮುಸ್ಲಿಂ ದ್ವೇಷ

ಒಂದು ಅರ್ಥದಲ್ಲಿ ಸಂಘ ಪರಿವಾರದ ಚಾಲಕ ಶಕ್ತಿ, ಸಂಘ. ಪರಿವಾರದ ಉಸಿರು ಮುಸ್ಲಿಂ ದ್ವೇಷ. ಮತ್ತು ಅಲ್ಪಸಂಖ್ಯಾತರ ದ್ವೇಷ. ಮುಗ್ಧ ಮಕ್ಕಳ ಮನಸ್ಸಿನಲ್ಲಿ ಅಲ್ಪ ಸಂಖ್ಯಾತ ಸಮುದಾಯದ ಬಗೆಗೆ ಸಂಶಯ ಮೂಡಿಸುವ, ದ್ವೇಷವನ್ನು ಪ್ರೇರೆಪಿಸುವುದಕ್ಕೆ ಪೂರಕವಾಗಬಹುದಾದ ಹಲವು ಪೂರ್ವಾಗ್ರಹ ಪೀಡಿತವಾದ ವಿಚಾರಗಳನ್ನು ತುರುಕಲಾಗಿದೆ. ವಿಷಯಗಳ ನಿರೂಪಣೆಯಲ್ಲಿ ಪಕ್ಷಪಾತವನ್ನು ತೋರಲಾಗಿದೆ.

5ನೇ ತರಗತಿಯ ಸಮಾಜ ವಿಜ್ಞಾನ ಪಠ್ಯದ ಈ ಉದಾಹರಣೆಗಳನ್ನು ನೋಡಿ.

ಈ ಪಠ್ಯದ ಮೊದಲ ಪಾಠವು ರಾಜ್ಯದ ಎಲ್ಲ ಕಡೆಗೂ ಒಂದೇ ಇರುವುದಿಲ್ಲ. ಆಡಳಿತಾತ್ಮಕ ವಿಭಾಗವಾದ ಬೆಂಗಳೂರು ವಿಭಾಗ, ಮೈಸೂರು ವಿಭಾಗ, ಬೆಳಗಾಂ ವಿಭಾಗ, ಗುಲಬರ್ಗಾ ವಿಭಾಗಗಳಿವೆ. ಪ್ರತಿ ವಿಭಾಗದ ವಿದ್ಯಾರ್ಥಿಗಳಿಗೂ ತಮ್ಮ ಸುತ್ತ ಮುತ್ತಲ, ಸ್ಥಳೀಯ ಸಾಮಾಜಿಕ, ಆರ್ಥಿಕ, ಐತಿಹಾಸಿಕ, ಸಾಂಸ್ಕೃತಿಕ ಇತಿಹಾಸ, ವರ್ತಮಾನ, ಸ್ಥಿತಿಗತಿಗಳನ್ನು ಪರಿಚಯಿಸಿಕೊಡುವ ಉದ್ದೇಶವಿದೆ. ಇದರಿಂದಾಗಿ ಮೊದಲ ಪಾಠದಲ್ಲಿ ವಿಭಾಗದಿದಂದ ವಿಭಾಗಕ್ಕೆ ಬಿನ್ನತೆ ಇದೆ. ನಂತರದ ಪಾಠಗಳು ಇಲ್ಲರಿಗೂ ಒಂದೇ.

ಮೈಸೂರು ವಿಭಾಗದಲ್ಲಿನ ಮೊದಲ ಪಾಠದಲ್ಲಿ ಮೈಸೂರು ಒಡೆಯರನ್ನು ಹೊಗಳುವಾಗಿನ ಉತ್ಸಾಹ ಟಿಪ್ಪು, ಹೈದರಾಲಿಗಳ ವಿಚಾರ ಬಂದಾಗ ಉಡುಗಿ ಹೋಗುತ್ತದೆ. !

ಒಡೆಯರ ವಿಚಾರವಾಗಿ "ಪ್ರಾರಂಭದ ಒಡೆಯರ ರಾಜರಲ್ಲಿ ಚಿಕ್ಕದೇವರಾಜನು



ಅತ್ಯಂತ ಖ್ಯಾತಿ ಪಡೆದವನು. 'ಕರ್ನಾಟಕ ಚಕ್ರವರ್ತಿ' ಎಂಬ ಬಿರುದನ್ನು ಧರಿಸಿದ ಈತನು ರಾಜ್ಯವನ್ನು ವಿಸ್ತರಣೆ ಮಾಡಿದನು. ಈತನ ಆಳ್ವಿಕೆಯ ಕಾಲದಲ್ಲಿ ಮೈಸೂರು ಸಂಪದ್ಭರಿತವಾಯಿತು."

"ಮೈಸೂರು ರಾಜ್ಯವನ್ನಾಳಿದ ಆ ಮೇಲಿನ ರಾಜರಲ್ಲಿ ಗಣನೀಯರಾದವರೆಂದರೆ ಮುಮ್ಮಡಿ ಕೃಷ್ಣರಾಜ ಒಡೆಯರು ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರು. ಇವರಿಬ್ಬರೂ ಸಾಹಿತ್ಯ ಮತ್ತು ಕಲೆಗಳಿಗೆ ಅಪಾರ ಪ್ರೋತ್ಸಾಹ ನೀಡಿದರು." ಎನ್ನುವ ಪಠ್ಯವು ಕರ್ನಾಟಕ ಅಭಿವೃದ್ದಿಗೆ ಹಲವು ಅಮೋಘ ಕೊಡುಗೆಗಳನ್ನು ನೀಡಿದ, ಆಧುನಿಕ ಮೈಸೂರಿನ ಅಭಿವೃದ್ದಿಗೆ ಅಡಿಪಾಯವನ್ನು ಹಾಕಿದ ಹೈದರಾಲಿ, ಟಿಪ್ಪುವಿನ ಯಾವ ಕೊಡುಗೆಗಳನ್ನೂ ಪ್ರಸ್ತಾಪಿಸುವುದಿಲ್ಲ. ಸಾಮ್ರಾಜ್ಯಶಾಹಿ ಬ್ರಿಟೀಷರನ್ನು ದೇಶದಿಂದ ಓಡಿಸಲು ತನ್ನ ಮಕ್ಕಳನ್ನು ಒತ್ತೆ ಇಟ್ಟು ಕೊನೆಗೆ ತನ್ನ ಪ್ರಾಣವನ್ನೇ ಪಣವಾಗಿರಿಸಿ ಇಟ್ಟು ಹೋರಾಟ ನಡೆಸಿದ ಟಿಪ್ಪುವಿನ ಶೌರ್ಯ, ಧೀಮಂತಿಕೆ ದೇಶಪ್ರೇಮ ಬಗೆಗೂ ಹೇಳದೇ "ಚಿಕ್ಕದೇವರಾಯನ ಮರಣಾನಂತರ ಆರು ದಶಕಗಳ ಕಾಲ ದುರ್ಬಲ ರಾಜರುಗಳೇ ಅಧಿಕಾರದಲ್ಲಿದ್ದರು. ಈ ಅವಧಿಯಲ್ಲಿ ದಳವಾಯಿಗಳೆಂದು ಕರೆಯಲಾಗುವ ಸೇನಾಪತಿಗಳು ರಾಜರ ಪರವಾಗಿ ಆಳ್ವಿಕೆ ನಡೆಸುತ್ತಿದ್ದರು. ಮುಂದೆ 1761ರಲ್ಲಿ ರಾಜಧಾನಿಯಲ್ಲಿ ಸೈನಿಕ ಬಂಡಾಯ ಕಾಣಿಸಿಕೊಂಡಾಗ, ಹೈದರಾಲಿಯು ದಳವಾಯಿ ನಂಜರಾಜನನ್ನು ನಿವೃತ್ತಿಗೊಳಿಸಿ ತಾನೇ ಅಧಿಕಾರವಹಿಸಿಕೊಂಡನು. 1763ರಿಂದ 1799ರವರೆಗೆ ಮೈಸೂರು ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಮಧ್ಯಂತರ ಆಳ್ವಿಕೆಯಲ್ಲಿತ್ತು. ಇದೇ ವೇಳೆ ಭಾರತದಲ್ಲಿ ಇಂಗ್ಲಿಷರು ರಾಜಕೀಯ ಶಕ್ತಿಯಾಗಿ ತಲೆಯೆತ್ತಿದ್ದರು. 1799ರಲ್ಲಿ ಅವರು ಟಿಪ್ಪುಸುಲ್ತಾನನ್ನು ಸೋಲಿಸಿ ಮೈಸೂರು ರಾಜ್ಯವನ್ನು ತಮ್ಮ ಅಧಿಕಾರದಡಿಯಲ್ಲಿ ತಂದರು." ಎಂದು ಹೇಳಿ ಕೈ ತೊಳೆದುಕೊಳ್ಳುತ್ತದೆ. ಮೈಸೂರು ವಿಭಾಗದಲ್ಲೆ ಹೈದರಾಲಿ, ಟಿಪ್ಪುಗಳಿಗೆ ಈ ಗತಿಯಾದರೆ ಇನ್ನು ಬೇರೆ ವಿಭಾಗ ಪಠ್ಯದಲ್ಲಿ ಕೇಳುವುದೇನು ? ಚೆಲುವ ಕನ್ನಡ ನಾಡು ಎಂಬ ಎಲ್ಲರಿಗೂ ಸಾಮಾನ್ಯವಾದ ಭಾಗದಲ್ಲಿ ಟಿಪ್ಪುವಿಗೆ 'ಮೈಸೂರು ಹುಲಿ' ಎಂಬ ಬಿರುದು ತೊಡಿಸಿರುವಷ್ಟಕ್ಕೆ ನಾವು ತೃಪ್ತಿ ಪಡಬೇಕಾಗಿದೆ.

ಗುಲಬರ್ಗಾ ವಿಭಾಗದ ಪಠ್ಯದ ಮೊದಲ ಪಾಠದಲ್ಲಿ 'ಹೈದರಾಬಾದ್ ವಿಮೋಚನಾ ಸಂಗ್ರಾಮ' ಎಂಬ ಒಂದು ಶೀರ್ಷಿಕೆಯಲ್ಲಿ ಹೈದರಾಬಾದ್ ನಿಜಾಮನ ವಿರುದ್ಧದ ಹೋರಾಟದ ಧೀರ್ಘ ವಿವರಣೆ ಇದೆ.



ನಿಜಾಮನ ಆಡಳಿತ ಕ್ರೂರವಾಗಿತ್ತು ಎಂಬುದು ನಿಜವೇ. ನಿಜಾಮನ ಆಡಳಿತ ಎಂದರೆ ಒಬ್ಬ ಪಾಳೇಯಗಾರಿ ಸುಲಿಗೆಕೋರನ ಆಡಳಿತ. ಮತಾಂಧರೂ ಆಗಿದ್ದ ನಿಜಾಮನ ಬಂಟರ, ಸೈನ್ಯದ ದೌಜನ್ಯಗಳನ್ನು ವಿವರಿಸುವಾಗ ಅಲ್ಲಿ ತೋರಬೇಕಾದ ಎಚ್ಚರವನ್ನು ಸಮ ಚಿತ್ತದ ವಿವೇಕವನ್ನು ತೋರದೇ ಅದು ಮುಸ್ಲಿಂ ಆಡಳಿತಗಾರರು ಹಾಗೂ ಹಿಂದೂ ಪ್ರಜೆಗಳ ನಡುವಿನ ಹೋರಾಟ ಎಂಬಂತೆ ಚಿತ್ರಿಸಲಾಗಿದೆ.

ದೇಶಕ್ಕೆ ಸ್ವಾತಂತ್ರ್ಯ ಸಿಗುವ ಕಾಲಘಟ್ಟದ ಬೆಳವಣಿಗೆಗೆಗಳ ಕುರಿತು

"ನಿಜಾಮ ಭಾರತ ಒಕ್ಕೂಟದಿಂದ ಹೊರಗುಳಿದು ಸ್ವತಂತ್ರ ಆಳ್ವಿಕೆ ನಡೆಸಲು ನಿರ್ಧರಿಸಿದನು." ಎನ್ನುವ ಪಠ್ಯವುಮೈಸೂರು ಒಡೆಯರ ಕುರಿತ ಪಾಠದಲ್ಲಿ ಮಾತ್ರ.

"1947 ರಲ್ಲಿ ಭಾರತ ಸ್ವತಂತ್ರ ರಾಷ್ಟ್ರವಾದಾಗ ಮೈಸೂರು ರಾಜ್ಯವು ಭಾತರ ಗಣರಾಜ್ಯದಲ್ಲಿ ಸೇರ್ಪಡೆಗೊಂಡಿತು" ಎಂದು ಕೈ ತೊಳೆದುಕೊಳ್ಳುತ್ತದೆ.

ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ಕೂಡಲೇ ಮೈಸೂರು ಮಹಾರಾಜರೇನು ಓಡೋಡಿ ಹೋಗಿ ಭಾರತ ಒಕ್ಕೂಟವನ್ನು ಸೇರಲಿಲ್ಲ. ಅವರೂ ಕೂಡ ಪ್ರತ್ಯೇಕ 'ಮೈಸೂರು ರಾಷ್ಟ್ರ'ವಾಗಿ ಉಳಿದುಕೊಳ್ಳುವ ಯತ್ನ ಮಾಡಿದ್ದರು. ಜನತೆಯ ಅಭಿಮತ ಅದಕ್ಕೆ ಪರವಾಗಿರಲಿಲ್ಲ. ಜನತೆಯು ಆ ಧೋರಣೆಯನ್ನು ಖಂಡಿಸಿ ಹೋರಾಟ ನಡೆಸಿದರು. ಅದರಿಂದಾಗಿ ಮೈಸೂರು ಮಹಾರಾಜರು ಭಾರತ ಒಕ್ಕೂಟಕ್ಕೆ ಸೇರಲು ಒಪ್ಪಲೇ ಬೇಕಾಯಿತು. ಇದು ಜಗಜಾಹೀರಾಗಿರುವ ಇತಿಹಾಸ. ಇಂಥಾ ಇತಿಹಾಸವನ್ನು ತಿರುಚುವ ಸಂಘ ಪರಿವಾರದ ಭಂಡತನವನ್ನು ಮೆಚ್ಚಲೇ ಬೇಕು.

ಒಡೆಯರು ಹಿಂದೂಗಳು ಹಾಗಾಗಿ ಅವರು ದೇಶದ ಪರ, ನಿಜಾಮ ಮುಸ್ಲಿಂ ಹಾಗಾಗಿ ಆತ ದೇಶ ವಿರೋಧಿ ಎಂದು ಬಿಂಬಿಸುವುದಲ್ಲವೇ ಈ ಬಗೆಯ ನಿರೂಪಣೆಯ ಉದ್ದೇಶ !?.

ಮೈಸೂರಿನಲ್ಲಿ ರಾಜರ ಆಡಳಿತ ಹೋಗಿ. ಜವಾಬ್ದಾರಿ ಸರ್ಕಾರ ಅಂದರೆ ಚುನಾಯಿತ ಸರ್ಕಾರ ಬರಬೇಕೆಂಬುದಕ್ಕಾಗಿಯೂ ಈ ಮೈಸೂರು ಜನತೆ ದೊಡ್ಡ ಹೋರಾಟ ಮಾಡಬೇಕಾಗಿ ಬಂದಿತ್ತು ಎಂಬ ಕೇವಲ 65 ವರ್ಷಗಳ ಹಿಂದಿನ ಇತಿಹಾಸ ಜನರ ಮನಸ್ಸಿನಿಂದ ಅಳಿಸಿ ಹೋಗಲು ಸಾಧ್ಯವೇ?

ದತ್ತಾತ್ರೇಯ ಪೀಠ ಮಾತ್ರ.... ಬಾಬಾ ಬುಡನ್ ಇಲ್ಲ....

"ಬಾಬಾಬುಡನ್ ಗಿರಿ: ಇದು ಪಶ್ಚಿಮ ಘಟ್ಟದ ಒಂದು ಭಾಗ. ಇದನ್ನು ಚಂದ್ರದ್ರೋಣ ಪರ್ವತ ಎಂದು ಕರೆಯುತ್ತಾರೆ. ಇಲ್ಲಿ ಅನೇಕ ಗಿಡ ಮೂಲಿಕೆಗಳು ದೊರೆಯುತ್ತವೆ. ಇದರ ನೆತ್ತಿಯಲ್ಲಿರುವ ಗುಹೆಯಲ್ಲಿ ದತ್ತಾತ್ರೇಯ ಪೀಠವಿದೆ. ಇಲ್ಲಿಗೆ ಸಹಸ್ರಾರು ಭಕ್ತರು ಬರುತ್ತಾರೆ." ಇದು ಈ ಪಠ್ಯವು ನಮ್ಮ ನಾಡಿನ ಹೆಮ್ಮೆಯ ಕೋಮು ಸೌಹಾರ್ದ ಪರಂಪರೆಯ ತಾಣದ ಬಗೆಗೆ ಹೇಳುತ್ತಿರುವ ಮಾತು. 'ಸರ್ವ

'ಜನಾಂಗದ ಶಾಂತಿಯ ತೋಟ' ಎಂಬ ಕವಿವಾಣಿಯನ್ನು ನೆನಪಿಸುವಂತಹ_ ನೂರಾರು ವರ್ಷಗಳಿಂದಲೂ ಜಾತಿ ಭೇದವಿಲ್ಲದೇ ಹಿಂದೂ-ಮುಸ್ಲಿಂ ಎಲ್ಲಾ ಜನರು ಭಕ್ತಿ, ಶ್ರದ್ಧೆಯಿಂದ ನಡೆದುಕೊಳ್ಳುತ್ತಿರುವ ಒಂದು ಶ್ರದ್ಧಾಕೇಂದ್ರವನ್ನು ಹಿಂದುತ್ವವಾದಿ, ವೈದಿಕ ಪುರೋಹಿತಶಾಹಿ ಕೇಂದ್ರವನ್ನಾಗಿಸುವ ಸಂಚಿಗೆ ಪೂರಕವಾಗಿ ನಿರೂಪಿಸಿರುವ ಪಠ್ಯವಿದು. ಬಾಬಾಬುಡನ್ ಗಿರಿ ಪ್ರಶ್ನೆಯನ್ನು 'ಕರ್ನಾಟಕದ ಅಯೋಧ್ಯೆ'ಯನ್ನಾಗಿ ಸಂಘ ಪರಿವಾರ ಬಳಸುತ್ತಿದೆ ಎಂಬುದನ್ನು ದೇಶದ ಜನರು ಗಮನಿಸುತ್ತಿದೆ. ಈ ವಿವಾದವನ್ನು ಬಳಿಸಿ ಕರ್ನಾಟಕವನ್ನು 'ಗುಜರಾತ್ ಮಾಡುತ್ತೇವೆ' ಎಂದೆಲ್ಲಾ ಆರೆಸ್ಸೆಸ್-ಬಿಜೆಪಿ ಮುಖಂಡರು ಚೀರಿದ್ದು ಜನರ ಮನಸ್ಸಿನಲ್ಲಿ ಇನ್ನೂ ಹಸಿಯಾಗಿದೆ. ಅತ್ಯಂತ ಅಪಾಯಕಾರಿ ಸನ್ನಿವೇಶದಲ್ಲಿ ಕೋಮುವಾದಿಗಳ ಈ ಮತಾಂಧ ರಾಜಕೀಯದ ವಿಕೃತ ರೂಪವಾಗಿ ಈ ವಿಷಯ ಪಠ್ಯದಲ್ಲಿ ಹೀಗೆ ನಿರೂಪಿತವಾಗಿದೆ ಎನ್ನುವುದು ಜನ ಸಮುದಾಯಗಳ ನಡುವೆ ಐಕ್ಯತೆ, ಶಾಂತಿ ಸೌಹಾರ್ದತೆಯನ್ನು ಬಯಸುವ ಎಲ್ಲರ ಕಣ್ಣು ತೆರೆಸ ಬೇಕಿದೆ.

ಇದೇ ಮೈಸೂರು ಭಾಗವನ್ನು ಪರಿಚಯಿಸುವ ಪಠ್ಯದ 'ಮರೆಯಲಾಗದ ಮಹಾನುಭಾವರು' ಎಂಬ ಭಾಗದಲ್ಲಿ "ತಗಡೂರು ರಾಮಚಂದ್ರ ರಾವ್ ಅವರು ಅಸ್ಪೃಶ್ಯತೆಯ ವಿರುದ್ಧ ಹೋರಾಡಿದರಲ್ಲದೆ ಕ್ರೈಸ್ತರಾಗಿ ಮತಾಂತರಗೊಂಡ ಬಡವರನ್ನು ಮತ್ತೆ ತಮ್ಮ ಮತಗಳಿಗೆ ಸೇರುವಂತೆ ಮಾಡಿದರು." ಎನ್ನುತ್ತದೆ. ಅಂದರೆ ಬಡವರನ್ನು ಆಮಿಷ ಒಡ್ಡಿ ಮತಾಂತರ ಮಾಡಲಾಗಿತ್ತು. ಅವರನ್ನು ಮರಳಿ ಕರೆ ತರಲಾಯಿತು ಎಂಬ ಅರ್ಥವನ್ನು ತರುವುದೇ ಈ ಮಾತುಗಳ ಮೂಲಕ ವ್ಯಕ್ತಗೊಳಿಸುವ ಅರ್ಥ.

ಮೂಢ ನಂಬಿಕೆ ಅಜ್ಞಾನಗಳ ಬಿತ್ತನೆ

ಗಂಗಾವತಿ ತಾಲ್ಲೂಕನ್ನು ಪರಿಚಯಿಸುವ ಭಾಗದಲ್ಲಿ "ಗಂಗಾವತಿ ತಾಲ್ಲೂಕಿನ ಅಂಜನಾದ್ರಿ (ಕಿಷ್ಕಿಂದೆ) ಪೌರಾಣಿಕವಾಗಿ ಪ್ರಸಿದ್ಧವಾಗಿದೆ. ವೀರಾಗ್ರೇಸರ, ರಾಮ ಭಕ್ತ, ಸಪ್ತ ಚಿರಂಜೀವಿಗಳಲ್ಲಿ ಒಬ್ಬನಾದ ಹನುಮಂತನು ಹುಟ್ಟಿದ್ದು, ರಾಮಾಯಣದ ಸುಂದರಕಾಂಡ ನಡೆದದ್ದು ಇಲ್ಲಿಯೇ." ಎನ್ನುತ್ತದೆ ಪಠ್ಯ. ಆಹಾ!! ಏನು ವೈಚಾರಿಕತೆ. ಏನು ವೈಜ್ಞಾನಿಕ ನಿರೂಪಣೆ!? ಮುಗ್ಧ ಜನತೆ ಹಾಗೆ ನಂಬಿರಬಹುದು. ಆದರೆ ಪಠ್ಯ ಪುಸ್ತಕವೊಂದು 'ಜನರಲ್ಲಿ ಇಂತಹ ನಂಬಿಕೆ ಇದೆ' ಎಂದೋ ಅಥವಾ 'ಇಂತಹ ಪ್ರತೀತಿ ಇದೆ' ಅಂತಲೋ

ರಾಮ, ಜನಕ ಮಹಾರಾಜರನ್ನು ಐತಿಹಾಸಿಕ ವ್ಯಕ್ತಿಗಳನ್ನಾಗಿ ಮಾಡುವ ಯತ್ನ

8ನೇ ತರಗತಿಯ ಪಠ್ಯ-ಪುಸ್ತಕದ ಅಧ್ಯಾಯ 3- 'ಭಾರತದ ಪ್ರಾಚೀನ ನಾಗರೀಕತೆಗಳು' ಎಂಬ ಪಾಠದಲ್ಲಿ (ಪುಟ15) "ನಂತರದ ವೇದಗಳ ಕಾಲ" ಎಂಬ ಶೀರ್ಷಿಕೆಯಡಿ ಇರುವ ಭಾಗದಲ್ಲಿ ಇರುವ ವಾಕ್ಯಗಳು ಹೀಗಿವೆ. "ನಂತರದ ದಿನಗಳಲ್ಲಿ ಆರ್ಯರು ಗಂಗಾನದಿಯ ಪೂರ್ವ ಪ್ರದೇಶಗಳಾದ ಉತ್ತರದ ಕೋಸಲ ಹಾಗೂ ವಿದೇಹದಲ್ಲಿ ಬಂದು ನೆಲೆಸಿದರು. ಈ ಪ್ರದೇಶಗಳು ರಾಮ ಹಾಗೂ ಜನಕ ಮಹಾರಾಜರಿಂದ ಖ್ಯಾತಿಯನ್ನು ಪಡೆದವು. ಬುದ್ಧನ ಕಾಲಕ್ಕಾಗಲೇ ಜನಕನ ವಿದೇಹ ಹಾಗೂ ಅವನ ರಾಜಧಾನಿ ಮಿಥಿಲ ತನ್ನ ಹಿಂದಿನ ಪ್ರಾಮುಖ್ಯತೆಯನ್ನು ಕಳೆದುಕೊಂಡಿತ್ತು..."

ಬುದ್ಧನಂತಹ ಐತಿಹಾಸಿಕ ವ್ಯಕ್ತಿಯ ಜೊತೆ ಸೇರಿಸಿ ರಾಮನನ್ನೂ ಕೂಡ ಐತಿಹಾಸಿಕ ವ್ಯಕ್ತಿಯನ್ನಾಗಿಸುವ ತಂತ್ರಗಾರಿಕೆ ಇಲ್ಲಿ ಸ್ಪಷ್ಟವಾಗಿದೆ. ಬಾಬರೀ ಮಸೀದಿ- ರಾಮ ಮಂದಿರದ ವಿವಾದವನ್ನು ಬಡಿದೆಬ್ಬಿಸಿ ದೇಶದಲ್ಲಿಸಂಘ-ಪರಿವಾರ ನಡೆಸಿದ ರಕ್ತಪಾತದ ರಾಜಕಾರಣದ ಹಿನ್ನೆಲೆಯಲ್ಲಿಈ ಪ್ರಶ್ನೆಯ ಸೂಕ್ಷ್ಮತೆಯನ್ನು ಅರ್ಥ ಮಾಡಿಕೊಳ್ಳಬೇಕಿದೆ.

ಇಲ್ಲಿ ಕೊಡಲಾಗಿರುವ ಉದಾಹರಣೆಗಳು ಕೆಲವು ಮಾತ್ರ. ಸಾಮಾಜಿಕ ರಾಜಕೀಯ ವಿಷಯಗಳಿಗೆ ಸಂಬಂಧಿಸಿದ ಪ್ರಶ್ನೆಗಳಲ್ಲಿ ಹಲವು ಗಂಭೀರವಾದ ವಿಕೃತಿಗಳು ಪಠ್ಯ-ಪುಸ್ತಕಗಳಲ್ಲಿ ಸೇರಿಬಿಟ್ಟಿವೆ. ಮೂಲಭೂತವಾಗಿ ಇತಿಹಾಸ ಹಾಗೂ ಸಮಾಜವನ್ನು ನೋಡುವ ದೃಷ್ಟಿಕೋನವೇ ದೋಷಪೂರಿತವಾಗಿದೆ. ಸಂಘ ಪರಿವಾರದ ಮತಾಂಧ, ಜಾತಿವಾದಿ, ಹಗೂ ಸಮಾಜದ ಆಳುವ ವರ್ಗದ ಪರವಾದ ದೃಷ್ಟಿಕೋನದಿಂದ ವಿಚಾರಗಳನ್ನು ನಿರೂಪಿಸಿರುವುದರಿಂದ ಇಡೀ ಪಠ್ಯವನ್ನೇ ಪುನರ್ ರೂಪಿಸಬೇಕಾದ ಅಗತ್ಯವಿದೆ. 8ನೇ ತರಗತಿಯ ಪಠ್ಯದಲ್ಲಿ ಹಲವು .ವಿಕೃತಿಗಳನ್ನು ಸರಿಪಡಿಸಲು ಪ್ರಯತ್ನಿಸಿರುವುದು ಕಂಡು ಬರುತ್ತದೆಯಾದರೂ ಗಂಭೀರವಾದ ಕೆಲವು ವಿಕೃತಿಗಳು ಹಾಗೇ ಉಳಿದುಕೊಂಡಿವೆ. 5ನೇ ತರಗತಿಯ ಪಠ್ಯದಲ್ಲಂತೂ ವಿಕೃತಿ, ವಿಷಪೂರಿತ ವಿಚಾರಗಳು ಪಠ್ಯದುದ್ದಕ್ಕೂ ಹಾಸು ಹೊಕ್ಕಾಗಿದೆ.





ಜಾತಿಯ ಕ್ರೌರ್ಯವನ್ನು ಮರೆಮಚುವ ಯತ್ನ.

"ಜಾತೀಯತೆ ಎಂದರೆ ಜಾತಿಯ ಕುರಿತು ಅತೀವ ನಿಷ್ಠೆ ಎನ್ನಬಹುದು" ಎನ್ನುತ್ತದೆ ಈ ಪಠ್ಯ. ಅಂದರೆ ಜಾತೀಯತೆ ಎಂದರೆ ಮೇಲು ಕೀಳು ಎಂಬ ಭಾವನೆಗಳ ಆಧಾರದಲ್ಲಿ ನಿರ್ದಿಷ್ಟ ಜನ ಸಮುದಾಯಗಳನ್ನು ತುಳಿಯುವ ಶೋಷಿಸುವ ಒಂದು ಅಸಮಾನ- ಅಮಾನವೀಯ ಸಾಮಾಜಿಕ ವ್ಯವಸ್ಥೆ ಎಂಬುದನ್ನು ಪಠ್ಯವು ಮರೆ ಮಾಚಲು ಪ್ರಯತ್ನಿಸುತ್ತದೆ. ಅದರಿಂದಾಗಿಯೇ 'ಗುಪ್ತರ ಕಾಲ - ಒಂದು ಸುವರ್ಣ ಯುಗ' ಎನ್ನುತ್ತದೆ ಈ ಪಠ್ಯ. ವೇದ ಕಾಲದ ನಂತರ ಚಾತುರ್ವರ್ಣ ವ್ಯವಸ್ಥೆ ಬಲಗೊಂಡ ಅಂಶ ಮುಂದೆ ಮೌರ್ಯ ಮತ್ತು ಗುಪ್ತರ ಕಾಲ ಘಟ್ಟಗಳಲ್ಲಿ ಅಸ್ಪೃಶ್ಯತೆ ಜಾತಿ ದಮನಗಳು ಸಾಂಸ್ಥಿಕ ಸ್ವರೂಪವನ್ನು ಪಡೆದುಕೊಂಡವು. ಕರಾಳ ಜಾತಿವಾದಿ ಕಟ್ಟಳೆಗಳನ್ನು ಸಮಾಜದ ಮೇಲೆ ಹೇರಿದ ಮನುಸ್ಮೃತಿಯು ಈ ಹಂತದಲ್ಲಿಯೇ ಕ್ರೋಢೀಕರಣಗೊಂಡಿತು ಎಂಬ ಐತಿಹಾಸಿಕ ಸತ್ಯವನ್ನು ಮರೆಮಾಚಿ ಗುಪ್ತರ ಕಾಲವನ್ನು ಸುವರ್ಣ ಯುಗ ಎಂದು ಹೇಳಲಾಗುತ್ತಿದೆ. ಇಂತಹ ಮನೋಭಾವದ ಕಾರಣಕ್ಕಾಗಿಯೇ ವಚನ ಚಳುವಳಿ ಎಂದರೆ ಏನೋ ಒಂದು ಎರಡು ವಾಕ್ಯದಲ್ಲಿ ಹೇಳಿ ಮುಗಿಸುವ ಒಂದು ಸಾಮಾನ್ಯ ಘಟನಾವಳಿಯಂತೆ. ವೈದಿಕ ಧರ್ಮ ಚಿಂತನೆ ಸಂಸ್ಕೃತಿಯನ್ನು ಉಗ್ರವಾಗಿ ಖಂಡಿಸಿ ಸರಸಗಟಾಗಿ ತಿರಸ್ಕರಿಸಿ ಹೊಸದೊಂದು ಸಮಾಜದ ಕನಸಿನೊಂದಿಗೆ ಬೃಹತ್ ಆಂದೋಲನವನ್ನೇ ಆರಂಭಿಸಿದ ವಚನ ಚಳುವಳಿಯ ಪ್ರಣಾಳಿಕೆಯೇ ಈ ಪಠ್ಯದಲ್ಲಿ ಮಾಯವಾಗಿದೆ. ವೈದಿಕ ಸಂಸ್ಕೃತಿಯನ್ನು ಕೊಂಡಾಡುವಾಗಿನ ಸಂಭ್ರಮ ವಚನ ಚಳುವಳಿಯನ್ನು ಕುರಿತು ಇಲ್ಲ. ಹೀಗೆ ಪಟ್ಟಿ ಮಾಡುತ್ತಾ ಹೋದರೆ ಇನ್ನೂ ಬೇಕಾದಷ್ಟು ಹೇಳಬಹುದು.

ವಿದೇಶಿಯರ ಬಗೆಗೆ ಸಂಶಯ ಬಿತ್ತನೆ
ವಿದ್ಯಾರ್ಥಿಗಳನ್ನು ಸಂಘ ಸಾಹಿತ್ಯದೆಡೆಗೆ ಸೆಳೆಯುವ ಸಂಚು

8ನೇ ತರಗತಿಯ ಕರಡು ಪಠ್ಯದಲ್ಲಿನ ಅಧ್ಯಾಯ -2 ಪಾಠ' ಪೌರ ಮತ್ತು ಪೌರತ್ವ' ದಲ್ಲಿ ಇದ್ದ ಈ ಒಂದು ಅಂಶವನ್ನು ನೋಡಿ. ಪೌರತ್ವ ಮತ್ತು ಪೌರತ್ವ ಪಡೆಯುವ ವಿಧಾನ ಎಂಬ ಶೀರ್ಷಿಕೆ ಅಡಿಯಲ್ಲಿ ಒಂದೆಡೆ ' ಭಾರತದಲ್ಲಿ ಪೌರತ್ವಕ್ಕೆ ಸಂಬಂಧಿಸಿದ ಸಮಸ್ಯೆಗಳು ದೇಶವು 1947 ರಲ್ಲಿ ವಿಭಜನೆಯಾದಾಗಿನಿಂದ ಹಾಗೂ ನೆರೆ ದೇಶಗಳಾದ ಬಾಂಗ್ಲಾ, ಶ್ರೀಲಂಕಾಗಳಿಂದ ನಿಯಮ ಬಾಹಿರವಾಗಿ ವಲಸೆ ಬರುವವರಿಂದ ಉದ್ಭವಗೊಂಡಿವೆ.' ಎನ್ನುತ್ತದೆ. ಈ ವಿವರಣೆಯ ನಂತರ ಪಾಠದ ಕೊನೆಯಲ್ಲಿ ವಿದ್ಯಾರ್ಥಿಗಳನ್ನು ಚಟುವಟಿಕೆಗಳಿಗೆ ಪ್ರೇರೇಪಿಸುವ ಭಾಗದಲ್ಲಿ ನೀಡಲಾಗಿರುವ ಸೂಚನೆ (ನಂ.2) ನೋಡಿ. " ಪೋಲಿಸ್ ಠಾಣೆಯೊಂದಕ್ಕೆ ಭೇಟಿ ನೀಡಿ ಉನ್ನತ ಅಧಿಕಾರಿಯೊಬ್ಬರನ್ನು ಭೇಟಿ ಮಾಡಿ ಭಾರತದಲ್ಲಿ ವಿದೇಶಿಯರು ಅಪರಾಧಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಬಗ್ಗೆ ಹಾಗೂ ಅವರನ್ನು ಶಿಕ್ಷಿಸುವಲ್ಲಿ ಪೋಲಿಸ್ ಇಲಾಖೆಗೆ ಇರುವ ಮಿತಿಗಳ ಬಗ್ಗೆ ಚರ್ಚಿಸಿ. (ಮಾಹಿತಿಯನ್ನು ದಿನ ಪತ್ರಿಕೆ, ನಿಯತಕಾಲಿಕೆಗಳ ಅಥವಾ ಅಂತರ್ಜಾಲದಿಂದ ಸಂಗ್ರಹಿಸಿಕೊಳ್ಳಿ)" ಇದು ಸ್ಪಷ್ಟವಾಗಿ ದೇಶ ವಿಭಜನೆಯ ಕಾಲದಲ್ಲಿ ಬಾಂಗ್ಲಾ ದೇಶದಿಂದ ಬದುಕು ಹುಡುಕಿಕೊಂಡು ಭಾರತಕ್ಕೆ ಬಂದಿರುವ ಬಡ ಮುಸ್ಲೀಮರನ್ನು ಗುರಿ ಮಾಡಲು ಪ್ರಚೋದನೆ. ನಿಜ ಭಾರತಕ್ಕೆ ಕಾನೂನು ಬಾಹಿರವಾಗಿ ಯಾರೇ ಆದರೂ ನುಸುಳುವುದನ್ನು ತಡೆಯಬೇಕು. ಆದರೆ ಆ ಹೆಸರಿನಲ್ಲಿ ಈ ಕುರಿತ ಸಂಘ ಪರಿವಾರದ ದ್ವೇಷಪೂರಿತ ಸಾಹಿತ್ಯದ ಕಡೆಗೆ ಅಂದರೆ ಸಂಘ ಪ್ರೇರಿತ ಪತ್ರಿಕೆಗಳು , ವೆಬ್ಸೈಟುಗಳ ಕಡೆಗೆ ವಿದ್ಯಾರ್ಥಿಗಳನ್ನು ಸೆಳೆಯುವ ಪ್ರಯತ್ನ ಇಲ್ಲಿದೆ. ಪಠ್ಯ ರಚನಾ ಸಮಿತಿಯೊಳಗೇ ಬಂದಿರುವ ಆಕ್ಷೇಪಣೆಯಿಂದಾಗಿ ಈ ಅಂಶವನ್ನು ಅಂತಿಮ ಕರಡಿನಲ್ಲಿ ತೆಗೆಯಲಾಗಿದೆ. ವಿದೇಶಿಯರ ಬಗೆಗೆ ಸಂಶಯವನ್ನು ಬಿತ್ತುವ, ಪೋಲಿಸ್ ಇಲಾಖೆಯನ್ನೂ ಕೋಮುವಾದೀಕರಿಸಲು ಪ್ರೇರೇಪಿಸುವ ಸಂಘ ಪರಿವಾರದ ಆಲೋಚನೆಯನ್ನು ಈ ಮೂಲಕ ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಹೀಗೆ 5 ನೇ ತರಗತಿಯ ಹರ್ಷವರ್ಧನನ ಕುರಿತ ಪಾಠದ ಕೊನೆಯಲ್ಲಿ 'ಚಟುವಟಿಕೆಗಳು'ಎಂಬ ಶೀರ್ಷಿಕೆಯಲ್ಲಿ "ಹರ್ಷವರ್ಧನ ಮತ್ತು ಇಮ್ಮಡಿ ಪುಲಿಕೇಶಿಯ ಜೀವನ ಚರಿತ್ರೆಯನ್ನು ಓದಿ. (ಆಕರ:ಭಾರತ_ಭಾರತಿ ಪುಸ್ತಕ ಸಂಪದ) ಎಂದು ವಿದ್ಯಾರ್ಥಿಗಳಿಗೆ ಸೂಚಿಸಲಾಗಿದೆ. ಇದು ರಾಷ್ಟ್ರೋತ್ಥಾನದ ಪ್ರಕಟಣೆ. ಹೀಗಿದೆ ವಿದ್ಯಾರ್ಥಿಗಳನ್ನು ಆರೆಸ್ಸೆಸ್‌ನ ಮತಾಂಧ ಸಾಹಿತ್ಯದೆಡೆಗೆ ತಳ್ಳುವ ಸಂಚು.

ಇವು ಪಠ್ಯ ಪುಸ್ತಕ ರಚನೆಯಲ್ಲಿ ಪಾಲ್ಗೊಂಡಿದ್ದ ಇತಿಹಾಸಕಾರರು, ಸಮಿತಿ ಸದಸ್ಯರುಗಳ ಅಭಿಪ್ರಾಯಗಳು. ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾದ ಬರಹಗಳನ್ನು ಇಲ್ಲಿ ನೀಡಲಾಗಿದೆ. ಈ ಬರಹಗಳ ಮೂಲಕ ಪಠ್ಯಪುಸ್ತಕ ರಚನಾ ಸಮಿತಿಯೊಗಳಗಡೆ ಏನೇನು ನಡೆದಿದೆ. ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬಹುದಾಗಿದೆ.

ಪಠ್ಯ ರಾಜಕೀಯ

– ಟಿ.ಎಂ. ಕುಮಾರ್

ಫೆಡರಲ್ ಸ್ವರೂಪದ ವ್ಯವಸ್ಥೆ ಇರುವ ನಮ್ಮ ನಾಡಿನಲ್ಲಿ ಶಾಲಾ ಶಿಕ್ಷಣದ ಬಗ್ಗೆ ಪಠ್ಯಕ್ರಮದ ಬಗ್ಗೆ ಸ್ಪಷ್ಟ ಧೋರಣೆಗಳು ಇರಬೇಕೆಂದು ನಿರೀಕ್ಷಿಸುವುದು ಸಹಜ. ಶಾಲೆಗಳ ಹಂತದ ಶಿಕ್ಷಣ, ರಾಜ್ಯಗಳ ಪರಿಧಿಯಲ್ಲಿ ಬರುವ ಜವಾಬ್ದಾರಿ ಎಂಬ ಸಂದೇಶ ನಮ್ಮ ಸಂವಿಧಾನದಲ್ಲಿ ಅಂತರ್ಗತವಾಗಿದೆ. ಕೇಂದ್ರವು ಕಾಲಕಾಲಕ್ಕೆ ಶಾಲಾ ಪಠ್ಯಕ್ರಮದ ರೂಪುರೇಷೆಗಳನ್ನು ರಚಿಸಿ ರಾಜ್ಯಗಳಿಗೆ ರವಾನಿಸುವ ಪದ್ಧತಿ ಜಾರಿಯಲ್ಲಿದೆ. ಈ ಪಠ್ಯಕ್ರಮದ ಚೌಕಟ್ಟನ್ನು ಆಧರಿಸಿ ರಾಜ್ಯಗಳು ಪಠ್ಯವಸ್ತು (ಸಿಲೆಬಸ್) ಹಾಗೂ ಪಠ್ಯಪುಸ್ತಕಗಳನ್ನು ರಚಿಸಿ ಅನುಷ್ಠಾನಗೊಳಿಸುತ್ತವೆ.

ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟು 2000ನೆಯ ಇಸವಿಯಲ್ಲಿ ಪ್ರಕಟವಾದಾಗ ಈ ನಂಬಿಕೆಗಳು ಮಣ್ಣುಗೂಡಿದವು. ನಾವು ಹಿಂದೆಂದೂ ಕೇಳದಂತಹ ಮೂಲಭೂತವಾದಿಗಳು ಪಠ್ಯಕ್ರಮದ ರಚನೆಯಲ್ಲಿ ತಮ್ಮ ಕೈಚಳಕ ತೋರಿ ಬಹುಧರ್ಮೀಯ ಹಾಗೂ ಬಹುಸಂಸ್ಕೃತಿಯ ನಮ್ಮ ನಾಡಿನಲ್ಲಿ ಕಂಡು ಕೇಳದಂತಹ ಅಂಶಗಳನ್ನು ಸೇರ್ಪಡೆ ಮಾಡುವಲ್ಲಿ ಯಶಸ್ಸು ಗಳಿಸಿದರು. ಪರಿಣಾಮವಾಗಿ 2000ದಲ್ಲಿ ಪ್ರಕಟವಾದ ದಾಖಲೆಯನ್ನು ತಿರಸ್ಕರಿಸಿ 2005ರಲ್ಲಿ ಮತ್ತೊಂದು ದಾಖಲೆಯನ್ನು ಕೇಂದ್ರ ರಾಜ್ಯಗಳಿಗೆ ರವಾನಿಸಿತು. ಪ್ರತಿಸಲ ಸರ್ಕಾರಗಳು ಬದಲಾವಣೆ ಕಂಡಾಗ ಶಾಲಾ ಶಿಕ್ಷಣವೆಂಬ ಗುರುತರ ಕ್ಷೇತ್ರದಲ್ಲಿ ಇಂಥ ಮಂಗಾಟಗಳನ್ನು ಕಾಣುವ ದೌರ್ಭಾಗ್ಯವು ನಮ್ಮದೇ ಅನ್ನುವುದನ್ನು ಕಾಲವೇ ಮುಂದೆ ಸ್ಪಷ್ಟಪಡಿಸಲಿದೆ. ಇಂಥ ಒಂದು ಕರಾಳ ಅಧ್ಯಾಯ ಮುಗಿಯಿತೆಂದು ಭಾವಿಸುವ ಹಲವರಿಗೆ, ಸಿ.ಎಸ್. ದ್ವಾರಕಾನಾಥರ 'ಪ್ರಾಥಮಿಕ ಶಿಕ್ಷಣದಲ್ಲಿ ಕೇಸರೀಕರಣದ ಸ್ಯಾಂಪಲ್' ಎಂಬ ಲೇಖನ (ಪ್ರ.ವಾ. ಫೆ.2) ಒಂದು ಎಚ್ಚರದ ಗಂಟೆಯಾಗಿ ಮೂಡಿ ಬಂದಿದೆ.

(ಆಯ್ದ ಭಾಗ.)

ಸಂಚಾಲಕರ ಕರಾಮತ್ತು !

– ಎ.ಎಂ. ಸುರೇಶ

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು–2005ಕ್ಕೆ ಅನುಗುಣವಾಗಿ 5 ಮತ್ತು 8ನೇ ತರಗತಿ ಪಠ್ಯಪುಸ್ತಕಗಳ ರಚನೆಗೆ ಸರ್ಕಾರ ವಿಷಯವಾರು ಪ್ರತ್ಯೇಕ ಸಮಿತಿಗಳನ್ನು ರಚಿಸಿತ್ತು. ಆದರೆ ಈ ಸಮಿತಿಗಳಿಗೆ ಪೂರ್ಣ ಸ್ವಾತಂತ್ರ್ಯ ಇರಲಿಲ್ಲ. ಸಲಹಾ ಸಮಿತಿ ಸಂಚಾಲಕರ ನಿರ್ದೇಶನಕ್ಕೆ ಅನುಗುಣವಾಗಿ ಪಠ್ಯವಸ್ತುಗಳನ್ನು ಸಿದ್ಧಪಡಿಸುವುದು ಅನಿವಾರ್ಯವಾಗಿತ್ತು. ಇದು ಪಠ್ಯಪುಸ್ತಕ ರಚನಾ ಸಮಿತಿಯಲ್ಲಿ ಕೆಲಸ ಮಾಡಿರುವ ತಜ್ಞರೊಬ್ಬರ ಸ್ಪಷ್ಟನುಡಿ. ವಾಸ್ತವವಾಗಿ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವ ಮೊದಲೇ ಪರಿಷ್ಕೃತ ಪಠ್ಯವಸ್ತು ಸಿದ್ಧವಾಗಿತ್ತು. ಅದು ಮುದ್ರಣಕ್ಕೆ ಹೋಗುವ ಹಂತದಲ್ಲಿ ಸರ್ಕಾರ ಬದಲಾಯಿತು. ಬಿಜೆಪಿ ಸರ್ಕಾರ ಬಂದ ನಂತರ ಪಠ್ಯವಸ್ತು ಬದಲಾವಣೆ ಮಾಡುವಂತೆ ಸೂಚನೆ ನೀಡಿತು.

2005 ರಿಂದ 10 ರವರೆಗೆ ಪಠ್ಯಪುಸ್ತಕ ರಚನಾ ಸಮಿತಿಯ 35 ಸಭೆಗಳು ಆಗಿವೆ. ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ (ಡಿಎಸ್‌ಇಆರ್‌ಟಿ) ನಾಲ್ಕು ಮಂದಿ ನಿರ್ದೇಶಕರ ಬದಲಾವಣೆ ಆಯಿತು. ಹಿಂದೆಲ್ಲ ಪಠ್ಯಪುಸ್ತಕ ರಚನಾ ಸಮಿತಿಯ ತೀರ್ಮಾನವೇ ಅಂತಿಮವಾಗುತ್ತಿತ್ತು. ಸಮಿತಿಯ ಕೆಲಸ ಮುಗಿದ ನಂತರ ನಿರ್ದೇಶಕರಿಗೆ ಪಠ್ಯವಸ್ತು ನೀಡುತ್ತಿತ್ತು.

ಆದರೆ ಈ ಬಾರಿ ಆ ರೀತಿ ಸಲಹಾ ಸಮಿತಿಯೊಂದನ್ನು ರಚಿಸಿ, ರಾಜಕೀಯ ಪಕ್ಷದೊಂದಿಗೆ ಗುರುತಿಸಿಕೊಂಡಿರುವ ವ್ಯಕ್ತಿಯೊಬ್ಬರನ್ನು ಅದರ ಸಂಚಾಲಕರನ್ನಾಗಿ ನೇಮಕ ಮಾಡಲಾಯಿತು. ಅವರ ನಿರ್ದೇಶನದಂತೆ ಕೆಲಸ ಮಾಡುವುದು ಅನಿವಾರ್ಯವಾಗಿತ್ತು. ಕೆಲ ವಿಷಯಗಳಲ್ಲಿ ಪಠ್ಯವಸ್ತು ಹೀಗಿಯೇ ಇರಬೇಕು ಎಂಬ ಸ್ಪಷ್ಟ ಸೂಚನೆ ನೀಡಿದ್ದರು. ಈ ರೀತಿ ಆಗಬಾರದಿತ್ತು ಎಂಬುದು ಸಮಿತಿಯಲ್ಲಿ ಕೆಲಸ ಮಾಡಿರುವ ತಜ್ಞರೊಬ್ಬರ ಬೇಸರದ ನುಡಿ. ರಚನಾ ಸಮಿತಿಗೆ ಪೂರ್ಣಪ್ರಮಾಣದ ಸ್ವಾತಂತ್ರ್ಯ ಇರಲಿಲ್ಲ. ಕೆಲವೊಂದು ಅಂಶಗಳನ್ನು ಸೇರಿಸುವ ಕುರಿತು ಲಿಖಿತ ಸೂಚನೆ ನೀಡಿದ್ದರು. ಸಲಹಾ ಸಮಿತಿಯ ನಿರ್ದೇಶನವನ್ನು ಪಾಲಿಸುವುದು ಅನಿವಾರ್ಯ ಆದ ಕಾರಣ ಮನಸ್ಸು ಒಪ್ಪದಿದ್ದರೂ ಸೇರಿಸಲಾಗಿದೆ. ಸರ್ಕಾರದ ನಿಯಂತ್ರಣದಲ್ಲಿ ಕೆಲಸ ಮಾಡುವಾಗ ರಾಜಿಯಾಗುವುದು ಅನಿವಾರ್ಯವಾಗುತ್ತದೆ. ಆದರೆ ಇದು ಒಳ್ಳೆಯ ಬೆಳವಣಿಗೆ ಅಲ್ಲ ಎಂದು ಅವರು ನೋವು ತೋಡಿಕೊಂಡರು.

ಪಠ್ಯಪುಸ್ತಕಗಳ ರಚನೆ ಹೀಗೇ ಆಗಬೇಕು ಎಂದು ಸರ್ಕಾರದ ಕಡೆಯಿಂದ ಮೌಖಿಕವಾಗಿ ಸೂಚನೆ ಇತ್ತು ಎಂದು ಅನಿಸುತ್ತದೆ. ಪಠ್ಯಪುಸ್ತಕಗಳನ್ನು ಎಲ್ಲ ಸಮುದಾಯದ ವಿದ್ಯಾರ್ಥಿಗಳು ಓದುವುದರಿಂದ ಯಾವುದೇ ಸಮುದಾಯದವರಿಗೆ ಮುಜುಗರವಾಗುವ ಅಂಶಗಳು ಇರಬಾರದು ಎಂಬುದು ಸಮಿತಿಯ ಮತ್ತೊಬ್ಬ ಸದಸ್ಯರ ಅಭಿಪ್ರಾಯ. ಆಕ್ಷೇಪಕ್ಕೆ ಒಳಗಾಗಿರುವ ಅಂಶಗಳ ಬಗ್ಗೆ ಪುನರ್ ಪರಿಶೀಲನೆ ನಡೆಸುವುದು ಒಳ್ಳೆಯದು. ಇದೆಲ್ಲವನ್ನೂ ಗಮನಿಸಿದರೆ ಎಲ್ಲೋ ಒಂದು ಕಡೆ ರಹಸ್ಯ ಕಾರ್ಯಸೂಚಿ ಕೆಲಸ ಮಾಡುತ್ತಿದೆ ಅನಿಸುತ್ತದೆ. ಸಮಿತಿ ಸದಸ್ಯರನ್ನು ಕರೆದು ಈ ಬಗ್ಗೆ ಮತ್ತೊಮ್ಮೆ ಸಮಾಲೋಚಿಸುವುದು ಸೂಕ್ತ. ತರಾತುರಿಯಲ್ಲಿ ಮುದ್ರಣಕ್ಕೆ ಕಳುಹಿಸುವುದು ಸರಿಯಲ್ಲ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಬೇಕು ಎಂಬುದು ಅವರ ಅಭಿಪ್ರಾಯ.

'ಅಖಂಡ ಭಾರತದ ನಕ್ಷೆ ಹಾಕಿರುವುದು ತಪ್ಪಲ್ಲ. ಹಿಂದೂ ಕುಟುಂಬವನ್ನು ಮಾತ್ರ ಉಲ್ಲೇಖಿಸಿರುವುದರಲ್ಲಿ ತಪ್ಪು ಹುಡುಕುವುದು ಸರಿಯಲ್ಲ. ಬಹುಸಂಖ್ಯಾತ ಸಮುದಾಯದವರ ಕುಟುಂಬದ ಬಗ್ಗೆ ವಿರಿಸದೇ ಅಲ್ಪ ಸಂಖ್ಯಾತ ಸಮುದಾಯದ ಕುಟುಂಬದ ಬಗೆಗೆ 'ವಿವರಿಸಲು ಸಾಧ್ಯವೇ' ಎಂಬುದು ಪಠ್ಯಪುಸ್ತಕ ಸಮಿತಿಯಲ್ಲಿ ಕೆಲಸ ಮಾಡಿರುವ ಮತ್ತೊಬ್ಬ ತಜ್ಞರ ಪ್ರಶ್ನೆ. 'ಐದನೇ ತರಗತಿಯ ಸಮಾಜ ವಿಜ್ಞಾನದಲ್ಲಿ ನಾವು ಸೇರಿಸಿರುವ ಅಂಶಗಳು ಸರಿ ಇವೆ. ಆ ಬಗ್ಗೆ ಆಕ್ಷೇಪಣೆ ಇದ್ದರೆ ಇಲಾಖೆಯವರು ಉತ್ತರ ನೀಡಬೇಕಾಗುತ್ತದೆ. ಅದಕ್ಕೆ ನಾವು ಹೊಣೆಯಲ್ಲ. ಸಮಿತಿಯಲ್ಲಿ ಎಲ್ಲ ವಿಭಾಗಕ್ಕೆ ಸೇರಿದ ಸದಸ್ಯರು ಇದ್ದರು.

ಎಲ್ಲರ ಅಭಿಪ್ರಾಯ, ಸಲಹೆಗಳನ್ನು ಆಲಿಸಲಾಗಿದೆ. ಯಾವ ಲೋಪ ಆಗಿಲ್ಲ, ಎಂಬುದು ಅವರ ಸಮರ್ಥನೆ.

★

'ತಪ್ಪುಗಳನ್ನು ತಿದ್ದಿಕೊಳ್ಳಲಾಗಿದೆ'

– ಪ್ರೊ॥ ವಿಜಯ್ ಪೂಣಚ್ಚ ತಂಬಂಡ


ಎಂಟನೆಯ ತರಗತಿಗೆ ಸಿದ್ಧಪಡಿಸಲಾದ ಸಮಾಜ ವಿಜ್ಞಾನ ಪಠ್ಯರಚನಾ ಸಮಿತಿಯ ಅಧ್ಯಕ್ಷನಾಗಿರುವುದರಿಂದ ಈ ಪಠ್ಯಕ್ಕೆ ಸಂಬಂಧಿಸಿದಂತೆ ಕೆಲವು ಮಾಹಿತಿಗಳನ್ನು ನೀಡುತ್ತಿದ್ದೇನೆ. ದ್ವಾರಕಾನಾಥ್ ಅವರು ಪ್ರಜಾವಾಣಿಯ ಲೇಖನದಲ್ಲಿ ಉಲ್ಲೇಖಿಸಿರುವ 'ಅಖಂಡ ಭಾರತ'ದ ನಕ್ಷೆಯ ಬಗ್ಗೆ ನಮ್ಮ ಪಠ್ಯ ಪುಸ್ತಕ ರಚನಾ ಸಮಿತಿಯವರೇ ಭಿನ್ನಾಭಿಪ್ರಾಯ ಸೂಚಿಸಿ, ಅದಕ್ಕೆ ಸಂಬಂಧಿಸಿದ ನಿರ್ಣಯವನ್ನು ಎರಡು ತಿಂಗಳ ಹಿಂದೆಯೇ ಮಾಡಿದ್ದಾರೆ. ಜನವರಿ ತಿಂಗಳಲ್ಲಿ ಈ ಕುರಿತಂತೆ ಖುದ್ದಾಗಿ ನಾನೇ ಸಂಬಂಧಿಸಿದವರಿಗೆ ಪತ್ರ ಬರೆದು ಸಂಬಂಧಿಸಿದ ಭೂಪಟವನ್ನು ಕೈಬಿಡುವಂತೆ ಕೋರಿದ್ದೆನು. ಈ ಹಿನ್ನೆಲೆಯಲ್ಲಿ 8ನೆಯ ತರಗತಿ ವಿದ್ಯಾರ್ಥಿಗಳಿಗೆ ನೀಡುವ ಪಠ್ಯದಲ್ಲಿ ವಿವಾದಿತ ಭೂಪಟವನ್ನು ಸೇರಿಸುವುದಿಲ್ಲ ಎಂದು ಸಂಬಂಧಿಸಿದ ಅಧಿಕಾರಿಗಳು ತಿಳಿಸಿದ್ದಾರೆ. ದ್ವಾರಕಾನಾಥ್ ಅವರು ಸುಮಾರು ಮೂರು ತಿಂಗಳ ಹಿಂದೆ ತಯಾರಾದ ಸಮಾಜ ವಿಜ್ಞಾನ ಪಠ್ಯದ ಕರಡನ್ನು ನೋಡಿ ಲೇಖನ ಬರೆದಿರುವುದರಿಂದ ಮಾಹಿತಿ ದೋಷವಾಗಿರಬಹುದು ಎಂದು ನನ್ನ ಅಭಿಪ್ರಾಯ.

ವೇದಗಳ ಕಾಲವನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಸಹಜವಾಗಿಯೇ ವೈದಿಕ ಸಂಸ್ಕೃತಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಮಾಹಿತಿ ನೀಡಬೇಕಾಗುತ್ತದೆ. ಹಾಗೆ ನೋಡಿದರೆ ಇಲ್ಲಿಯವರೆಗೆ ಬಂದ ಸಮಾಜವಿಜ್ಞಾನ ಪಠ್ಯಗಳಿಗಿಂತ ಭಿನ್ನವಾಗಿ ಪ್ರಸ್ತುತ ಪಠ್ಯವನ್ನು ರಚಿಸಲಾಗಿದೆ. ಚರಿತ್ರೆ, ಭೂಗೋಳದೊಂದಿಗೆ ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ ಹಾಗೂ ವ್ಯವಹಾರ ಅಧ್ಯಯನಗಳನ್ನು ಎನ್‌ಸಿಎಫ್–2005 ಪ್ರಕಾರ ರಚಿಸಲಾಗಿರುವುದನ್ನು ಗಮನಿಸಬಹುದು. ಇಲ್ಲಿಯವರೆಗೆ ಬಂದ ಪಠ್ಯಗಳಲ್ಲಿ 'ದಾಸ' ಹಾಗೂ 'ದಸ್ಯು'ಗಳ ಇರುವುದನ್ನು ಪರಿಗಣಿಸಿರಲಿಲ್ಲ. ಅವರಿಗೆ ನೂರಾರು ದನಗಳು ಹಾಗೂ ಕೋಟೆಗಳಿದ್ದ ಮಾಹಿತಿಗಳು ಇರಲಿಲ್ಲ. ವೈದಿಕರನ್ನು ತಿರಸ್ಕರಿಸಿದ ಶ್ರೀಮಂತರಾದ 'ಪ್ರಾಣಿ'ಗಳ ಬಗ್ಗೆಯು ಮಾಹಿತಿಗಳು ಇರಲಿಲ್ಲ. ಇವರೆಲ್ಲರನ್ನು ಕಾಲಾನುಕ್ರಮದಲ್ಲಿ ಸೋಲಿಸಿದ ನಂತರ ವೈದಿಕ ಸಂಸ್ಕೃತಿಯು ಪ್ರಬಲವಾಯಿತು ಎನ್ನುವ ವಿವರಗಳನ್ನು ಈ ಪಠ್ಯದಲ್ಲಿ ನೀಡಲಾಗಿದೆ. ಪಠ್ಯದಲ್ಲಿರುವ ಈ ಬಗೆಯ ವಿವರಗಳು ವೇದಗಲ ಕಾಲವನ್ನು ವೈಭವೀಕರಿಸುತ್ತದೆ ಎಂದರೆ ಸದು ಸರಿಯಲ್ಲ. ಬಹುತೇಕ ಸಮಾಜ ವಿಜ್ಞಾನ ಪಠ್ಯಗಳಲ್ಲಿ ಸಮಾನ್ಯವಾಗಿರುವ ನೂರಾರು ಸಂಖ್ಯೆಯಲ್ಲಿದ್ದ ಇಸವಿಗಳನ್ನು ಹಾಗೂ ಅನಗತ್ಯ ವಿವರಗಳನ್ನು ಪ್ರಸ್ತುತ ಪಠ್ಯದಿಂದ ಕೈಬಿಟ್ಟು ವಿದ್ಯಾರ್ಥಿಗಳು ಕ್ರಿಯಾಶೀಲರಾಗುವಂತೆ ವಿಷಯದ ಒಳನೋಟಗಳಿಗೆ ಮಹತ್ವ ನೀಡಿದ್ದನ್ನು ಗಮನಿಸಬಹುದಾಗಿದೆ.

ರಾಜ್ಯಶಾಸ್ತ್ರಕ್ಕೆ ಸಂಬಂಧಿಸಿದಂತೆ ದ್ವಾರಕಾನಾಥ್ ಅವರು ಮಾಡಿರುವ ಕೆಲವು ಆಕ್ಷೇಪಗಳನ್ನು ಈಗಾಗಲೇ ಸರಿಪಡಿಸಿಕೊಳ್ಳಲಾಗಿದೆ (ಉದಾಹರಣೆಗೆ ಕಮ್ಯುನಿಸ್ಟ್ ಸರ್ಕಾರದಲ್ಲಿ 'ಸ್ವಾತಂತ್ರವೇ ಇಲ್ಲದ ವ್ಯವಸ್ಥೆ ಕಂಡುಬರುತ್ತದೆ.....ಇತ್ಯಾದಿ). ಉಳಿದಂತೆ ಬಹುತೇಕವಾಗಿ ಅವುಗಳು ಪಠ್ಯದ ವಿಷಯಕ್ಕಿಂತ ವಿದ್ಯಾರ್ಥಿಗಳ ಚಟುವಟಿಕೆಗಳಿಗೆ ಸಂಬಂಧಿಸಿದ್ದಾಗಿವೆ.

ಮುಸ್ಲಿಂ ಅಲ್ಪಸಂಖ್ಯಾತರ ಅಭಿವೃದ್ಧಿಯೋ ಅಭಿವೃದ್ಧಿ

...ರ್ನಾಟಕ ರಾಜ್ಯದ ಸಚಿವ ಸಂಪುಟದಲ್ಲಿ ಇದ್ದ ...ಒಬ್ಬ ಮುಸ್ಲೀಮ್ ಎಂದರೆ ಅವರು ಪ್ರೊ. ...ಮ್ತಾಜ್ ಅಲಿ ಖಾನ್ ಎಂಬ ಘನ ...ದ್ವಾಂಸರು. ಸಚಿವ ಸ್ಥಾನಕ್ಕೆ ಬರುವ ...ದಲು-ಬಂದ ಮೇಲೂ ಅವರು ಆರೆಸ್ಸೆಸ್ ...ತುತಿಯನ್ನೇ ಊದುತ್ತಿದ್ದರೂ, ಸಂಘ ...ರಿವಾರದ ಜನರ ಪುಂಟಾಟಿಕೆಗಳನ್ನೆಲ್ಲಾ ಬೆಂಬಲಿಸಿ ಪೀಟಿಲು ಕೊಯ್ದರೂ ಅವರ ಕುರ್ಚಿ ಕಿತ್ತುಕೊಳ್ಳಲಾಯಿತು. ಈಗ ಸಚಿವ ಸಂಪುಟದಲ್ಲಿ ಒಬ್ಬರೇ ಒಬ್ಬರು ಕೂಡ ಮುಸ್ಲಿಂ ಸಚಿವರಿಲ್ಲ.



ಮುಸ್ಲಿಂ ಸಚಿವರಿಲ್ಲದಿದ್ದರೇನು, ಮುಸ್ಲಿಂ ಅಲ್ಪಸಂಖ್ಯಾತರ ಅಭಿವೃದ್ಧಿ ಕಾರ್ಯ ಮಾತ್ರ ಈ ಸರ್ಕಾರದ ಅಡಿಯಲ್ಲಿ ಭರ್ಜರಿಯಾಗಿ ನಡೆದಿದೆ. ಅನುಮಾನವಾ ? ಬೇಕಿದ್ದರೆ ಈ ಮಾಹಿತಿನೋಡಿ.

ರಾಜ್ಯದಲ್ಲಿ ಅಲ್ಪ ಸಂಖ್ಯಾತ ಅಭಿವೃದ್ಧಿ ನಿಗಮ ಎಂಬ ಒಂದು ಸಂಸ್ಥೆ ಇದೆ. ಕಳೆದ ಎರಡು ವರ್ಷಗಳಿಂದ ಈ ನಿಗಮಕ್ಕೆ ಅಧ್ಯಕ್ಷರು ಅಬ್ಬೂಬಕರ್ ಅಂತ. ಕರಾವಳಿಯ ಕಡೆಯವರು. ಅವರು ಮಾಡಿರುವ ಅಭಿವೃದ್ಧಿ ಕಾರ್ಯ ನೋಡಿ. ಅಧ್ಯಕ್ಷರಾಗಿ ಅವರು ಪ್ರಯಾಣ ವೆಚ್ಚವಾಗಿ ರೂ.700.00 ಮಾತ್ರವೇ ಖರ್ಚು ಮಾಡಬೇಕು. ಕಳೆದ ಎರಡು ವರ್ಷಗಳಲ್ಲಿ ಅವರು 76 ಬಾರಿ ಬೆಂಗಳೂರು-ಮಂಗಳೂರು ನಡುವೆ ವಿಮಾನ ಪ್ರಯಾಣ ಮಾಡಿದ್ದಾರೆ. ಅದೇ ರೀತಿ ದೆಹಲಿ, ಮುಂಬೈ, ಆಗ್ರಾಗಳಿಗೂ ಹಾರಾಡಿದ್ದಾರೆ.

2009-10 ರಲ್ಲಿ ಗೌರವಧನ, ಮನೆ ಬಾಡಿಗೆ, ದೂರವಾಣಿ, ಮನರಂಜನಾ ವೆಚ್ಚ ಡಿಸೆಲ್, ವಿಮಾನ ಪ್ರಯಾಣ ಭತ್ಯೆ ಇತ್ಯಾದಿಗಳಿಗಾಗಿ ಒಟ್ಟು 11,12,749.00 ರೂಪಾಯಿಗಳಷ್ಟು ವೆಚ್ಚವಾಗಿದೆ. 2010-11 ರಲ್ಲಿ ಮತ್ತಷ್ಟು ಪ್ರಗತಿಯಾಗಿದೆ. ವರ್ಷದಲ್ಲಿ 12,65,809.00 ವೆಚ್ಚವಾಗಿದೆ. 2011-12 ರಲ್ಲಿ (ಅಕ್ಟೋಬರ್‌ವರೆಗೆ) 5,57,147.00 ರೂಪಾಯಿ ವೆಚ್ಚವಾಗಿದೆ. ಅಲ್ಪಸಂಖ್ಯಾತರ ಅಭಿವೃದ್ಧಿ ಎಂದರೆ ಏನು ಸುಮ್ಮನೆಯೇ ?

ಅಭಿವೃದ್ಧಿ ಬೇಕು ಎಂದರೆ ಖರ್ಚು ಮಾಡಬೇಕಪಾ. ನಿಗಮದ ಅಧ್ಯಕ್ಷರ ಊಟದ ಖರ್ಚು ನೋಡಿ. ಒಂದು ದಿನದ ಊಟದ ಖರ್ಚಿಗೆ 300 ರೂಪಾಯಿಗಳ ಮಿತಿ ಇದೆಯಂತೆ. ಪಾಪ ಓಡಾಡಿ ಓಡಾಡಿ ದಣಿಯುವ ಅಧ್ಯಕ್ಷರು ಸ್ವಲ್ಪ ಜಾಸ್ತಿ ಖರ್ಚು ಮಾಡುತ್ತಾರೆ. ಒಂದು ಚಿಕನ್ ಬಿರ್ಯಾನಿಗೆ 380.00 ರೂಪಾಯಿಗಳು. ಒಂದು ಮಟನ್ ಬಿರಿಯಾನಿಗೆ 400.00 ರೂಪಾಯಿಗಳು. ಬೋನ್‌ಲೆಸ್ ಚಿಕನ್‌ಗೆ 350.00 ರೂಪಾಯಿಗಳು. ನೀರಿನ ಬಾಟಲಿಗೆ 80.00 ರೂಪಾಯಿಗಳು.

ಹೌದು, ಇಷ್ಟೆಲ್ಲಾ ಖರ್ಚು ಮಾಡಿ ಅಲ್ಪ ಸಂಖ್ಯಾತರಿಗಾಗಿ ಏನು ಮಾಡಿದ್ದಾರೆ ಅಂತೀರಾ ? ಅಯ್ಯೋ ನಿಮ್ಮದೊಳ್ಳೆ ಕತೆ ಆಯ್ತು ಸ್ವಾಮಿ. ಅವರನ್ನು ನೇಮಕ ಮಾಡಿದ ಯಡಿಯೂರಪ್ಪ ಸರ್ಕಾರ, ಆನಂತರ ಬಂದ ಸದಾನಂದ ಗೌಡರ ಸಕಾರದಲ್ಲೇ ಈ ಪ್ರಶ್ನೆಯನ್ನು ಯಾರೂ ಕೇಳಿಲ್ಲ. ಕೇಶವ ಕೃಪದ ವೀರ ಕೇಸರಿಗಳೂ ಕೇಳಿಲ್ಲ. ನೀವ್ಯಾಕೆ ತಲೆ ಕೆಡಿಸಕೋತೀರಾ ಸ್ವಾಮಿ. ಸುಮ್ಮನೆ ಅಧ್ಯಕ್ಷರು ಅವರ ಪಾಡಿಗೆ ಕೆಲಸ ಮಾಡಲು ಬಿಡಿ.

"...'ಸರಿಯಾಗಿ' ಕೆಲಸ ಮಾಡದಿದ್ದರೆ ಕತ್ತರಿಸಿ ಹಾಕುತ್ತೇನೆ..."

ಸಮಾಜ ಕಲ್ಯಾಣ ಸಚಿವರ ನುಡಿ ಮುತ್ತು

ನಮ್ಮ ರಾಜ್ಯಕ್ಕೊಬ್ಬರು ಸಮಾಜ ಕಲ್ಯಾಣ ಸಚಿವರು ಇದ್ದಾರೆ. ನಾರಾಯಣ ಸ್ವಾಮಿ ಅಂತ ಅವರ ಹೆಸರು. ಅವರು ಚಿಕ್ಕಬಳ್ಳಾಪುರ ಜಿಲ್ಲೆಗೆ ಉಸ್ತುವಾರಿ ಮಂತ್ರಿಯೂ ಆಗಿದ್ದಾರೆ. 'ಪ್ರಗತಿ' ಪರಿಶೀಲನೆಯ ಸಂಬಂಧ ಅವರು ಅಧಿಕಾರಿಗಳನ್ನು ಕುರಿತು ಈ ಮೇಲಿನ ಅಮೂಲ್ಯ ಮಾತುಗಳನ್ನು ಹೇಳಿದ್ದಾರಂತೆ. ಸರಿಯಾಗಿ ಕೆಲಸ ಆಗದಿದ್ದರೆ....ಕತ್ತರಿಸಿ ಹಾಕುತ್ತೇನೆ.....ಅಂತ. ಆಹಾ !! ಏನು ಸರ್ಕಾರ !! ಏನು ಆಡಳಿತ !!! ಏನು ಜನಪರ ಕಾಳಜಿ. ???

ಚಿಕ್ಕಬಳ್ಳಾಪುರದ ಜಿಲ್ಲೆಯ ಅಭಿವೃದ್ಧಿ ಕಾರ್ಯಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಚಿವರು ಈ ರೀತಿ ಗುಡುಗಿದ್ದಾರಂತೆ. ಈ ಸಭೆ ಮುಗಿಸಿ ಬಾಗೆಪಲ್ಲಿಗೆ ತೆರಳಿದ ಸಚಿವರೂ ಅಲ್ಲಿಯೂ ಇದೇ ರೀತಿಯಾಗಿ ಅಧಿಕಾರಿಗಳಿಗೆ ಧಮಕಿ ಹಾಕಿದ್ದಾರಂತೆ. ನಾರಾಯಣ ಸ್ವಾಮಿಗಳ ತವರು ನೆಲವಾದ ಆನೆಕಲ್ಲಿನಲ್ಲಿಯೂ ಸಚಿವರು ಮತ್ತು ಸಚಿವರ ಸುತ್ತ ಸದಾ ಸುತ್ತುವ ರಿಯಲ್ ಎಸ್ಟೇಟ್ 'ಅಭಿವೃದ್ಧಿಕೋರರು', ಸಚಿವರ ಅನುಯಾಯಿ ಕಟ್ಟಾಳುಗಳು ತಮ್ಮ ಕ್ಷೇತ್ರದಲ್ಲಿ ತಮ್ ಮಾತು ಕೇಳದ ಅಧಿಕಾರಿಗಳಿಗೆ ಹೀಗೆಯೇ ಗೌರವ ವಂದನೆ ಸಲ್ಲಿಸಿರುವರಂತೆ. ತಮ್ಮ ಮಾತು ಕೇಳಿ, ಮಾಡಬೇಕಾದ ಕೆಲಸ' ಮಾಡಿಬಿಟ್ಟರೆ, ಕೊಡಬೇಕಾದದ್ದು, ಅಂದರೆ ಪರ್‌ಸೆಂಟೇಜ್ ವ್ಯವಹಾರಗಳ ಬಾಬ್ತು ಸಂದು ಸರಿಯಾಗಿ ಬಿಟ್ಟರೆ ಈ ಪರಿ ಗೌರವ ವಂದನೆ ಸಲ್ಲಿಸದೇ ನಾಜೂಕಾಗಿ ನಡೆದುಕೊಳ್ಳುವರಂತೆ. ಇದು ಆನೇಕಲ್‌ನ ಹಲವು ಅನುಭವಸ್ಥರ ಮಾತು.

ಚಿಕ್ಕ ಬಳ್ಳಾಪುರದಲ್ಲಿ ಸಚಿವರು ಗರಂ ಆಗಲು ಪ್ರೇರೇಪಣೆಯಾದ ಅಂಶವಾದರೂ ಏನು ಪತ್ತೆಯಾಗಬೇಕಾಗಿದೆ.

ಕೈ ಕಡಿಯಿರಿ, ನಾಲಿಗೆ ಕತ್ತರಿಸಿ ಎಂದು ಕರೆಕೊಡುವ ಪಕ್ಷದ ಅಧ್ಯಕ್ಷರ ಮುಂದಾಳತ್ವದಲ್ಲಿ ಭಗವದ್ಗೀತೆ ಒಪ್ಪದವರೂ ದೇಶಾಂತರ ಹೋಗಿ ಎನ್ನುವ ಶಿಕ್ಷಣ ಸಚಿವರ ಸಹವಾಸದಲ್ಲಿ ಸಮಾಜ ಕಲ್ಯಾಣ ಸಚಿವರು ಇಷ್ಟಾದರೂ ಹೇಳದಿದ್ದರೆ ಪಾಪ ಅವರಲ್ಲಿ ಸಂಸ್ಕಾರ, ಸಂಸ್ಕೃತಿ ಬೆಳೆಸಿದ ಆರೆಸ್ಸೆಸ್ಸಿಗೇ ಅವಮಾನ ಅಲ್ಲವೇ ?

ಬಾಲಂಗೋಚಿ

ಸದಾನಂದಗೌಡರ ಹೆಗಲಲ್ಲಿ 20 ಖಾತೆ

ಜನ ಮೆಚ್ಚುವ ಆಡಳಿತ ಕೊಡುತ್ತೇನೆ... ಅಭಿವೃದ್ಧಿಯೇ ನಮ್ಮ ಗುರಿ ನೀವು ಸುಮ್ಮನೇ ನೋಡುತ್ತಾ ಇರಿ... ಎಂದು ಬೊಬ್ಬಟ್ಟ ಸದಾನಂದ ಗೌಡರ ಆಡಳಿತ ಬಿರುಸು ಕಳೆದುಕೊಂಡು, 'ಉತ್ಸಾಹ' ಹಳಸಿಕೊಂಡು ಕುಳಿತಿರುವುದು ನಮಗೆಲ್ಲಾ ಗೊತ್ತೇ ಗೊತ್ತು. ಯಡಿಯೂರಪ್ಪ ಸರ್ಕಾರದ ಹಗರಣ, ಭ್ರಷ್ಟತೆಗಳ ಹೊಲಸು ಬೀರುತ್ತಿರುವ ಗಬ್ಬುನಾಥವನ್ನು ಮರೆಮಾಚಿ ತಿಪ್ಪೆ ಸಾರಿಸುವುದೇ ಈ ಸರ್ಕಾರದ ಒಂದು ಮುಖ್ಯ ಅಜೆಂಡಾ ಎಂಬ ವಿಚಾರ ರಾಜ್ಯದ ಪಜ್ಞಾವಂತರಿಗೆ ಗೊತ್ತಿದ್ದದ್ದೇ ಆಗಿತ್ತು.

ಈ ಪ್ರಕ್ರಿಯೆಯಲ್ಲಿ ಸದಾನಂದಗೌಡರ ಪಾಲಿಗೆ ಹೊಸ ಹೊಸ ಖಾತೆಗಳು ಹೆಗಲಿಗೆ ಏರುತ್ತಲೇ ಹೊರಟಿವೆ. ಮೊನ್ನೆ 'ಸದನದಲ್ಲಿ ನೀಲಿ ಚಿತ್ರ' ಹಗರಣದ ನಂತರ ಮೂವರ ಸಚಿವರ ಖಾತೆಗಳು, ಹಾಗೂ ಆಚಾರ್ಯರ ನಿಧನ ನಂತರ ಅವರ ಖಾತೆ ಎಲ್ಲ ಸೇರಿ ಈಗ ಸದಾ ಹೆಗಲ ಮೇಲೆ ಬರೋಬ್ಬರಿ 20 ಖಾತೆ. ಭಲೆ ಸದಾನಂದ !! ಭಲೇ ನೀಲಿ ಹುಡುಗರೇ !!.

ಕುರ್ಚಿ

ಆರ್. ರಾಮಕೃಷ್ಣ

400 ರೂಪಾಯಿ ವೃದ್ಧಾಪ್ಯ ವೇತನ ಪಡೆಯಲು 40 ತರದ ಸರ್ಕಸ್ ಮಾಡಬೇಕೇ?

ರಾಜ್ಯ ಬಿಜೆಪಿ ಸರ್ಕಾರದ ಅವಧಿಯಲ್ಲಿ ಜನರ ಪಾಲಿಗೆ ಸರ್ಕಾರವೇ ಇಲ್ಲ ಅಂತ ಈ ಅಂಕಣದಲ್ಲಿ ಹಲವಾರು ಸಾರಿ ಹೇಳಲಾಗಿದೆ. ದಿನ ಕಳೆದಂತೆ ಅದನ್ನು ಸಮರ್ಥಿಸುವ ವರದಿಗಳು ಬರುತ್ತಿವೆಯೇ ಹೊರತು ಸರ್ಕಾರ ಜೀವಂತ ಇರುವುದಕ್ಕೆ ಸಾಕ್ಷಿಗಳು ದೊರೆಯುತ್ತಿಲ್ಲ. ಈಗೋ ನೋಡಿ. ಕರ್ನಾಟಕ ರಾಜ್ಯದಲ್ಲಿ ವಿಧವಾ ವೇತನ, ಅಂಗವಿಕಲರ ವೇತನ, ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ ವೇತನ.... ಈ ಯಾವ ವೇತನಗಳನ್ನು ರಾಜ್ಯ ಸರ್ಕಾರ ಜನರಿಗೆ ಸರಿಯಾಗಿ ನೀಡುತ್ತಿಲ್ಲ. ಕಳೆದ ನಾಲ್ಕು ತಿಂಗಳಿಂದ ಈ ವೇತನ ಪಾವತಿಯನ್ನು ಬಹುತೇಕ ನಿಲ್ಲಿಸಲಾಗಿದೆ. ಸಿಗುವ 400 ರೂಪಾಯಿಗಳ ಮಾಸಿಕ ವೇತನಕ್ಕಾಗಿ ವಯಸ್ಸಾದವರು, ಅಶಕ್ತ ವಿಧವೆಯರು, ಅಂಗವಿಕಲರು ಕಾದು ಕಾದು ಪರಿತಪಿಸಬೇಕಾದ, ಕಛೇರಿಗಳಿಗೆ ಅಲ್ಲಿ ಕಂಬದಿಂದ ಕಂಬಕ್ಕೆ ಅಲೆದಾಡ ಬೇಕಾದ ಸನ್ನಿವೇಶವನ್ನು ಸೃಷ್ಟಿಸಲಾಗಿದೆ. ಜೆಡಿ(ಎಸ್)-ಬಿಜೆಪಿ ಸರ್ಕಾರದ ಅವಧಿಯಲ್ಲಿ ಜಾರಿಗೆ ಬಂದ ಸಂಧ್ಯಾ ಸುರಕ್ಷಾ ಯೋಜನೆಯ ಫಲಾನುಭವಿಗಳ ಪಾಡಂತೂ ಹೇಳ ತೀರದ್ದಾಗಿದೆ. ಕೊಡುವುದು 400 ರೂಪಾಯಿಗಳು. ಆದರೆ ಅದನ್ನು ಪಡೆದುಕೊಳ್ಳಲು 40 ತರದ ಸರ್ಕಸ್‌ಗಳನ್ನು ವಯಸ್ಸಾದ ಜನರ ಕೈಯಲ್ಲಿ ಮಾಡಿಸಲಾಗುತ್ತಿದೆ.

ಸಂಧ್ಯಾ ಸುರಕ್ಷಾ ವೇತನ ಮಂಜೂರಾದ ಸರ್ಟಿಫಿಕೇಟ್ ತನ್ನಿ.... ಅದರ ಜೆರಾಕ್ಸ್ ಕೊಡಿ, ಇನ್ನೊಮ್ಮೆ ಫೋಟೋ ಕೊಡಿ, ಈ ಹಿಂದೆ ವೇತನ ಪಡೆದಿರುವುದಕ್ಕೆ ಆಧಾರ ತೋರಿಸಿ...., ಪೋಸ್ಟ್ ಬಂದಿರುವ ದಾಖಲೆ ತಂದು ಕೊಡಿ, ಮತ್ತೊಮ್ಮೆ ಅರ್ಜಿ ಹಾಕಿ.... ವಿಲೇಜ್ ಅಕೌಂಟೆಂಟ್ ಶಿಫಾರಸ್ಸು ತನ್ನಿ, ರೆವಿನ್ಯೂ ಇನ್‌ಸ್ಪೆಕ್ಟರ್ ವರದಿ ಬರಲಿ...ತಹಿಸೀಲ್ದಾರ್ ಸೈನ್ ಆಗಬೇಕು.... ಇವೆಲ್ಲಾ ಈಗಾಗಲೇ ವೇತನ ಪಡೆದುಕೊಂಡ ಮುದುಕ ಮುದುಕಿಯರಿಗೆ ನಮ್ಮ ಬಿಜೆಪಿ ಸರ್ಕಾರದ ಅಧಿಕಾರಿ ವರ್ಗದಿಂದ ಸಲ್ಲುತ್ತಿರುವ 'ನುಡಿ ನಮನಗಳು'. ಆಹಾ ಏನು ಭಕ್ತಿಯಪ್ಪಾ ?! ಬಿಜೆಪಿ ಸರ್ಕಾರಕ್ಕೆ ಹಿರಿಯರ ಬಗೆಗೆ. [illegible] ವಿಭಾಗಗಳ ಬಗ್ಗೆ.

20ನೇ ಮಹಾಧಿವೇಶನಕ್ಕೆ ದಿನಗಣನೆ ಕೋಯಿಕ್ಕೋಡ್‌ನಲ್ಲಿ ಭರದ ಸಿದ್ಧತೆ



ಏಪ್ರಿಲ್ 4ರಿಂದ 9ರ ವರೆಗೆ ಕೇರಳದ ಕೋಯಿಕ್ಕೋಡ್ (ಕಲ್ಲಿಕೋಟೆ)ಯಲ್ಲಿ ಸಿಪಿಐಎಂನ 20ನೇ ಮಹಾಧಿವೇಶನ ನಡೆಯಲಿದೆ. ಪಕ್ಷದ ಈ ಮಹಾ ಉತ್ಸವಕ್ಕೆ ಸಕಲ ಸಿದ್ಧತೆಗಳು ನಡೆದಿವೆ.

ಕರಡು ವರದಿ

ಮಹಾಧಿವೇಶನಕ್ಕೆ ಎರಡು ತಿಂಗಳು ಮುಂಚಿತವಾಗಿ ಕರಡು ವರದಿಯನ್ನು ಸಾರ್ವಜನಿಕ ಚರ್ಚೆಗೆ ಬಿಡುಗಡೆ ಮಾಡಲಾಗಿದೆ. ಜನವರಿ 17ರಿಂದ 20ರ ವರೆಗೆ ಕೊಲ್ಕತ್ತಾದಲ್ಲಿ ಸಭೆ ಸೇರಿದ ಸಿಪಿಐ(ಎಂ)ನ ಕೇಂದ್ರ ಸಮಿತಿ ಕರಡು ವರದಿಯನ್ನು ಅನುಮೋದಿಸಿದೆ. ಇದೊಂದು ಸಾರ್ವಜನಿಕ ದಾಖಲೆಯಾಗಿದ್ದು, ಪಕ್ಷದ ನೀತಿ-ನಿಲುವುಗಳು ಸಾರ್ವಜನಿಕರಿಗೂ ಗೊತ್ತಾಗಬೇಕು, ಎಲ್ಲರನ್ನೂ ಈ ಚರ್ಚೆಯಲ್ಲಿ ಪಾಲ್ಗೊಳಿಸಬೇಕು ಎಂಬ ನೆಲೆಯಲ್ಲಿ ಪಕ್ಷದ ಅಧಿಕೃತ ವೆಬ್‌ಸೈಟ್ ಸೇರಿದಂತೆ ವಿವಿಧ ಮಾಧ್ಯಮಗಳಲ್ಲಿ ಬಿಡುಗಡೆಗೊಳಿಸಲಾಗಿದೆ.



ಕಳೆದ ನಾಲ್ಕು ವರ್ಷಗಳಲ್ಲಿ ಆಗಿರುವ ಬದಲಾವಣೆಗಳು, ರಾಷ್ಟ್ರೀಯ-ಅಂತಾರಾಷ್ಟ್ರೀಯ ವಿದ್ಯಮಾನ, ಆರ್ಥಿಕ-ಸಾಮಾಜಿಕ ಬಿಕ್ಕಟ್ಟು, ಬದಲಾವಣೆಗಳು, ರಾಜಕೀಯ ಹಾಗೂ ಸೈದ್ಧಾಂತಿಕ ವಿವಿಧ ವಿಷಯಗಳಿಗೆ ಸಂಬಂಧಪಟ್ಟಂತೆ ಪಕ್ಷದ ದೃಷ್ಟಿಕೋನವನ್ನು ತೆರೆದಿಡಲಾಗಿದೆ.

ದೇಶಾದ್ಯಂತ ಪಕ್ಷದ ಘಟಕಗಳು, ಸದಸ್ಯರು ಚರ್ಚೆ ನಡೆಸಿ ಕರಡು ವರದಿಗೆ ತಿದ್ದುಪಡಿಯನ್ನು ಲಿಖಿತವಾಗಿ ಕಳುಹಿಸಬಹುದು. ಈ ಮೇಲ್ ಮೂಲಕವೂ ತಮ್ಮ ಅಭಿಪ್ರಾಯಗಳನ್ನು ಹಂಚಲು ಪಕ್ಷ ವೇದಿಕೆ ಕಲ್ಪಿಸಿದೆ.

ಈ ವಿವರವಾದ ವರದಿಯ ಮೇಲೆ ಮಹಾಧಿವೇಶನದಲ್ಲಿ ಪ್ರತಿನಿಧಿಗಳು ಚರ್ಚೆ ನಡೆಸುವರು. ಅಂತಿಮವಾಗಿ ಬದಲಾವಣೆಗಳೊಂದಿಗೆ ಅಂಗೀಕಾರಗೊಳ್ಳಲಿದೆ.

ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಕಾಲಮಿತಿ

ಪಕ್ಷದ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಕಾಲಮಿತಿ ಹಾಕುವ ಪ್ರಸ್ತಾಪ ಮತ್ತೊಂದು ಬಹುಚರ್ಚಿತ ವಿಷಯ. ಮೂರು ಪೂರ್ಣಾವಧಿಗಿಂತ ಹೆಚ್ಚು ಕಾಲ ಯಾವುದೇ ವ್ಯಕ್ತಿ ಪಕ್ಷದ ಪ್ರಧಾನ ಕಾರ್ಯದರ್ಶಿ ಹುದ್ದೆಯಲ್ಲಿ ಮುಂದುವರಿಯುವಂತಿಲ್ಲ. ಎರಡು ಮಹಾಧಿವೇಶನಗಳ ನಡುವಿನ ಅವಧಿಯಲ್ಲಿ ಪೂರ್ಣಾವಧಿ ಎಂದು ಪರಿಗಣಿಸಲಾಗಿದೆ. ಅಂಥ ವಿಶೇಷ ಸಂದರ್ಭದಲ್ಲಿ ಪಕ್ಷ ಬಯಸಿದರೆ ಪ್ರಧಾನ ಕಾರ್ಯದರ್ಶಿ ನಾಲ್ಕನೇ ಪೂರ್ಣಾವಧಿಗೆ ಮುಂದುವರಿಯಬಹುದು. ಅಂತಹ ಪ್ರಸ್ತಾಪಕ್ಕೆ ಕೇಂದ್ರ ಸಮಿತಿಯಲ್ಲಿ ನಾಲ್ಕನೇ ಮೂರು ಬಹುಮತ ಅಗತ್ಯ.

ಇದೇ ಪ್ರಸ್ತಾಪವನ್ನು ಪಕ್ಷದ ಕೆಳ ಹಂತಕ್ಕೂ ವಿಸ್ತರಿಸಲಾಗಿದೆ. ಪಕ್ಷದ ಘಟಕಗಳ ಕಾರ್ಯದರ್ಶಿ ಹುದ್ದೆಯೂ ಮೂರು ಪೂರ್ಣಾವಧಿಗೆ ಸೀಮಿತವಾಗಿದೆ. ನಾಲ್ಕನೇ ಅವಧಿ ಮುಂದುವರಿಯಬೇಕಿದ್ದರೆ ಅದಕ್ಕೆ ಆ ಘಟಕದಲ್ಲಿ ನಾಲ್ಕನೇ ಮೂರು ಬಹುಮತ ಅಗತ್ಯ.

ವೆಬ್‌ಸೈಟ್

ಮಹಾಧಿವೇಶನದ ಸಿದ್ಧತೆಗಳು ಅಂತಿಮ ಘಟ್ಟ ತಲುಪುತ್ತಿವೆ. ಕಾರ್ಯಕರ್ತರ ಉತ್ಸಾಹ ಈಗಾಗಲೇ ಮುಗಿಲುಮುಟ್ಟಿದೆ. ಸುಮಾರು ಆರು ತಿಂಗಳ ಹಿಂದೆಯೇ ಪಕ್ಷದ ಮಹಾಧಿವೇಶನದ ಬಗ್ಗೆ ವಿವರಗಳನ್ನು ನೀಡುವ, ಸಿದ್ಧತೆಗಳ ಚಿತ್ರಣವನ್ನು ನೀಡುವ ಸಮಗ್ರ ಮಾಹಿತಿ ಇರುವ ವೆಬ್‌ಸೈಟನ್ನು ಲೋಕಾರ್ಪಣೆ ಮಾಡಲಾಗಿದೆ. ಫೇಸ್‌ಬುಕ್ ಮತ್ತು ಯುಟ್ಯೂಬ್ ಲಿಂಕ್ ಹೊಂದಿರುವ ಈ ವೆಬ್‌ಸೈಟ್‌ನಲ್ಲಿ ಪಕ್ಷದ ಸಮರಧೀರ ಹೋರಾಟಗಳು, ಪಕ್ಷವನ್ನು ಮುನ್ನಡೆಸಿದ ನಾಯಕರು, ಪಕ್ಷದ ಮಹಾಧಿವೇಶನಗಳಲ್ಲಿ ಆಯ್ಕೆಯಾದ ಪ್ರಧಾನ ಕಾರ್ಯದರ್ಶಿ ಮತ್ತು ಪಾಲಿಟ್‌ಬ್ಯೂರೋ ಸದಸ್ಯರ ವಿವರಗಳನ್ನು ನೀಡಲಾಗಿದೆ. ಇವರ ಜೊತೆಗೆ ಪತ್ರಿಕಾ ಪ್ರಕಟಣೆಗಳು, ಇಮೇಜ್ ಗ್ಯಾಲರಿಯಲ್ಲಿ ಅಪರೂಪದ ಅಮೂಲ್ಯ ಫೋಟೋಗಳಿದ್ದರೆ ವೀಡಿಯೋ ಗ್ಯಾಲರಿಯಲ್ಲಿ ಜಿಲ್ಲಾ ಹಾಗೂ ರಾಜ್ಯ ಸಮ್ಮೇಳನಗಳ ಬೃಹತ್ ಬಹಿರಂಗ ಸಭೆಗಳ ಚಿತ್ರಣವನ್ನು ವೀಕ್ಷಕರೊಂದಿಗೆ ಹಂಚಿಕೊಳ್ಳಲಾಗಿದೆ.

ವಿವಿಧ ರಾಜ್ಯ ಘಟಕಗಳ ಸಮ್ಮೇಳನದ ಮಾಹಿತಿಯನ್ನೂ ಇಲ್ಲಿ ನೀಡಲಾಗಿದೆ. ಇದರೊಂದಿಗೆ ಮಹಾಧಿವೇಶನ ಸಂಘಟನಾ ಸಮಿತಿಯ ವಿವರ, ಪಕ್ಷದ ಮಹಾಧಿವೇಶನಗಳ ಇತಿಹಾಸ, ಹಿಂದೆ ನಡೆದ ಮಹಾಧಿವೇಶನಗಳ ದಿನ-ಸ್ಥಳ ವಿವರ, ಪಾಲಿಟ್ ಬ್ಯೂರೋ, ಕೇಂದ್ರ ಸಮಿತಿ ಸದಸ್ಯರ ವಿವರ, ಸಾರ್ವಜನಿಕ ಪ್ರತಿಕ್ರಿಯೆಗಳ ವಿವರವನ್ನು ವೆಬ್‌ಸೈಟ್‌ನಲ್ಲಿ ಹಾಕಲಾಗಿದೆ.

ಕೋಯಿಕ್ಕೋಡ್‌ನ ಕ್ರಾಂತಿಕಾರಿ ಇತಿಹಾಸ, ಕೇರಳದಲ್ಲಿ ಪಕ್ಷ ಬೆಳೆದುಬಂದ ಹಾದಿ, ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ ಅವರ ದಿಕ್ಸೂಚಿ ಭಾಷಣ, ರಾಜ್ಯ ಕಾರ್ಯದರ್ಶಿ ಪಿಣರಾಯಿ ವಿಜಯನ್ ಮತ್ತು ಕೋಯಿಕ್ಕೋಡ್ ಜಿಲ್ಲಾ ಕಾರ್ಯದರ್ಶಿ ಅವರ ಸಾಂದರ್ಭಿಕ ಭಾಷಣಗಳ ವೀಡಿಯೋ ಕ್ಲಿಪ್ಪಿಂಗ್ಸ್ ಕೂಡ ಇಲ್ಲಿ ಲಭ್ಯವಿದೆ.

ಪಕ್ಷದ ಕೇರಳ ರಾಜ್ಯ ಸಮ್ಮೇಳನ

ಮಹಾಧಿವೇಶನಕ್ಕೆ ಪೂರ್ವಭಾವಿಯಾಗಿ ಪಕ್ಷದ ಕೇರಳ ರಾಜ್ಯ ಸಮ್ಮೇಳನ ಅತ್ಯಂತ ಯಶಸ್ವಿಯಾಗಿ ಮುಕ್ತಾಯಗೊಂಡಿದೆ. ಪಿಣರಾಯಿ ವಿಜಯನ್ ಮತ್ತೊಮ್ಮೆ ಕಾರ್ಯದರ್ಶಿಯಾಗಿ ಆಯ್ಕೆಗೊಂಡಿದ್ದಾರೆ. ತಿರುವನಂತಪುರದಲ್ಲಿ ನಡೆದ ಭವ್ಯ ಹಾಗೂ ಅದ್ದೂರಿಯ ವರ್ಣರಂಜಿತ ಸಮ್ಮೇಳನದಲ್ಲಿ ಪ್ರತಿಪಕ್ಷ ನಾಯಕ ವಿ.ಎಸ್. ಅಚ್ಯುತಾನಂದನ್ ಪಿಣರಾಯಿ ಹೆಸರನ್ನು ಕಾರ್ಯದರ್ಶಿ ಹುದ್ದೆಗೆ ಮಂಡಿಸಿದ ಪ್ರಸ್ತಾಪಕ್ಕೆ ಅನುಮೋದನೆ ದೊರೆಯಿತು. 85 ಸದಸ್ಯರ ನೂತನ ರಾಜ್ಯ ಸಮಿತಿಯನ್ನೂ ಅವಿರೋಧವಾಗಿ ಪಕ್ಷದ ಸಮ್ಮೇಳನ ಆರಿಸಿದೆ.

25 ಸಾವಿರ ಕೆಂಪು ಸಮವಸ್ತ್ರಧಾರಿಗಳನ್ನು ಹೊಂದಿದ ಭವ್ಯ ಮೆರವಣಿಗೆ ತಿರುವನಂತಪುರಕ್ಕೆ ಕೆಂಪು ರಂಗನ್ನು ನೀಡಿತು. ಪಂಚವಾದ್ಯಂ, ತೈಯ್ಯಂ, ತೀರ ಸೇರಿದಂತೆ ವೈವಿಧ್ಯಮಯ ಜಾನಪದ ಹಾಗೂ ಆದಿವಾಸಿ ಸಾಂಸ್ಕೃತಿಕ ಕಲಾ ಪ್ರಕಾರಗಳು ಭವ್ಯ ರ‍್ಯಾಲಿಯಲ್ಲಿ ಅನಾವರಣಗೊಂಡಿತು. ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್, ಪಾಲಿಟ್ ಬ್ಯೂರೋ ಸದಸ್ಯರಾದ ಬೃಂದಾ ಕಾರಟ್, ಕೊಡಿಯೇರಿ ಬಾಲಕೃಷ್ಣನ್, ನೂತನ ಕಾರ್ಯದರ್ಶಿ ಪಿಣರಾಯಿ ವಿಜಯನ್, ಪ್ರತಿಪಕ್ಷ ನಾಯಕ ವಿ.ಎಸ್. ಮೊದಲಾದವರು ರ‍್ಯಾಲಿಯ ಪ್ರಧಾನ ಆಕರ್ಷಣೆಯಾಗಿದ್ದರು.

ಮಹಾಧಿವೇಶನದ ಪೂರ್ವಭಾವಿ ಕಾರ್ಯಕ್ರಮಗಳು

ಇದೇ ಮೊದಲ ಬಾರಿಗೆ ಮಹಾಧಿವೇಶನಕ್ಕ ಪೂರ್ವಭಾವಿಯಾಗಿ ವೈವಿಧ್ಯಮಯ ಕಲಾ-ಸಾಂಸ್ಕೃತಿಕ ಕಾರ್ಯಕ್ರಮಗಳು ರಾಜ್ಯಾದ್ಯಂತ ನಡೆಯುತ್ತಿವೆ. ಈ ಕಾರ್ಯಕ್ರಮಗಳು ಉತ್ಸವಕ್ಕೆ ಮತ್ತಷ್ಟು ಅದ್ದೂರಿತನ ನೀಡುತ್ತಿದ್ದು, ಜನತೆಯಲ್ಲಿ ಸಂಭ್ರಮ ಮತ್ತು ಪುಳಕವನ್ನು ಇನ್ನಷ್ಟು ಹೆಚ್ಚಿಸುತ್ತಿವೆ.

ಪಕ್ಷದ ಮಹಾಧಿವೇಶನದ ಥೀಮ್ ಸಾಂಗ್ (ದಿಕ್ಸೂಚಿ ಹಾಡು) ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಓಎನ್‌ವಿ ಕುರುಪ್ ಅವರ ಲೇಖನಿಯಿಂದ ಮೂಡಿದ ಆಕರ್ಷಕ ಹಿನ್ನೆಲೆ ಸಂಗೀತದಿಂದ ಮಾಧುರ್ಯದ ಈ ಥೀಮ್ ಸಾಂಗ್ ರಾಜ್ಯಾದ್ಯಂತ ಜನಪ್ರಿಯವಾಗಿದೆ.

ಇನ್ನೊಂದೆಡೆ, ಮಹಾಧಿವೇಶನದ ಹಿನ್ನೆಲೆಯಲ್ಲಿ ಫೋಟೋಗ್ರಫಿ ಸ್ಪರ್ಧೆ, ಕಾರ್ಟೂನ್ಸ್ ಸ್ಪರ್ಧೆಗಳು ನಡೆಯುತ್ತಿವೆ. ಕೋಯಿಕ್ಕೋಡ್‌ನಲ್ಲಿ ಇ.ಕೆ.ನಾಯನಾರ್ ಗೋಲ್ಡ್ ಕಪ್ ಫುಟ್‌ಬಾಲ್ ಸ್ಪರ್ಧೆ ನಡೆಯುತ್ತಿದೆ. "ಮಾರ್ಕ್ಸ್ ಈಸ್ ರೈಟ್" ಎಂಬ ಪರಿಕಲ್ಪನೆಯಲ್ಲಿ ಕಿರುಚಿತ್ರ ರಚನೆ ಸ್ಪರ್ಧೆಯು ಮಹಾಧಿವೇಶನಕ್ಕೆ ವಿಶೇಷ ಕಳೆ ನೀಡಿದೆ. ಫೆಬ್ರವರಿ ಮತ್ತು ಮಾರ್ಚ್‌ನಲ್ಲಿ ಪಕ್ಷದ 13 ವಲಯಗಳಲ್ಲಿ ವಿಚಾರ ಸಂಕಿರಣಗಳು ನಡೆಯಲಿವೆ. ಪಕ್ಷದ ಸೈದ್ಧಾಂತಿಕ ವಿಚಾರಗಳು ಮತ್ತು ರಾಷ್ಟ್ರೀಯ ಅಂತಾರಾಷ್ಟ್ರೀಯ ವಿಚಾರಗಳು ವಿಚಾರ ಸಂಕಿರಣದ ಮುಖ್ಯ ಫೋಕಸ್. ಫೆಬ್ರವರಿ ರಿಂದ ಸರಣಿ ಭಾಷಣಗಳು ಬೀದಿ ಬೀದಿಗಳಲ್ಲಿ ನಡೆಯುತ್ತಿವೆ.

ವಿವಿಧ ಸಮಿತಿಗಳು

ಸ್ವಾಗತ ಸಮಿತಿ, ಕಲೆ ಮತ್ತು ಸಾಂಸ್ಕೃತಿಕ ಸಮಿತಿ, ನಗರ ಅಲಂಕಾರ ಸಮಿತಿ, ನೋಂದಣಿ ಸಮಿತಿ, ಪುಸ್ತಕ ಪ್ರದರ್ಶನ ಸಮಿತಿ, ಸಾರಿಗೆ ಸಮಿತಿ, ಆಹಾರ ಸಮಿತಿ ಸೇರಿದಂತೆ ವಿವಿಧ ಸಮಿತಿಗಳು ಕಾಲ ಕಾಲಕ್ಕೆ ಸಭೆ ಸೇರಿ ಮಹಾಧಿವೇಶನ ಎಂಬ ಉತ್ಸವದ ಯಶಸ್ಸಿಗೆ ಹಗಲಿರುಳು ಶ್ರಮಿಸುತ್ತಿದೆ.

ಮಹಾಧಿವೇಶನದ ರಾಜಕೀಯ ನಿರ್ಣಯದ ಬಗ್ಗೆ ತಿದ್ದುಪಡಿ ಕಳುಹಿಸುವ ಕುರಿತ ಸೂಚನೆಗಳಿಗೆ ಪುಟ 15 ನೋಡಿ

ಏಪ್ರಿಲ್ 9, 2012ರಂದು ಬೃಹತ್ ಬಹಿರಂಗ ಸಭೆ

20ನೇ ಮಹಾಧಿವೇಶನದ ಬಹಿರಂಗ ಸಭೆಯು ಏಪ್ರಿಲ್ 9, 2012ರಂದು ಕೇರಳದ ಕೋಜಿಕ್ಕೋಡ್ ನಗರದಲ್ಲಿ ನಡೆಯಲಿದೆ.

ಕಪ್ಪು ಹಣ: 'ಯಥಾ ರಾಜಾ ತಥಾ ಪ್ರಜಾ' ಎಂದು ನೆನಪಿಸಿದ ಸಿಬಿಐ ನಿರ್ದೇಶಕರು


ದೇಶಗಳಲ್ಲಿ ಠೇವಣಿ ಇಟ್ಟಿರುವವರಲ್ಲಿ ರತೀಯರ ಸಂಖ್ಯೆಯೇ ಅತಿ ಹೆಚ್ಚು, ಮತ್ತು ಕಾನೂನು ಬಾಹಿರವಾಗಿ ತೆರಿಗೆ ಮಗಳಲ್ಲಿ ಅವರು ಕಳ್ಳತನದಿಂದ ಇಟ್ಟಿರುವ . ಇದರ ಮೊತ್ತ 500 ಬಿಲಿಯ ಡಾಲರು . ಅಂದರೆ ಸುಮಾರು 24.5 ಲಕ್ಷ ಕೋಟಿ .ಗಳು ಎಂದು ಭಾರತದ ಕೇಂದ್ರೀಯ ತಾ ಸಂಸ್ಥೆ ಸಿಬಿಐ ಅಂದಾಜು ಡಿದೆಯಂತೆ.

ಭಾರತಕ್ಕೆ ವಿಶೇಷವಾಗಿ ನಷ್ಟವಾಗಿರುವುದು ರಿಶಸ್, ಸ್ವಿಝರ್ಲೆಂಡ್, ಲಿಕ್ಟೆನ್‌ಸ್ಟೈನ್, ಶ್ ವರ್ಜಿನ್ ದ್ವೀಪಗಳು ಇತ್ಯಾದಿಗಳಿಗೆ ದ ಹೋದ ಕಪ್ಪು ಹಣದಿಂದ ಎಂದು ು ಲೆಕ್ಕ ಹಾಕಿದೆ. ಸಿಬಿಐ ನಿರ್ದೇಶಕರು ಾಚಾರ-ವಿರೋಧಿ ಮತ್ತು ಆಸ್ತಿ ಸ್ವಾಧೀನ ತ ಇಂಟರ್‌ಪೋಲ್ ಕಾರ್ಯಕ್ರಮದಲ್ಲಿ ತನಾಡುತ್ತ ಇದನ್ನೆಲ್ಲ ಹೇಳಿದ್ದಾರೆ. ಸ್ವಿಸ್ ಂಕುಗಳಲ್ಲಿ ಅತಿ ದೊಡ್ಡ ಠೇವಣಿದಾರರೆಂದರೆ ರತೀಯರಂತೆ!

ಅವರು ಒಂದು 'ವಿಚಿತ್ರವನಿಸಬಹುದಾದ ಗತಿಯನ್ನು ಹೇಳಿದರು. ಭಾರತೀಯರ ಮತ್ತು ರ ಅಭಿವೃದ್ಧಿಶೀಲ ದೇಶಗಳ ಶ್ರೀಮಂತರ ು ಹಣ ಹೋಗುವ ತೆರಿಗೆ ಧಾಮಗಳೆನಿಸುವ ಶಗಳಲ್ಲಿ 53 ಶೇಕಡಾ ಸ್ವತಃ 'ಟ್ರಾನ್ಸ್‌ಪರೆನ್ಸಿ ಟರ್‌ನ್ಯಾಶನಲ್' (ಅಂತರ್‍ರಾಷ್ಟ್ರೀಯ ರದರ್ಶಕತೆ)ನ ಸೂಚ್ಯಂಕದ ಪ್ರಕಾರ ಅತ್ಯಂತ ಮೆ ಭ್ರಷ್ಟಾಚಾರವಿರುವ ದೇಶಗಳು. ಇದರಲ್ಲಿ ್ಯಝೀಲೆಂಡ್, ಐದನೇ ಸ್ಥಾನದಲ್ಲಿರುವ ಗಾಪುರ ಮತ್ತು ಏಳನೇ ಸ್ಥಾನದಲ್ಲಿರುವ ಝರ್ಲೆಂಡ್ ಕೂಡ ಬರುತ್ತವೆ. ಈ ಸ್ವತಃ ಷ್ಟವಾಗಿರದ ದೇಶಗಳಿಗೆ ಈ ಕಪ್ಪು ಹಣದ ಾಹಿತಿಗಳನ್ನು ಕೊಡುವ ರಾಜಕೀಯ ಚ್ಛಾಶಕ್ತಿಯಿಲ್ಲ, ಏಕೆಂದರೆ, ತಮ್ಮ ಆರ್ಥಿಕಗಳು ಷ್ಟರ ಮಟ್ಟಿಗೆ 'ಬಡದೇಶಗಳಿಂದ ಬರುವ ಕ್ರಮ ಬಂಡವಾಳಗಳ ಹರಿವುಗಳ' ಮೇಲೆ ರತಿವೆ ಎಂಬುದು ಅವರಿಗೆ ತಿಳಿದಿದೆ ಎನ್ನುತ್ತಾರೆ ಬಿಐ ನಿರ್ದೇಶಕರು. ಜಾಗತಿಕ ಹಣಕಾಸು ಾರುಕಟ್ಟೆಗಳು ಕೂಡ ಈ ಅಕ್ರಮ ಹಣದ ರಿತ ವರ್ಗಾವಣೆಗೆ ನೆರವಾಗಿವೆ ಎಂದೂ ಅವರು ಹೇಳಿದ್ದಾರೆ.

ನಿಜ, ಭ್ರಷ್ಟಾಚಾರ ಜಗತ್ತಿನಲ್ಲಿ ಈಗ ಪ್ರಾಬಲ್ಯ ಮೆರೆಸುತ್ತಿರುವ ವ್ಯವಸ್ಥೆಯು, ಅಂದರೆ ಬಂಡವಾಳಶಾಹಿ ವ್ಯವಸ್ಥೆಯ ಅವಿಭಾಜ್ಯ ಅಂಗ ಎಂಬುದನ್ನು ಅರಿತಿರುವವರಿಗೆ ಇದರಿಂದ ಆಶ್ಚರ್ಯವೇನೂ-ಆಗದು. ಸ್ವಿಝರ್ಲೆಂಡ್ ತಾನು ತೆರಿಗೆ ಧಾಮವಲ್ಲ ಎಂದು ಸಿಬಿಐ ನಿರ್ದೇಶಕರ ಅಭಿಪ್ರಾಯವನ್ನು ನಿರಾಕರಿಸಿದೆ, ಮಾರಿಶಸ್ ಕೂಡ ನಿರಾಕರಿಸಿದೆ ಎಂಬುದರೊಂದಿಗೆ ಇದನ್ನು ಹೋಲಿಸಿ ನೋಡಬಹುದು.

ಆದರೆ ಸಿಬಿಐ ಇತ್ತೀಚೆಗೆ ತನಿಖೆ ನಡೆಸಿ



2ಜಿ, ಕಾಮನ್ವೆಲ್ತ್ ಕ್ರೀಡಾಕೂಟ ಹಗರಣ, ಮಧು ಕೋಡಾ ಹಗರಣ ಇತ್ಯಾದಿಗಳಲ್ಲಿ ಅಕ್ರಮ ಹಣ ದುಬೈ/ಸಿಂಗಾಪುರ/ ಮಾರಿಶಸ್ ಗೆ ಹೋಗಿ ಅಲ್ಲಿಂದ ಸ್ವಿಟ್ಝರ್ಲೆಂಡ್ ಮುಂತಾದ ದೇಶಗಳಿಗೆ ಹೋಗಿರುವುದು ನಮಗೆ ಕಂಡು ಬಂದಿದೆ ಎಂದು ಸಿಬಿಐ ನಿರ್ದೇಶಕರು ಹೇಳಿದ್ದರು.

ಭ್ರಷ್ಟಾಚಾರ ಎಂಬುದು ಒಂದು ಪ್ರಧಾನ ಆಡಳಿತದ ಪ್ರಶ್ನೆ, ಆಡಳಿತದಲ್ಲಿ ನೈತಿಕತೆ ಯಾವುದೇ ಸಮಾಜದಲ್ಲಿ ಉತ್ತಮ ಆಡಳಿತದ ಕೀಲಿಕೈ ಎಂದು ಹೇಳುವಾಗ ಅವರಿಗೆ ನೆನಪಾದುದು 'ಯಥಾ ರಾಜಾ, ತಥಾ ಪ್ರಜಾ' ಎಂಬ ಪ್ರಾಚೀನ ನೀತಿ ವಾಕ್ಯ. ಈ 'ರಾಜಾ' 2ಜಿಯ 'ರಾಜಾ' ಮಾತ್ರವೇ ಇರಲಿಕ್ಕಿಲ್ಲ.

ಸಿರಿಯಾ ಪ್ರಶ್ನೆಯಲ್ಲಿ ಪಾಶ್ಚಾತ್ಯ-ಪರ ಮತ

ಯುಪಿಎ-2 ಸರಕಾರದ ವಿದೇಶಾಂಗ ಧೋರಣೆಯ ಸಾಮ್ರಾಜ್ಯಶಾಹಿ=ಪರವಾದ ಒಲವು ಮತ್ತೊಮ್ಮೆ ಪ್ರದರ್ಶನಗೊಂಡಿದೆ. ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಅಮೆರಿಕಾ ಮತ್ತು ಪಾಶ್ಚಾತ್ಯ ದೇಶಗಳ ಬೆಂಬಲದಿಂದ ಅರಬ್ ಲೀಗಿನ ದೇಶಗಳು ಮುಂದಿಟ್ಟ ಸಿರಿಯ ವಿರುದ್ಧ ನಿರ್ಣಯಕ್ಕೆ ಪರವಾಗಿ ಭಾರತವೂ ಮತ ಹಾಕಿದೆ. ರಶ್ಯಾ ಮತ್ತು ಚೀನಾ ತಮ್ಮ ವಿಟೋ (ನಿಷೇಧಾಧಿಕಾರ)ವನ್ನು ಚಲಾಯಿಸಿರುವು ದರಿಂದ ಈ ನಿರ್ಣಯ ಅಂಗೀಕಾರಗೊಂಡಿಲ್ಲ. ಆದರೆ ಭಾರತ ಮಾತ್ರ ಪ್ರಜಾಸತ್ತಾತ್ಮಕ ಸುಧಾರಣೆಗಳ ಹೆಸರಿನಲ್ಲಿ ಸೌದಿ ಅರೇಬಿಯಾದಂತಹ ಸಾಮ್ರಾಜ್ಯಶಾಹಿ-ಪರ ಮತ್ತು ಪ್ರಜಾಪ್ರಭುತ್ವ-ವಿರೋಧಿ ದೇಶಗಳ ಜತೆಗೆ ಗುರುತಿಸಿಕೊಂಡಂತಾಗಿದೆ.

ಕಳೆದ ವರ್ಷ ಇದೇ ಭದ್ರತಾ ಸಮಿತಿಯಲ್ಲಿ ಲಿಬ್ಯಾದ ವಿರುದ್ಧ ಇಂತಹುದೇ ನಿರ್ಣಯದ ಮೇಲೆ ಮತದಾನದಲ್ಲಿ ಗೈರು ಹಾಜರಾಗಿತ್ತು. ಪಾಶ್ಚಾತ್ಯರ ನಾಟೋ ಪಡೆಗಳು ಈ ನಿರ್ಣಯವನ್ನೇ ಬಳಸಿ ಆ ದೇಶದ ಮೇಲೆ ಮಿಲಿಟರಿ ದಾಳಿ ನಡೆಸಿ ಆಡಳಿತ ಬದಲಾವಣೆಯನ್ನು ಹೇರಿದರು. ಈ ಅನುಭವದ ನಂತರವೇ ರಶ್ಯಾ ಮತ್ತು ಚೀನಾ ಕಳೆದ ಬಾರಿ ತಮ್ಮ ವಿಟೋ ಅಧಿಕಾರ ಬಳಸದ್ದು ತಪ್ಪಾಯಿತು ಎಂದು ಕಂಡುಕೊಂಡು ಈ ಬಾರಿ ಅದನ್ನು ಬಳಸಿವೆ. ಆದರೆ ತದ್ವಿರುದ್ಧವಾಗಿ ಭಾರತ ಸರಕಾರ ಈ ಬಾರಿ ಗೈರುಹಾಜರೂ ಆಗದೆ, ಬೇರೆ ದೇಶಗಳ ಸಾರ್ವಭೌಮತೆಯನ್ನು ಉಲ್ಲಂಘಿಸುವಂತಹ ಇಂತಹ ನಿರ್ಣಯಕ್ಕೆ ಪರವಾಗಿ ಮತ ನೀಡಿದೆ.

ಸಿರಿಯಾ ಸರಕಾರ ತಾನು ನೀಡಿದ ವಚನದಂತೆ ಪ್ರಜಾಪ್ರಭುತ್ವ ಸುಧಾರಣೆಗಳನ್ನು ಮಾಡಿಲ್ಲ ಎಂಬುದು ಯುಪಿಎ-2 ಸರಕಾರ ಈ ನಿಲುವು ಬದಲಾವಣೆಗೆ ಕೊಟ್ಟಿರುವ ಕಾರಣ. ವಾಸ್ತವವಾಗಿ ಸಿರಿಯಾದಲ್ಲಿ ನಾಟೋ ಪಡೆಗಳು ಶಸ್ತ್ರಾಸ್ತ್ರಗಳನ್ನು ಪೂರೈಸುವ ಮೂಲಕ ಒಂದು ಅಂತರ್ಯುದ್ಧಕ್ಕೆ ಕುಮ್ಮಕ್ಕು ಕೊಡುತ್ತಿವೆ. ಅಲ್ಲದೆ ಈ ನಿರ್ಣಯವನ್ನು ಮಂಡಿಸಿದ ಅರಬ್ ಲೀಗಿನ ದೇಶಗಳಲ್ಲಿ ಹಲವು ನಿರಂಕುಶ ಪ್ರಭುತ್ವವಿರುವಂತವು. ಈ ಮೂಲಕ ಪ್ರಜಾಪ್ರಭುತ್ವ ಕುರಿತಂತೆ ಪಾಶ್ಚಾತ್ಯ ದೇಶಗಳ ಗೋಸುಂಬೆತನದ ಜೊತೆಗೆ ಭಾರತವೂ ತನ್ನನ್ನು ಗುರುತಿಸಿಕೊಳ್ಳುವಂತೆ ಯುಪಿಎ-2 ಸರಕಾರ ಮಾಡಿದೆ.



ವೇದರಾಜ ಎನ್.ಕೆ.

60 ಕೋಟಿ ಭಾರತೀಯರಿಗೆ ಇಂದೂ ಬಯಲೇ ಶೌಚಾಲಯ!

ಇದೀಗ 'ಮೂಡಿ ಬರುತ್ತಿರುವ ಆರ್ಥಿಕ'ದ ಬಗ್ಗೆ ಬೆನ್ನು ತಟ್ಟಿಕೊಳ್ಳುತ್ತಿರುವ ಭಾರತದ ಯೋಜನಾ ಆಯೋಗವೂ ಒಪ್ಪಿಕೊಂಡಿರುವ ವಾಸ್ತವತೆ. 60 ವರ್ಷಗಳ ನಂತರವೂ ಸುಮಾರು 60 ಕೋಟಿ ಮಂದಿಗೆ ಬಹಿರ್ದೆಸೆಗೆ ತೆರೆದ ಬಯಲೇ ಗತಿ ಎಂಬುದನ್ನು ಒಪ್ಪಿಕೊಂಡಿರುವ ಯೋಜನಾ ಆಯೋಗದ ಸದಸ್ಯರೊಬ್ಬರು ಸರಕಾರ ಈ ಬಗ್ಗೆ ತನ್ನ ನಿಲುವನ್ನು ಬದಲಿಸಬೇಕಾಗಿದೆ ಎಂದಿದ್ದಾರೆ. ಸರಕಾರ ಕುಡಿಯುವ ನೀರು ಮತ್ತು ನೈರ್ಮಲ್ಯಕ್ಕೆ ಹೆಚ್ಚಿನ ಹಣ ಒದಗಿಸಬೇಕು ಎಂಬುದು ಅವರ ಆಶಯ. ಆದರೆ 'ಹಣಕಾಸು ಕೊರತೆ' ಎಂಬುದು ತಾನೇ ಹಾಕಿಕೊಂಡ ಮಿತಿಯನ್ನು ಮೀರುತ್ತಿದೆ, ಆದ್ದರಿಂದ ಶ್ರೀಮಂತರಿಗೆ ನೀಡುವ ರಿಯಾಯ್ತಿಗಳನ್ನು ಹಿಂತೆಗೆದುಕೊಳ್ಳುವ ಬದಲು 'ಆಮ್ ಆದ್ಮಿ'ಗೆ ನೀಡುವ ಸಬ್ಸಿಡಿಗಳನ್ನು ಕಡಿತ ಮಾಡಬೇಕೆನ್ನುವ ಯುಪಿಎ-2 ಸರಕಾರದಿಂದ ಇದನ್ನು ಅವರು ಹೇಗೆ ನಿರೀಕ್ಷಿಸುತ್ತಾರೋ ಗೊತ್ತಿಲ್ಲ. ಮಹಾತ್ಮ ಗಾಂಧಿಯವರ ಹೆಸರಿನಲ್ಲಿರುವ ಉದ್ಯೋಗ ಖಾತ್ರಿ ಯೋಜನೆ ರೇಗಾದಲ್ಲಿ 10,000 ಕೋಟಿ ರೂ. ಬಳಕೆಯಾಗದೆ ಉಳಿದಿದೆ, ಆದ್ದರಿಂದ ಗ್ರಾಮೀಣ ಪ್ರದೇಶಗಳಲ್ಲಿ ನೈರ್ಮಲ್ಯಕ್ಕೆ, ಶೌಚಾಲಯಗಳನ್ನು ಕಟ್ಟಲು ಹಣ ಒದಗಿಸುವದು ಸರಕಾರಕ್ಕೇನೂ ಕಷ್ಟವಾಗದು ಎಂದು ಅವರು ಭಾವಿಸಿದ್ದಾರೆ. ಆದರೆ ಯುಪಿಎ-2 ಸರಕಾರ ಇದನ್ನೇ ನೆವ ಮಾಡಿಕೊಂಡು 'ಹಣಕಾಸು ಕೊರತೆಯನ್ನು ಮಿತಿಯೊಳಗಿಡಲು' ಈ ರೇಗಾ ಯೋಜನೆಯನ್ನೇ ಕಡಿತ ಮಾಡುವ ಬಗ್ಗೆ ಯೋಚಿಸುತ್ತಿದೆ ಎಂಬ ಸುದ್ದಿಯೂ ಇದೆ.

1991ರಲ್ಲಿ 'ಸಂಪೂರ್ಣ ನೈರ್ಮಲ್ಯ ಪ್ರಚಾರಾಂದೋಲನ'ವನ್ನು ಆರಂಭಿಸಿ 2012ರ ವೇಳೆಗೆ ಎಲ್ಲ ಕುಟುಂಬಗಳನ್ನು ಸಾರ್ವತ್ರಿಕ ನೈರ್ಮಲ್ಯದ ವ್ಯಾಪ್ತಿಗೆ ತರುವ ಗುರಿ ಇಟ್ಟುಕೊಳ್ಳಲಾಗಿತ್ತು. ಆದರೆ ಅದು ಈ ವರ್ಷ ನೆರವೇರುವ ಸಾಧ್ಯತೆ ಕಾಣುತ್ತಿಲ್ಲ ಎಂದು ಇತ್ತೀಚೆಗೆ ಇದರ ಪರಾಮರ್ಶೆ ತಿಳಿಸಿದೆ. ಈ ದಿಕ್ಕಿನಲ್ಲಿ ರಾಜ್ಯಗಳ ಕಾರ್ಯನಿರ್ವಹಣೆಯನ್ನು ಅಳತೆ ಮಾಡಿರುವ ಈ ಪರಾಮರ್ಶೆ ಕೇವಲ ಮೂರು ರಾಜ್ಯಗಳು -ಕೇರಳ, ಪಶ್ಚಿಮ ಬಂಗಾಲ ಮತ್ತು ಮಹಾರಾಷ್ಟ್ರ- ನೂರರಲ್ಲಿ 75 ಮಾರ್ಕುಗಳನ್ನು ಪಡೆದಿವೆ ಎಂದಿದೆ. ಗ್ರಾಮೀಣ ಪ್ರದೇಶಗಳಲ್ಲಿ ಪ್ರತಿ ಐದರಲ್ಲಿ ಒಂದು ಕುಟುಂಬ ಮಾತ್ರ ಶೌಚಾಲಯ ಹೊಂದಿದೆಯಂತೆ.

ಅಮೆರಿಕನ್ ಕಂಪನಿಗಳಿಗೆ ಸಮಾನ ಅವಕಾಶ

ವಿದೇಶಾಂಗ ಕಾರ್ಯದರ್ಶಿಯ ಭರವಸೆ

ನಾಗರಿಕ ಪರಮಾಣು ವ್ಯವಹಾರದಲ್ಲಿ ಅಮೆರಿಕನ್ ಕಂಪನಿಗಳ ಕಾಳಜಿಗಳನ್ನು ಗಮನಕ್ಕೆ ತೆಗೆದುಕೊಳ್ಳಲು ಭಾರತ ಸರಕಾರ ಸಿದ್ಧವಿದೆ ಎಂದು ಭಾರತದ ವಿದೇಶಾಂಗ ಕಾರ್ಯದರ್ಶಿ ರಂಜನ್ ಮಥಾಯ್ ವಾಶಿಂಗ್ಟನ್‌ನಲ್ಲಿ ಒಂದು ಅಮೆರಿಕನ್ 'ಚಿಂತಕರ ಚಾವಡಿ'ಯಲ್ಲಿ ಭರವಸೆ ಕೊಟ್ಟಿದ್ದಾರೆ. ಭಾರತ-ಅಮೆರಿಕಾ ಪರಮಾಣು ಸಹಕಾರ ಒಂದು ಸಂಕೇತ. ಒಂದು ಪರಿವರ್ತಿತ ಭಾರತ-ಅಮೆರಿಕಾ ಸಂಬಂಧಗಳ ಉಪಕರಣ ಮತ್ತು ವೇದಿಕೆ ಎಂಬ ಪ್ರಧಾನ ಮಂತ್ರಿಗಳ ವರ್ಣನೆಯನ್ನು ಮುಂದೊಯ್ಯುತ್ತಾ ಅವರು ಜಾಗತಿಕ ಪರಮಾಣು ವ್ಯವಸ್ಥೆಯನ್ನು ಬದಲಾಯಿಸುವಲ್ಲಿ ನಮ್ಮ ರಾಜತಾಂತ್ರಿಕ ಸಂಬಂಧಗಳ ಯಶಸ್ಸನ್ನು ನಾಗರಿಕ ಪರಮಾಣು ಶಕ್ತಿಯಲ್ಲಿ ಅಷ್ಟೇ ಉತ್ಪಾದಕವಾದ ವಾಣಿಜ್ಯ ಸಹಕಾರವಾಗಿ ಪರಿವರ್ತಿಸಲು ಭಾರತ ಬದ್ಧವಾಗಿದೆ ಎಂದಿದ್ದಾರೆ. ಇದು ಹೇಳಿದ್ದು ಅಮೆರಿಕಾ ಪರಮಾಣು ಶಸ್ತ್ರಗಳ ಹೆಸರಿನಲ್ಲಿ ಇರಾನಿಗೆ ಬೆದರಿಕೆ ಹಾಕುತ್ತಿರುವ, ಅದರಲ್ಲಿ ಭಾರತ ಕೂಡ ಸಾಥ್ ಕೊಡಬೇಕೆಂದು ಅಮೆರಿಕನ್ ರಾಜತಾಂತ್ರಿಕ ಸಂಬಂಧಗಳ ಹೆಸರಿನಲ್ಲಿ ನಿರೀಕ್ಷಿಸುತ್ತಿರುವ ಸಂದರ್ಭದಲ್ಲಿ.

ಆದರೆ ಹೀಗೆ 'ಭರವಸೆ' ಕೊಡುವಾಗ ಅವರು 'ಭಾರತದ ಸಂಸತ್ತು ಪಾಸು ಮಾಡಿದ ನಮ್ಮ ಕಾನೂನಿನ ವಾಸ್ತವತೆ'ಯನ್ನು ನೆನಪಿಸಿಕೊಂಡರು! ಈ ಕಾನೂನಿನ ಚೌಕಟ್ಟಿನೊಳಗೆ ಅಮೆರಿಕನ್ ಪರಮಾಣು ಕಂಪನಿಗಳ 'ಕಾಳಜಿ'ಗಳನ್ನು ಬಗೆಹರಿಸುವುದಾಗಿ ಭರವಸೆ ನೀಡಲಾಗಿದೆ. ಆದರೆ ಅಮೆರಿಕನ್ ಕಂಪನಗಳ 'ಕಾಳಜಿ' ಈ ಕಾನೂನಿನ ಬಗ್ಗೆಯೇ.ತಾನೇ? ಈ ಕಾನೂನಿನ ಅಡಿಯಲ್ಲಿ ಈ 'ಕಾಳಜಿ'ಗಳನ್ನು ಪರಿಹರಿಸಲು ಅಗತ್ಯವೆನಿಸಿದ ನಿಯಮಗಳನ್ನು ರೂಪಿಸುವ ಪ್ರಯತ್ನಗಳನ್ನು ನಮ್ಮ ಆಳರಸರು ನಡೆಸಿದ್ದನ್ನು ನಾವೀಗಾಗಲೇ ಗಮನಿಸಿದ್ದೇವೆ.

ಜಗದಗಲ

ಶರತ್‌ಚಂದ್ರ

ಈಜಿಪ್ಟಿನಲ್ಲಿ ಮಿಲಿಟರಿ ಪಾತ್ರ ಏನು ?

ಈಜಿಪ್ಟಿನ 'ತಹರೀರ್ ಚೌಕದ ಕ್ರಾಂತಿ'ಗೆ ಒಂದು ವರ್ಷ ತುಂಬಿದೆ. ಪೂರ್ತಿ ಚುನಾವಣೆ ಫಲಿತಾಂಶಗಳು ಬಂದಿವೆ. ಈಜಿಪ್ಟಿನ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಮಿಲಿಟರಿ ಪಾತ್ರ ಏನು ? ಈ ಪ್ರಶ್ನೆ ಮಾತ್ರ ಯಕ್ಷಪ್ರಶ್ನೆಯಾಗಿಯೇ ಉಳಿದಿದೆ. ಚುನಾವಣೆಯಲ್ಲಿ ಬಹುಮತ ಪಡೆದಿರುವ ಮುಸ್ಲಿಂ ಬ್ರದರ್‌ಹುಡ್, ಈಜಿಪ್ಟಿನ ಮಿಲಿಟರಿ ಮತ್ತು ಅಮೆರಿಕನ್ ಸರ್ಕಾರ ನಡುವೆ ಈಗಾಗಲೇ ಅಪ್ರಕಟಿತ ಒಪ್ಪಂದ ಆಗಿದೆ ಎಂದು ರಾಜಕೀಯ ವೀಕ್ಷಕರ ಅಭಿಪ್ರಾಯ. ಈ ಒಪ್ಪಂದದ ಪ್ರಕಾರ ಮುಸ್ಲಿಂ ಬ್ರದರ್‌ಹುಡ್ ಸರ್ಕಾರ ಅಮೆರಿಕದ ಮಿಲಿಟರಿ-ಆರ್ಥಿಕ ನೆರವು ಮುಂದುವರೆಯುವುದಕ್ಕೆ ಮತ್ತು ಮಿಲಿಟರಿ ಹಸ್ತಕ್ಷೇಪ ಮಾಡದಿರುವುದಕ್ಕೆ ಬದಲಾಗಿ, ಯಾವುದೇ ಪ್ರಮುಖ ರಾಜಕೀಯ ಆರ್ಥಿಕ ವಿದೇಶ ನೀತಿಗಳಲ್ಲಿ ಯಾವುದೇ ಬದಲಾವಣೆಗಳನ್ನು ಮಾಡುವುದಕ್ಕೆ ಒತ್ತಾಯಿಸುವುದಿಲ್ಲ. ನವ-ಉದಾರವಾದಿ ಆರ್ಥಿಕ ನೀತಿಗಳನ್ನು ಮುಂದುವರೆಸುತ್ತದೆ. 1971 ರ ಸಂವಿಧಾನದಲ್ಲಿ ಮಿಲಿಟರಿ ಪಾತ್ರ ಸೇರಿದಂತೆ ಪ್ರಮುಖ ಬದಲಾವಣೆಗಳನ್ನು ಮಾಡುವುದಿಲ್ಲ. ಮಿಲಿಟರಿ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆಯಿಂದ ಇರುವ ವಿನಾಯಿತಿ ಸಹ ಮುಂದುವರೆಯುತ್ತದೆ. ಈಜಿಪ್ಟಿನ ಕಾನೂನುಗಳು ಇಸ್ಲಾಮಿಕ್ ಕಾನೂನಗೆ ಅನುಗುಣವಾಗಿರುತ್ತದೆ ಎಂದು ಈಗಾಗಲೇ ಈ ಸಂವಿಧಾನದಲ್ಲಿ ಇರುವ ಅಂಶ ಸಾಕು. ಅಮೆರಿಕದ ಪಶ್ಚಿಮ ಏಶ್ಯಾ ವಿದೇಶ ನೀತಿಗೆ ಸ್ಥೂಲ ಬೆಂಬಲ ಮತ್ತು ಇಸ್ರೇಲಿಗೆ ಮಾನ್ಯತೆಯ ನೀತಿಯನ್ನು ಮುಂದುವರೆಸುತ್ತದೆ.



ಇದು ಒಪ್ಪಂದದ ಸಾರ.

ಎರಡನೇ ಕ್ರಾಂತಿಗೆ ಕರೆ

'ತಹರೀರ್ ಚೌಕದ ಕ್ರಾಂತಿ'ಗೆ ಮೊದಲ ವಾರ್ಷಿಕವನ್ನು ದೇಶದಾದ್ಯಂತ ಸಂಭ್ರಮದಲ್ಲಿ ಆಚರಿಸಲಾಯಿತು. ಆ ಸಂದರ್ಭದಲ್ಲಿ ತಹರೀರ್ ಚೌಕದಲ್ಲಿ ಸೇರಿದ್ದ ಬೃಹತ್ ರ್‍ಯಾಲಿ ಈ ಒಪ್ಪಂದವನ್ನು ಬಲವಾಗಿ ವಿರೋಧಿಸಿದೆ. ಅಧ್ಯಕ್ಷರು ಸೇರಿದಂತೆ ರಾಜಕೀಯ ಅಧಿಕಾರ ಹೊಂದಿರುವ ಎಲ್ಲಾ ಮಿಲಿಟರಿ ನಾಯಕರು ತಕ್ಷಣ ರಾಜಿನಾಮೆ ಕೊಡಬೇಕು. ಪ್ರಧಾನಿ ಮತ್ತು ಮಂತ್ರಿಮಂಡಲ ನೇಮಿಸುವುದರಲ್ಲಿ ಮತ್ತು ಮುಂದಿನ ಸಂವಿಧಾನ ರೂಪಿಸುವುದರಲ್ಲಿ ಮಿಲಿಟರಿಗೆ ಯಾವುದೇ ಪಾತ್ರ ಇರಬಾರದು. ದಮನಕಾರ್ಯದಲ್ಲಿ ತೊಡಗಿದ್ದ ಮಿಲಿಟರಿ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹಾಕಬೇಕು. ಇವು ರ್‍ಯಾಲಿಯ ಪ್ರಮುಖ ಹಕ್ಕೊತ್ತಾಯಗಳು.

ತಹರೀರ್ ಚೌಕದ ಚಳುವಳಿಯನ್ನು ಸಂಘಟಿಸಿದ್ದ ಎಡ-ಲಿಬರಲ್ ಗುಂಪುಗಳು ಎರಡನೇ ಪ್ರಜಾಪ್ರಭುತ್ವ ಕ್ರಾಂತಿಗೆ ಕರೆ ಕೊಟ್ಟಿವೆ. ಮುಸ್ಲಿಂ ಬ್ರದರ್‌ಹುಡ್ ಎರಡನೇ ಪ್ರಜಾಪ್ರಭುತ್ವ ಕ್ರಾಂತಿಗೆ ಕರೆಯನ್ನು ಒಪ್ಪುವುದಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತಾ ವಾರ್ಷಿಕದ ಆಚರಣೆಯಲ್ಲಿ ಭಾಗವಹಿಸಿತು. ವಾರ್ಷಿಕದ ಸಂದರ್ಭದಲ್ಲಿ ಕಳೆದ ಒಂದು ವರ್ಷದಲ್ಲಿ ಬಂಧಿಸಲಾದ ಸುಮಾರು ಮೂರು ಸಾವಿರ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಲಾಯಿತು. ದಶಕಗಳಿಂದ ಜಾರಿಯಲ್ಲಿರುವ ತುರ್ತು ಪರಿಸ್ಥಿತಿಯನ್ನು ಭಾಗಶಃ ಸಡಿಲಿಸಲಾಯಿತು. ಆದರೆ ಈಗಲೂ ಅದರ ಹಲವು ದಮನಕಾರಿ ಅಂಶಗಳು ಜಾರಿಯಲ್ಲಿವೆ.

ಮುಸ್ಲಿಂ ಬ್ರದರ್‌ಹುಡ್ ಸಂಘಟನೆಯ ಫ್ರೀಡಂ ಅಂಡ್ ಜಸ್ಟಿಸ್ ಪಾರ್ಟಿ ಶೇ.47 ಮತ ಗಳಿಸಿ 213 ಸೀಟುಗಳನ್ನು ಗಳಿಸಿದೆ. ಸೌದಿ ಅರೇಬಿಯಾ ಮೂಲದ ಉಗ್ರ ಇಸ್ಲಾಮಿಕ್ ಸಂಘಟನೆ ಸಲಾಫಿ ಬೆಂಬಲಿತ ಅಲ್ ನೌರ್ ಶೇ.25 ಮತ ಗಳಿಸಿ 125 ಸೀಟು ಗಳಿಸಿದೆ. 498 ಸೀಟುಗಳಿರುವ ಪಾರ್ಲಿಮೆಂಟಿನಲ್ಲಿ ಈ ಎರಡು ಇಸ್ಲಾಮಿಕ್ ಪಕ್ಷಗಳಿಗೆ ಮೂರನೇ ಎರಡು ಭಾಗ ಸೀಟುಗಳಿವೆ. ಉಳಿದ ಸೀಟುಗಳು 'ತಹರೀರ್ ಚೌಕ' ಚಳುವಳಿ ಸಂಘಟಿಸಿದ ಸೆಕ್ಯುಲರ್ ಎಡ ಮತ್ತು ಲಿಬರಲ್ ಪಕ್ಷಗಳಿಗೆ ಹೋಗಿದೆ. ಫ್ರೀಡಂ ಅಂಡ್ ಜಸ್ಟಿಸ್ ಪಾರ್ಟಿಗೆ ನಿಚ್ಚಳ ಬಹುಮತ ಇಲ್ಲ. ಆದರೆ ಅದು ಅಲ್ ನೌರ್ ಬದಲು ಸೆಕ್ಯುಲರ್ ಎಡ ಮತ್ತು ಲಿಬರಲ್ ಪಕ್ಷಗಳ ಜತೆ ಮೈತ್ರಿಕೂಟ ರಚಿಸುವುದಾಗಿ ಹೇಳಿದೆ. ಇದು ಚಳುವಳಿಯ ಮುಂದುವರಿ... ಮತ್ತು ಎರಡನೇ ಕ್ರಾಂತಿಯನ್ನು ತಡೆಯುವ ತಂತ್ರ ಆಗಿರಬಹುದು. ಚಳುವಳಿಯಲ್ಲಿ ಈಗಲೂ ಮೇಲುಗೈ ಇರುವ ಸೆಕ್ಯುಲರ್ ಎಡ ಮತ್ತು ಲಿಬರಲ್ ಶಕ್ತಿಗಳು ಈ ಪಾರ್ಲಿಮೆಂಟರಿ ಮಾ... ಬೀದಿ ಚಳುವಳಿಯನ್ನು ಹೇ... ಸಂಯೋಜಿತವಾಗಿ ಮುಂದಕ್ಕೆ ಒಯ್ಯುತ್ತಾ... ಎಂದು ಕಾದು ನೋಡಬೇಕು. 'ತಹರೀರ್ ಚೌಕ'ದ ಕ್ರಾಂತಿ ಎಷ್ಟರ ಮಟ್ಟಿಗೆ ಸಫಲವಾಗುತ್ತ... ಇದರ ಮೇಲೆ ಅವಲಂಬಿಸಿದೆ.

ಕಾಟಾಚಾರದ ಈ ಅಧಿವೇಶನ

ಪುಟ 3ರಿಂದ.....

ಕಾಟಾಚಾರದ ಒಂದು ಅಧಿವೇಶನ ನಡೆಸಿ ಬಿಟ್ಟ ಕೀರ್ತಿ ಗಳಿಕೆಯಷ್ಟೇ ಸದಾನಂದಗೌಡರಿಗೆ ಸಾಕಾಗಿತ್ತು ಎಂಬುದು ಬಹು ಬೇಗನೇ ಬಯಲಾಯಿತು. ಈ ಎಲ್ಲಾ ಆವಾಂತರಗಳಿಗೆ ಇಚ್ಛಾ ಶಕ್ತಿಯೇ ಇಲ್ಲದ ಸರ್ಕಾರ, ಆಡಳಿತ ಬಿಜೆಪಿಯೇ. ಪೂರ್ಣ ಹೊಣೆಗಾರ. ತನ್ನಲ್ಲೇ ಒಂದು ನಿರ್ದಿಷ್ಟ ನಿರ್ಧಾರ, ತೀವ್ರ ಗತಿಯ ಅಜೆಂಡಾ, ಕಾರ್ಯಸೂಚಿ ಇಲ್ಲದೇ ಇರುವುದರಿಂದ ತನ್ನ ಸಚಿವರು, ಶಾಸಕರನ್ನು ಅದಕ್ಕೆ ಸಿದ್ಧಗೊಳಿಸಿ ಗಂಭೀರತೆ ತರಲಾದರೂ ಹೇಗಾದೀತು?. ಇಲಾಖೆಗಳ ಕಾರ್ಯ ಪ್ರಗತಿ, ಯೋಜನೆಗಳು-ಪ್ರಶ್ನೆ ಪರಿಹಾರೋಪಾಯಗಳೇ ವಿಷಯಗಳಾಗದಿದ್ದಾಗ ತಲೆ ಕೆಡಿಸಿಕೊಳ್ಳುವ ಅಗತ್ಯವಾದರೂ ಸಚಿವ, ಶಾಸಕ ಮಹಾಶಯರಿಗೆ ಎಲ್ಲಿಂದ ಬಂದೀತು?. ಹೀಗಾಗಿ ಸದನದೊಳಗೆ ಸದಾ ನಡೆಯುವ ಕಾಲಹರಣದ ಕಲಾಕ್ಷೇಪದಲ್ಲಿ 'ಬ್ಲೂ ಫಿಲಂ' ಮನೋರಂಜನೆ ಒಂದು ತುಣುಕು ಅಷ್ಟೇ. ಪ್ರತಿ ತಿಂಗಳಿಗೂ ಪ್ರತಿ ಶಾಸಕನಿಗೂ 52 ಸಾವಿರ ಸಂಬಳ, ಅದರಷ್ಟೇ ಭತ್ಯೆ ಹೆಸರಿನ ರಸಗವಳ, ಇಲ್ಲಿ ಕುಂತು ಏಳುವುದಕ್ಕೂ ಸಾವಿರಾರು ರೂಪಾಯಿ ಪಡೆಯುವ ಹಣ ಜನಸಾಮಾನ್ಯನ ಬೆವರಿನದ್ದು ಎಂಬ ಕನಿಷ್ಠ ಪ್ರಜ್ಞೆಯೂ ಇಲ್ಲವಾಗಿರುವುದು ಜನ ದ್ರೋಹಿ ರಾಜಕಾರಣದ ನಿದರ್ಶನ. ಇಂತಹ ವರ್ತನೆಗಳೇ, ಪ್ರವೃತ್ತಿಗಳೇ, ಅಷ್ಟಿಷ್ಟು ಉಸಿರಾಡುತ್ತಿರುವ ಸಂಸದೀಯ-ಪ್ರಜಾಪ್ರಭುತ್ವದ ಕತ್ತು ಹಿಸುಕುತ್ತಿಲ್ಲವೇ?

ಅಘಾತಗಳು

ವರ್ಷದಲ್ಲಿ 100 ದಿನಗಳಾದರೂ ಕಲಾಪಗಳು ನಡೆಯಬೇಕೆಂದಿದೆ. ಆದರೆ 42 ದಿನಗಳನ್ನೂ ನಡೆಸಲಾಗುತ್ತಿಲ್ಲ ಎನ್ನುತ್ತವೆ ಅಧ್ಯಯನಗಳು, ಅಂದರೆ ಸದನದ ವೇದಿಕೆಯ ಸದ್ಬಳಕೆ ಬೇಕಿಲ್ಲ. ಸರ್ಕಾರದ ವಿಫಲತೆ ಮತ್ತು ಎದುರಾಗುವ ಆರೋಪಗಳನ್ನೆದುರಿಸುವ ಧೈರ್ಯವೂ, ನೈತಿಕತೆಯೂ ಇಲ್ಲ. ಹೀಗಾಗಿ ಬುಡಮಟ್ಟದಿಂದ ಮೇಲ್ಮಟ್ಟದವರೆಗೆ ಪ್ರಜಾಪ್ರಭುತ್ವವನ್ನು ಬೆಳೆಸುತ್ತಿಲ್ಲ, ಬಲಗೊಳ್ಳುತ್ತಿಲ್ಲ, ಬದಲಾಗಿ ದುರ್ಬಲಗೊಳಿಸಲಾಗುತ್ತಿದೆ. ಅಧಿಕಾರಕ್ಕೆ ಬಂದಂದಿನಿಂದಲೂ ಹಗರಣಗಳು, ಆಂತರಿಕ ಕಿತ್ತಾಟ,ಅಧಿಕಾರ ದಾಹ-ಕಲಹ ಅಭದ್ರತೆ... ಅರಾಜಕತೆ,ಅನೈತಿಕತೆಗಳೇ ತುಂಬಿ ತುಳುಕುತ್ತಿರುವಾಗ ಅದಕ್ಕೆ ಅವಕಾಶವಾದರು ಎಲ್ಲಿ?. ಚುನಾವಣಾ ಪ್ರನಾಳಿಕೆಯ ಈ ಮುಂದಿನ ಬಜೆಟ್ ಅಧಿವೇಶನವಾದರೂ ಏನಾದೀತು.?!.

* * * *

ಭಾರ ಹೊತ್ತ 'ಸರದಾರ'

ನಡಿತಾ ಇಲ್ಲ ಸರಕಾರ!

'ನನ್ನನ್ನ ಹಗುರವಾಗಿ ತೊಗೊಳ್ಳಬೇಡಿ'

-ಎಂದು ಮುಖ್ಯಮಂತ್ರಿ

ಸದಾನಂದಗೌಡರು ಬಹಿರಂಗ ಭಾಷಣದಲ್ಲೇ ಹೇಳಿರುವುದು ಸುಖಾ ಸುಮ್ಮನೇ ಅಲ್ಲ. ಅವರು ರಾಜ್ಯದ ಕಾರು-ಬಾರು ನೋಡಿಕೊಳ್ಳುವ ಮುಖ್ಯಮಂತ್ರಿ ಎಂಬುದು ನಿಜ! ಹಾಗೇ ಅವರ ಹೆಗಲ ಮೇಲೆ ಎಷ್ಟೊಂದು ಭಾರ. ಹತ್ತಾರು ಖಾತೆಗಳ ಹೊತ್ತ ಬಾಹು ಬಲಿ! ಕಳೆದ ವಾರ ಅವರಲ್ಲಿದ್ದದ್ದು ಖಾಲಿಯಿರುವ ಹನ್ನೊಂದು ಮಂತ್ರಿಗಳ ಹದಿನಾರು ಖಾತೆಗಳು. ಈ ವಾರ ದುರಾದೃಷ್ಟ ವಶಾತ್ ಹಠಾತ್ ನಿಧನರಾದ ಹಿರಿಯ ಸಚಿವ ವಿ.ಎಸ್. ಆಚಾರ್ಯರ ಪಾಲಿನ ಖಾತೆಗಳೂ ಸೇರಿದರೆ ಬರೋಬ್ಬರಿ ಇಪ್ಪ... ನೀವೇ ಹೇಳೀಗ ಸಿ.ಎಂ. ಹಗುರವಾ, ಭಾರ...

ಈಗಾಗಲೇ ಸರ್ಕಾರದ ಕೆಲಸ... ದೇವರಿಗೇ ಬಿಟ್ಟಾಗಿದೆ! ಮಂತ್ರಿಗಿರಿ ಕೆ... ಮಾಡಬೇಕಾದವರೆಲ್ಲಾ ವೀಡಿಯೊ... ಪೀಡಿಯೋ,ಉರುಳು-ಮರಳು ಸೇವೆ... ನಿರತರಾಗಿದ್ದಾರೆ. ಈ ಬಹು ಭಾರ ಹೊ... ಸಿ.ಎಂ. ರಾಜ್ಯ ಸುತ್ತುತ್ತಲೇ ಇರುತ್ತಾರೆ.(... ಕೂಡಲು ಬಿಡಬೇಕಲ್ಲ). ಜನಾರ್ದ... ಸೇವೆಯೇ ಜನರ ಸೇವೆಯೆಂದು ... ಹೊತ್ತವರು ನಂಬಿಸಿರುವುದರಿಂದಾಗಿ ಜ... ಜನಾರ್ಧನನ್ನು ಹುಡುಕಿ ಮಂದಿರ,ಮಸಿ... ಚರ್ಚ್‌ಗಳತ್ತ ಗುಳೇ ಹೊರಟಿದ್ದಾರೆ.

ಈ ಸ್ಥಿತಿಯಲ್ಲಿ ಭಾರ ಇಳಿಸಿಕೊ... ಹೋದರೆಂದರೆ ಕಸಿದುಕೊಳ್ಳುವ ಕದನ... ಗೌಡರೇ ಕಾಣೆಯಾಗಬಹುದಾದ ಛಾನ್ಸೇ ...

ಹೀಗಾಗಿ ಬೇತಾಳನ ಹೊತ್ತೇ ತಿರುಗ... ಸಿ.ಎಂ. ಗೆ ಬಯಸದೇ ಬಂದ ಭಾಗ್ಯ. ಅ... ಸದಾನಂದರ ರೂಲಿಂಗ್ ನಲ್ಲೂ ಜನರಿಗೆ... ಆನಂದ ಇಲ್ಲ ಮಾರಾಯ್ರೆ !.

ಮುಗ್ಧ ಮನಸುಗಳಿಗೆ ವಿಷ...

ಟ 9 ರಿಂದ

ಳುವುದು ಬಿಟ್ಟು, ಪುರಾಣದ ಕುರಿತಾದ ಜನರ ಧಾರವಿಲ್ಲದ ನಂಬಿಕೆಗಳನ್ನು ಐತಿಹಾಸಿಕ ಸತ್ಯ ಂದು ನಿರೂಪಿಸಲು ಹೊರಟಿದೆ.

ಇಂತಹ ನಿರೂಪಣೆಗೆ ಇದೊಂದೇ ದಾಹರಣೆಯಲ್ಲ. ಇಂತಹ ಇನ್ನೂ ಹಲವಾರು ದಾಹರಣೆಗಳು ಪಠ್ಯದಲ್ಲಿವೆ. ದಕ್ಷಿಣ ಕನ್ನಡ ಜಿಲ್ಲೆಯನ್ನು ಪರಿಚಯಿಸುವ ಭಾಗದಲ್ಲಿ ಕಂಡು ರುವ ಈ ಬರಹವನ್ನು ನೋಡಿ.

"ಕದ್ರಿ ಮಂಜುನಾಥ ದೇವಸ್ಥಾನ:

ಶಿವನು ಪರಶು ರಾಮನಿಗೆ ಮಂಜುನಾಥ ಾಗಿ ಒಲಿದು, ಕದಲೀವನ ಮಧ್ಯದಲ್ಲಿ ಜ್ಯೋತಿರ್ಲಿಂಗ ಸ್ವರೂಪವಾಗಿ ಅವತರಿಸಿದ ಪುಣ್ಯ ಕ್ಷೇತ್ರವೇ ಕದ್ರಿ." ಎನ್ನುತ್ತದೆ ಪಠ್ಯ.

ಅಖಂಡ 'ಹಿಂದೂ ರಾಷ್ಟ್ರ'ದ ಕಣ್ಣೋಟವೂ ಯುದ್ಧೋನ್ಮಾದ ಬಿತ್ತುವ ದುಷ್ಟ ಅಜೆಂಡಾವೂ 'ಸಾಂಸ್ಕೃತಿಕ ಭಾರತ' ಎಂಬ ತಲೆ ಬರಹದ ಡಿಯಲ್ಲಿ 5 ಮತ್ತು 8 ನೇ ತರಗತಿಗಳ ಎರಡೂ ಪಠ್ಯಪುಸ್ತಕಗಳಲ್ಲಿ ಒಂದು ಭೂಪಟವನ್ನು ೀಡಲಾಗಿದೆ. ಈ ಭೂಪಟವು ಭಾರತದ ನೆರೆ ಹೊರೆಯ ದೇಶಗಳಾದ ಆಫಘಾನಿಸ್ತಾನ, ಪಾಕಿಸ್ತಾನ, ನೇಪಾಳ, ಬಾಂಗ್ಲಾದೇಶ, ಬರ್ಮಾ, ಶ್ರೀಲಂಕ ಅಲ್ಲದೇ ಟಿಬೆಟ್ ಮುಂತಾದ ಎಲ್ಲವನ್ನೂ ಭಾರತದ ಭಾಗವಾಗಿ ತೋರಿಸುತ್ತಿದೆ. ಎಳೆಯ ವಯಸ್ಸಿನ ಮಕ್ಕಳ ಮನಸ್ಸಿನಲ್ಲಿ ಇಂತಹ ಭಾವನೆಗಳನ್ನು ಬಿತ್ತಿದರೆ ಮುಂದೆ ಬೆಳೆದು ದೊಡ್ಡವರಾದಾಗ ಅಂತಹ ಮಕ್ಕಳ ಮನೋಭಾವ ಏನಾಗಿರುತ್ತದೆ ಎಂದು ತುಂಬಾ ಎಚ್ಚರದಿಂದ ಯೋಚಿಸಬೇಕಿದೆ.

ಆರೆಸ್ಸೆಸ್‌ನ ಭೌದ್ಧಿಕ ತರಬೇತಿ ಶಿಬಿರ, ಸಂಘಟನಾ ತರಬೇತಿ ಶಿಬಿರಗಳಲ್ಲಿ ಶಿಬಿರಾರ್ಥಿಗಳಿಗೆ ಯುದ್ಧದ ಆಟಗಳನ್ನು ಆಡಿಸಲಾಗುತ್ತದೆ. ಯುವಕರನ್ನು (ಯುವತಿಯರು ಇರುವುದಿಲ್ಲ... ಅವರಿಗೇನಿದ್ದರೂ ಈ 'ವೀರ ಕೇಸರಿ'ಗಳಿಗೆ ಆರತಿ ಬೆಳಗುವ ಕೆಲಸ ಅಷ್ಟೆ.)ಎರಡು ಗುಂಪುಗಳಾಗಿಸಿ ಅದಕ್ಕೆ ಬೇರೆ ಬೇರೆ ದೇಶಗಳ ತಂಡಗಳು ತಾವು ಎಂಬಂತಹ ಭಾವನೆಗಳನ್ನು ಬಿತ್ತಿ, 'ಶತ್ರು' ಸಂಹಾರದ (ಬೆನ್ನನ್ನು ನೆಲಕ್ಕೆ ತಾಗಿಸುವ) ಸವಾಲು ಒಡ್ಡಲಾಗುತ್ತದೆ. ಆಟದ ನಡುವೆ ಉದ್ರೇಕಕಾರಿ ಘೋಷಣೆಗಳು, ಯುದ್ಧೋನ್ಮಾದವನ್ನು ಬಡಿದೆಬ್ಬಿಸುವ ಕೂಗಾಟ, ಕಿರುಚಾಟಗಳು ಇರುತ್ತವೆ. ಅಂತರಾಷ್ಟ್ರೀಯ ಕ್ರೀಡೆಗಳು ಅಥವಾ ವಿವಾದಗಳು ಎದ್ದು ಬಂದಾಗ ನಮ್ಮ ಯುವಕರು ತಾಳ್ಮೆಯಿಂದ, ಸಾವಧಾನತೆಯಿಂದ ವರ್ತಿಸಬೇಕಾದ ಎಷ್ಟೋ ಸಂದರ್ಭಗಳಲ್ಲಿ ಯೋಚಿಸುವ ಶಕ್ತಿಯನ್ನೇ ಕಳೆದುಕೊಂಡು ಕ್ರೂರ ಮೃಗಗಳಂತೆ ಆಡುವ ಸಂದರ್ಭವನ್ನು ನೋಡುತ್ತೇವೆ. ಈ ಪ್ರವೃತ್ತಿಯ ಹಿಂದೆ ಸಂಘ ಪರಿವಾರದ ಇಂತಹ 'ಆಟ'ಗಳ ಪ್ರಭಾವ ವ್ಯಾಪಕವಾಗಿರುತ್ತದೆ ಎಂಬುದನ್ನು ನಿರ್ಲಕ್ಷಿಸುವಂತಿಲ್ಲ. ಇನ್ನು ಪಠ್ಯ ಪುಸ್ತಕದಲ್ಲಿಯೇ ಇಂತಹ 'ಸ್ಫೋಟಕ' ವಿಚಾರಗಳನ್ನು ತುಂಬುವುದರ 'ಆಟ'ಗಳ ಅಪಾಯದ ಬಗೆಗೆ ಎಷ್ಟು ಹೇಳಿದರೂ ಕಡಿಮೆಯೇ. ಈ ಭೂಪಟದ ಜೊತೆಗೆ ನೀಡಲಾಗಿರುವ 'ಏಕಾತ್ಮಕತೆಯ ಆಧಾರಗಳು' ಶೀರ್ಷಿಕೆಯ ಜೊತೆಗೆ ......ದ್ವಾದಶ ಜೋತಿರ್ಲಿಂಗಗಳು, 51 ಶಕ್ತಿ ಪೀಠಗಳು, ವೈದಿಕ ಮಂತ್ರಗಳು, ಸಪ್ತ ಮೋಕ್ಷದಾಯಕ ನಗರಗಳು......ಇತ್ಯಾದಿ ಇತ್ಯಾದಿಯಾಗಿ ದೊಡ್ಡ ಪಟ್ಟಿಯನ್ನೇ ಕೊಡಲಾಗಿದೆ. ಇದನ್ನು ನೋಡಿದರೆ ಇದೊಂದು ಪಠ್ಯಪುಸ್ತಕ ಎಂಬುದಕ್ಕಿಂತ ಯಾವುದೋ ಕರ್ಮಟ ಜ್ಯೋತಿಷಿಯ ಕಪಾಟಿನಿಂದ ಹೊರ ತೆಗೆದ ಮುಗ್ಗುಲು ಧಾರ್ಮಿಕ ಕಂತೆ ಪುರಾಣದಂತಿದೆ.

●

ಕೈಗಾ ಹೋರಾಟ

ಪುಟ 16 ರಿಂದ

ಕೃಷಿ ಮಾಡಿಕೊಂಡು ವಾಸಿಸುವ ಕುಟುಂಬಗಳೂ ಇವೆ. ಇವರಂತೂ ತಮ್ಮ ಕೃಷಿ ಉತ್ಪನ್ನಗಳನ್ನು, ಗೊಬ್ಬರ ಇತ್ಯಾದಿಗಳನ್ನು, ತಲೆಯ ಮೇಲೆ ಹೊತ್ತು ಕೊಂಡೇ ಕಡಿದಾದ ಬೆಟ್ಟ ಏರಬೇಕು, ಇಳಿಯಬೇಕು. ಇದಂತೂ ಹೊರ ಜಗತ್ತಿನವರಿಗೆ ಊಹಿಸಲೂ ಸಾಧ್ಯವಾಗದ ಕೆಲಸ. ಇಷ್ಟೆಲ್ಲಾ ಸಂಕಷ್ಟಗಳ ಮಧ್ಯೆಯು ಕೃಷಿಯನ್ನು ನಂಬಿ ಬದುಕುವ ಈ ಜನ ಬೆಳೆಯುವುದು ಒಂದು ಬೆಳೆಮಾತ್ರ. ಹತ್ತಿರದಲ್ಲಿ ಕಾಳಿನದಿ ತುಂಬಿಹರಿಯುತ್ತಿದ್ದರೂ, ಅದಕ್ಕೆ ಅಲ್ಲಲ್ಲಿ ಅಣೆಕಟ್ಟು ಕಟ್ಟಲಾಗಿದ್ದರೂ ಇವರ ಭೂಮಿಗೆ ಮಾತ್ರ ನೀರಿಲ್ಲ. ಕೈಗಾ ಸ್ಥಾವರದ ದುಷ್ಪರಿಣಾಮದಿಂದಾಗಿ ಇಳುವರಿಯೂ ತೀರಾ ಇಳಿಮುಖವಾಗಿದ್ದು ಒಂದು ಎಕರೆಗೆ ಎರಡು, ಮೂರು ಕ್ವಿಂಟಾಲ್ ಭತ್ತ ಇಳುವರಿ ಸಿಕ್ಕಿದರೆ ಅದೇ ದೊಡ್ಡದು ಎಂದು ಇಲ್ಲಿನ ರೈತರ ಆರೋಪ. ಅದರಿಂದಾಗಿ ಕೃಷಿ ಭೂಮಿಯನ್ನು ಹೆಚ್ಚಾಗಿ ಹಾಗೆಯೇ ಪಾಳು ಬಿಟ್ಟು ಕೂಲಿ ಕೆಲಸಕ್ಕೆ ಹೋಗುವವರ ಸಂಖ್ಯೆ ಜಾಸ್ತಿಯಾಗಿದೆ. ಅರಣ್ಯ ಇಲಾಖೆ, ಕೈಗಾ ಪ್ರಾಜೆಕ್ಟ್‌ನಲ್ಲಿ ಅಪರೂಪಕ್ಕೆ ನಗೂಲಿ ಸಿಗುವುದು ಬಿಟ್ಟರೆ ಇವರು ಅವಲಂಬಿಸ ಬೇಕಾದದ್ದು ಸ್ವಲ್ಪ ದೂರದ ಮೇಲ್ಜಾತಿಗಳ ಜನರ ತೋಟಗಳನ್ನು. ಇಲ್ಲಿಯ ಶೋಷಣೆಯಂತೂ ಸ್ವಾತಂತ್ರ್ಯ ಪೂರ್ವದ ಪಾಳೆಗಾರಿ ವ್ಯವಸ್ಥೆಯಂತಿದೆ. ಹೆಣ್ಣಾಳಿಗೆ ಅರವತ್ತು ರೂಪಾಯಿ ಅಸು ಪಾಸು ಕೂಲಿ ಇದ್ದರೆ, ಗಂಡಾಳಿಗೆ ಹೆಚ್ಚು ಕಮ್ಮಿ ನೂರು ರೂಪಾಯಿ, ಅಕ್ಕಿ ಕೊಟ್ಟರೆ ಸಂಬಳದಲ್ಲಿ ಕಟ್, ಇದು ಈಗಿನ ಬೆಲೆ ಏರಿಕೆಯ ಸಂದರ್ಭದಲ್ಲಿ ಇವರ ಆದಾಯ. ಹಸಿವು ಎನ್ನುವುದು ಈ ಸಮೃದ್ಧ ಹಸಿರಿನ ಮಧ್ಯೆ ಸಾಮ್ರಾಜ್ಯ ಸ್ಥಾಪಿಸಿದೆ. ಇದರಿಂದಾಗಿ ಇಲ್ಲಿನ ಯುವ ಜನತೆ ಕೆಲಸ ಹುಡುಕಿಕೊಂಡು ಗೋವಾ, ಮಂಗಳೂರಿನಂತಹ ನಗರ ಸೇರುತ್ತಿದ್ದಾರೆ. ತಮ್ಮ ಊರಿನ ಸರಹದ್ದಿನಲ್ಲಿಯೇ ವಿದ್ಯುತ್ ಸ್ಥಾವರ ಸ್ಥಾಪನೆಯಾಗಿದೆ. ನಮ್ಮ ಮನೆಯ ಮೇಲ್ಭಾಗದಲ್ಲಿಯೇ ಭಯ ಹುಟ್ಟಿಸುವ ವಿಚಿತ್ರ ಶಬ್ದವನ್ನು ಹೊರಡಿಸುತ್ತಾ ದಪ್ಪನೆಯ ಕೇಬಲ್ ಮೂಲಕ ವಿದ್ಯುತ್ ಹರಿಯುತ್ತದೆ. ಆ ವಿದ್ಯುತ್ ಹರಿಯುವ ಪ್ರದೇಶದ ಗಿಡ ಗಂಟಿಗಳಲ್ಲಿಯೂ ಸ್ವಲ್ಪ ಪ್ರಮಾಣದ ವಿದ್ಯುತ್ ಕಂಡು ಬರುತ್ತದೆ. ಆದರೆ ನಮ್ಮ ಮನೆಗಳಿಗೆ ವಿದ್ಯುತ್ ಬಂದಿರುವುದು ಬರೇ ಎರಡು ವರ್ಷದ ಹಿಂದೆ. ಅದೂ ಹೆಚ್ಚು ಅವಧಿಯ ಪವರ್ ಕಟ್‌ನೊಂದಿಗೆ ಎಂಬ ಮುಗ್ಧ ಗ್ರಾಮಸ್ಥರ ಮಾತುಗಳಲ್ಲಿಯೇ ಈಗಿನ ಆಳುವ ವರ್ಗಗಳ ಅಭಿವೃದ್ಧಿ ಅನಾವರಣಗೊಳ್ಳುತ್ತದೆ. ಅದರೊಂದಿಗೆ ಇಲ್ಲಿನ ಹೆಚ್ಚಿನ ಮನೆಗಳಲ್ಲಿ ಪೌಷ್ಠಿಕಾಂಶದ ಕೊರತೆಯ ಜೊತೆಗೆ ಕ್ಯಾನ್ಸರ್, ಚರ್ಮರೋಗದಂತಹ ರೋಗಗಳು ಕಂಡುಬರುತ್ತದೆ. ಇದು ಕೈಗಾ ಹೊರ ಸೂಸುವ ವಿಕಿರಣದಿಂದ ಎಂಬುವುದು ಇಲ್ಲಿನ ಜನತೆಯ ಪ್ರಬಲ ಅಭಿಪ್ರಾಯ.

ಹೀಗೆ ಇಲ್ಲಿ ಭೇಟಿಯಾದಲ್ಲೆಲ್ಲ ಸಮಸ್ಯೆಗಳೇ ಕಾಣಿಸುತ್ತದೆ. ಇಲ್ಲಿನ ಅತೀ ಹಿಂದುಳಿದ ಮುಗ್ಧ ಜನರ ಮೇಲೆ ಅಭಿವೃದ್ಧಿ ಎಂಬುವುದು ಬೀರಿರುವ ಪರಿಣಾಮ. ಸರ್ಕಾರದ ನಿರ್ಲಕ್ಷ್ಯ, ಭ್ರಷ್ಟ, ಸೋಗಲಾಡಿ ಜನಪ್ರತಿನಿಧಿಗಳು ನಿರ್ಮಿಸಿರುವ ನರಕಯಾತನೆ ಮೂಡಿಸುತ್ತದೆ. ಸೊಂಬೇರಿ ಸಂಸದ ಅನಂತಕುಮಾರ ಹೆಗಡೆಗೆ ಹಿಂದುತ್ವದ ಅಮಲಿನಲ್ಲಿ ಇದೆಲ್ಲಾ ಗೋಚರಿಸುವುದಿಲ್ಲ. ಇನ್ನೂ ಸಂಘಪರಿವಾರದ ಹೆಮ್ಮೆಯ ಪುತ್ರ, ಉಸ್ತುವಾರಿ ಕಾಗೇರಿ ಬಿಡಿ ಅವರಿಗೆ ಹಿಂದುತ್ವದ ಸಂಸ್ಕೃತಿ ರಕ್ಷಣೆಯೇ ಮುಖ್ಯ. ಇನ್ನು ವಿರೋಧಿ ಕಾಂಗ್ರೆಸ್ ಕೇಂದ್ರವನ್ನು ಆಳುತ್ತಿರುವ ತಮ್ಮದೇ ಸರ್ಕಾರಕ್ಕೆ ಇಲ್ಲಿನ ಅಧ್ಯಯನ ಸುತ್ತಾಟ ಮುಗ್ಗಿಸಿ ಕಾರವಾರಕ್ಕೆ ವಿದಾಯ ಹೇಳಿದೆವು.

ಸಮಸ್ಯೆಗಳ ಅಗಾಧತೆಯನ್ನು ಮನವರಿಕೆ ಮಾಡಿ ಸಮಸ್ಯೆ ಬಗೆಹರಿಸ ಬಹುದಿತ್ತು. ಆದರೆ ಅವರಿಗೆ ಕೈಗಾದ ಐದು ಮತ್ತು ಆರನೇ ಹಂತ ಮತ್ತು ಈ ಭಾಗದ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆಯ ಸಾವಿರಾರು ಕೋಟಿ ಕಾಂಟ್ರಾಕ್ಟ್ ಮೇಲೆಯೇ ಬಹಳ ಪ್ರೀತಿ. ಅದಕ್ಕಾಗಿ ಇವರು ಸಂತ್ರಸ್ತರ ಮೇಲೆ ಹರಿಸುವುದು ಬರೀ ಕಪಟ ಅನುಕಂಪ ಮಾತ್ರ. ದಶಕಗಳಿಂದ ಈ ರೀತಿಯ ಕಪಟ ರಾಜಕೀಯ, ಆಶ್ವಾಸನೆಗಳಿಂದ ಬುದ್ಧಿ ಕಲಿತಿರುವ ಜನ ಮಾತ್ರ ಈ ಬಾರಿ ಕೆಂಬಾವುಟದ ಅಡಿಯಲ್ಲಿ ಹೋರಾಟ ಸಮಿತಿ ರಚಿಸಿ ಗಟ್ಟಿ ನಿರ್ಧಾರದೊಂದಿಗೆ ಹೋರಾಟಕ್ಕೆ ಇಳಿದಿದ್ದಾರೆ. ಸಮಸ್ಯೆ ಬಗೆಹರಿಯದೆ ಪ್ರತಿಭಟನೆ ನಿಲ್ಲಿಸುವ ಮಾತೇ ಇಲ್ಲ ಅನ್ನುತ್ತಿದ್ದಾರೆ. ಈ ಬಾರಿಯಾದರು ಈ ಮುಗ್ಧ ಜನತೆಯ ಹೋರಾಟ ಗೆಲ್ಲಲಿ, ಬೇಡಿಕೆ ಈಡೇರಲಿ. ಕಾಳಿ ನದಿಯ ದಂಡೆಯ ಪ್ರಕೃತಿ ಸೌಂದರ್ಯದಂತೆ ಇವರ ಬದುಕು ಹಸಿರಾಗಲಿ ಎಂದು ಹಾರೈಸಿ ಎರಡು ದಿನಗಳ

ತಿದ್ದುಪಡಿ ಸೂಚಿಸಲು ಮಾರ್ಗ ಸೂಚಿ

ಈಗಾಗಲೇ ಇಂಗ್ಲೀಷ್‌ನಲ್ಲಿ ಬಿಡುಗಡೆಯಾಗಿರುವ ಸಿಪಿಐ(ಎಂ) ಮಹಾಧಿವೇಶನದ ರಾಜಕೀಯ ನಿರ್ಣಯವು ಕನ್ನಡಕ್ಕೆ ಅನುವಾದಗೊಳ್ಳುತ್ತಿದ್ದು ಸದ್ಯದಲ್ಲಿಯೇ ಬಿಡುಗಡೆಯಾಗಲಿದೆ. ಪಕ್ಷದ ಸದಸ್ಯರು, ಹಿತೈಷಿಗಳು ಇದರ ಪ್ರಯೋಜನವನ್ನು ಪಡೆದುಕೊಳ್ಳಲು ಕೋರಲಾಗಿದೆ. ಈ ರಾಜಕೀಯ ನಿರ್ಣಯಕ್ಕೆ ತಿದ್ದುಪಡಿಗಳು, ಸೂಚನೆಗಳು ಏನೇ ಇದ್ದರು ಮುಕ್ತವಾಗಿ ಸೂಚಿಸಬಹುದಾಗಿದೆ.

ಸೂಚನೆಗಳು

* ನೀವು ಸೂಚಿಸುವ ತಿದ್ದುಪಡಿಗಳನ್ನು ವೈಯಕ್ತಿಕವಾಗಿಯೂ ಕಳುಹಿಸಬಹುದು ಅಥವಾ ನಿಮ್ಮ ಸಂಬಂಧಿಸಿದ ಶಾಖೆ/ಸಮಿತಿಗಳ ಮೂಲಕವೂ ಕಳುಹಿಸಬಹುದು.
* ತಿದ್ದುಪಡಿ ಕಳುಹಿಸುವ ಸಂಗಾತಿಗಳು ತಪ್ಪದೇ ತಮ್ಮ ಹೆಸರು ಹಾಗೂ ಘಟಕವನ್ನು ನಮೂದಿಸ ತಕ್ಕದ್ದು.
* ತಿದ್ದುಪಡಿ ಸೂಚನೆಯಲ್ಲಿ ಪ್ಯಾರ ಹಾಗೂ ಸಾಲಿನ ಸಂಖ್ಯೆಯನ್ನು ನಿಖರವಾಗಿ ಉಲ್ಲೇಖಿಸಬೇಕು.
* ರಾಜಕೀಯ ನಿರ್ಣಯಕ್ಕೆ ಸಂಬಂಧಿಸಿದ ಯಾವುದೇ ಸೂಚನೆಯೂ ಮಾರ್ಚ್ 10, 2012ರ ಒಳಗಾಗಿ ಹಾಗೂ ಸೈದ್ಧಾಂತಿಕ ನಿರ್ಣಯಕ್ಕೆ ಸಂಬಂಧಿಸಿದ ಯಾವುದೇ ಸೂಚನೆಯೂ ಮಾರ್ಚ್ 15ರ ಒಳಗಾಗಿ ದೆಹಲಿಯ ಪಕ್ಷದ ಕೇಂದ್ರ ಸಮಿತಿ ಕಛೇರಿಯನ್ನು ತಲುಪಬೇಕು.
* ನೇರವಾಗಿ ಪಕ್ಷದ ಕೇಂದ್ರ ಸಮಿತಿ ಕಛೇರಿಗೆ ಇಂಗ್ಲೀಷ್‌ನಲ್ಲಿ ತಿದ್ದುಪಡಿ ಕಳುಹಿಸುವುದು.
* ತಿದ್ದುಪಡಿಯನ್ನು ಕನ್ನಡದಲ್ಲಿ ಕಳಿಸುವುದಾದಲ್ಲಿ ಮೂರು ದಿನ ಮೊದಲೇ ಪಕ್ಷದ ರಾಜ್ಯ ಸಮಿತಿ ಕಛೇರಿಗೆ ತಲುಪುವಂತೆ ಕಳುಹಿಸಬೇಕು. ಅವಧಿಯ ನಂತರ ಬರುವ ತಿದ್ದುಪಡಿಗಳನ್ನು ಕೇಂದ್ರ ಸಮಿತಿಯು ಪರಿಗಣಿಸುವುದಿಲ್ಲ ಎಂಬುದನ್ನು ಗಮನಿಸುವುದು.

ತಿದ್ದುಪಡಿ ಕಳುಹಿಸಬೇಕಾದ ವಿಳಾಸ :
Communist Party of India (Marxist), Central Committee, A.K.Gopalan Bhavan, 27-29 Bhai Vir Singh Marg, New Delhi-110 001 - E Mail :- 20@cpim.org

ಕನ್ನಡದಲ್ಲಿ ಕಳುಹಿಸುವವರು :
ಇ.ಎಂ.ಎಸ್.ಭವನ, 37/ಎ, 8ನೇ ಅಡ್ಡರಸ್ತೆ, ಮಹಾಲಕ್ಷ್ಮೀ ಲೇಔಟ್, ಪೋಸ್ಟ್ ಆಫೀಸ್ ಬಳಿ ಬೆಂಗಳೂರು-560086, ಇ ಮೇಲ್ :
cpimkar@yahoo.com
cpimkar@gmail.com

ಕೈಗಾ ಸಂತ್ರಸ್ಥರ ದುರ್ಬರ ಬದುಕು



ಸಂಜಯ


ಕಾರವಾರ, ಕೈಗಾ ಅಣು ಸ್ಥಾವರದ 5 ಕಿ.ಮೀ. ಸುತ್ತ ಮುತ್ತಲಿನ ಐದು ಗ್ರಾಮಗಳ ಜನತೆ ತಮ್ಮ ಭೂಮಿಯನ್ನು ವಶಪಡಿಸಿಕೊಂಡು ತಮಗೆ ಸೂಕ್ತ ಪುನರ್ವಸತಿ ಮಾಡಿಕೊಡಬೇಕು ಎಂದು ಸರ್ಕಾರವನ್ನು ಒತ್ತಾಯಿಸಿ ಕಳೆದ ಎರಡು ತಿಂಗಳುಗಳಿಂದ ನಿರಂತರವಾಗಿ ಹಗಲು ರಾತ್ರಿ ಧರಣಿ, ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಹೋರಾಟವನ್ನು ನೋಡಬೇಕು, ಮತ್ತಷ್ಟು ಸಂತ್ರಸ್ತರ ಸಮಸ್ಯೆಗಳನ್ನು ಅರಿಯಬೇಕು ಎಂಬ ಉದ್ದೇಶದಿಂದ 'ದಿ ಹಿಂದೂ' ಪತ್ರಿಕೆಯ ಬೆಂಗಳೂರು ಪ್ರತಿನಿಧಿ ಸುದಿಪ್ತೋ ಮಂಡಲ್; ಮಂಗಳೂರಿನ ಪತ್ರಕರ್ತ ಗೆಳೆಯ ನವೀನ್ ನೂರಿಂಜೆಯ ಜೊತೆಗೆ ಕೈಗಾ ಸಂತ್ರಸ್ತರ ಊರುಗಳಿಗೆ ಭೇಟಿ ನೀಡಿದ್ದೆ. ಕಾರವಾರಕ್ಕೆ ಮಂಗಳೂರಿನಿಂದ ಟ್ರೈನಿನಲ್ಲಿ ಬಂದು ರಾತ್ರಿ ಸತ್ಯಾಗ್ರಹ ಮಂಟಪಕ್ಕೆ ಭೇಟಿ ನೀಡಿದಾಗ– ಇದೇನು ಎಲ್ಲಾ ಕಡೆ ನಮ್ಮನ್ನು ಒಕ್ಕಲೆಬ್ಬಿಸಬೇಡಿ, ಯಾವುದೇ ಕಾರಣಕ್ಕೂ ನಮ್ಮ ಭೂಮಿ ಬಿಟ್ಟು ಕೊಡುವುದಿಲ್ಲ, ನಿಮ್ಮ ಪರಿಹಾರವೂ ಬೇಡ, ನಿಮ್ಮ ಅಭಿವೃದ್ಧಿಯೂ ಬೇಡ ಎಂದು ಸ್ಥಳೀಯರು ಬೀದಿಗಿಳಿದರೆ, ಇಲ್ಲಿ ನೇರ ವಿರುದ್ಧ, ನಮ್ಮನ್ನು ತಕ್ಷಣ ಒಕ್ಕಲೆಬ್ಬಿಸಿ ಎಂದು ಪ್ರತಿಭಟನೆಗೆ ಇಳಿದಿದ್ದಾರಲ್ಲ !! ಎಂದು ಗೊಂದಲ, ಅನುಮಾನಗಳು ಮೂಡಿತ್ತು. ಆದರೆ ಮರು ದಿವಸ ಸ್ಥಳೀಯ ಸಂಗಾತಿಗಳ ಜೊತೆಗೂಡಿ ಕೈಗಾ ಸುತ್ತಾ ಮುತ್ತದ ಹರ್ಟುಗಾ, ಬಾಳೆಮನೆ, ಸುಳಗೇರಿ ಮುಂತಾದ ಹಳ್ಳಿಗಳಲ್ಲಿ ತಿರುಗಾಡುವಾಗ ಕೈಗಾ ಅಣುವಿದ್ಯುತ್ ಸ್ಥಾವರ ಇಲ್ಲಿನ ಜನತೆಯ ಬದುಕಿನ ಮೇಲೆ ಬೀರಿರುವ ಘೋರ ಪರಿಣಾಮ ಒಂದೊಂದಾಗಿ ಗೋಚರಿಸತೊಡಗಿತು. ಇಲ್ಲಿನ ದಟ್ಟ ಕಾಡು, ಪ್ರಕೃತಿ ಸೌಂದರ್ಯ ಕಾಳಿ ನದಿಯ ಗಾಂಭೀರ್ಯ, ಅಲ್ಲಲ್ಲಿ ಎದುರಾಗುತ್ತಿದ್ದ ಹೆಸರಿಲ್ಲದ ಕಿರು ಜಲಪಾತಗಳು, ನಾವು ಕಂಡು ಕೇಳರಿಯದ ಆಕರ್ಷಕ ಪಕ್ಷಿಗಳು, ದುತ್ತನೆ ಪ್ರತ್ಯಕ್ಷವಾಗಿ ಕ್ಷಣ ಮಾತ್ರದಲ್ಲಿ ಮಾಯವಾಗುತ್ತಿದ್ದ ಜಿಂಕೆ, ಕಡವೆ, ಕಾಡು ಪಾಪ ಮುಂತಾದ ಪ್ರಾಣಿಗಳು.. ನಮ್ಮಲ್ಲಿ ರೋಮಾಂಚನ ಮೂಡಿಸಿತ್ತು. ಇಂತಹ ಪ್ರಕೃತಿಯ ರಮಣೀಯ ತಾಣದಲ್ಲಿ ವಾಸಿಸುವ ಜನತೆ ಮಾತ್ರ ತಮ್ಮ ಬದುಕು ನರಕ ಸದೃಶವಾಗಿರುವ ಬಗ್ಗೆ ಮನ ಮುಟ್ಟುವಂತೆ ಉದಾಹರಣೆ ಸಹಿತ ತಮ್ಮ ನೋವಿನ ಕತೆಗಳನ್ನು ಹೇಳ ತೊಡಗಿದರೆ ಇಲ್ಲಿನ ರಮಣೀಯ ಸೌಂದರ್ಯದ ಹಿಂದಿರುವ ಕಡುಗತ್ತಲೆ ನಮ್ಮಲ್ಲಿ ವಿಷಾದವನ್ನು ಮೂಡಿಸತೊಡಗಿತು. ಈಗ ಒಕ್ಕಲೆಬ್ಬಿಸಬೇಕು ಎಂದು ಹೋರಾಟಕ್ಕಿಳಿದಿರುವ ಗ್ರಾಮಗಳು ಸ್ಥಾವರದ ಸುರಕ್ಷಿತ ವಲಯ ಎಂದು ಪರಿಗಣಿಸಲ್ಪಟ್ಟವು. ಇವರನ್ನು ಇಲ್ಲಿಂದ ಸೂಕ್ತ ಪುನರ್ವಸತಿಯೊಂದಿಗೆ ಒಕ್ಕಲೆಬ್ಬಿಸುವುದು ಕೈಗಾಸ್ಥಾವರ ಮತ್ತು ಇಲ್ಲಿನ ಜನತೆ ಎರಡರ ದೃಷ್ಟಿಯಿಂದಲೂ ಸೂಕ್ತ.

ಈ ಗ್ರಾಮಗಳೂ ಸುರಕ್ಷತಾ ವಲಯದಲ್ಲಿ ಬರುವುದರಿಂದ ಇಂದಲ್ಲ ನಾಳೆ ಇವರನ್ನು ಒಕ್ಕಲೆಬ್ಬಿಸಲೇ ಬೇಕಾಗಿದೆ. ಮತ್ತು ಕೈಗಾ ಅಣುಸ್ಥಾವರದ ಸುರಕ್ಷತೆಯ ದೃಷ್ಟಿಯಿಂದ ಇಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳುತ್ತಿಲ್ಲ. ಮತ್ತೊಂದೆಡೆ ಈ ಗ್ರಾಮಗಳು ಟೈಗರ್ ಪ್ರಾಜೆಕ್ಟ್ ವ್ಯಾಪ್ತಿಗೆ ಬರುವುದರಿಂದ ಸರ್ಕಾರ ಹುಲಿಯೋಜನೆಗೆ ನಿಯಮಾವಳಿಗಳನ್ನು ಮುಂದಿಟ್ಟು ಇಲ್ಲಿನ ಜನರ ಬದುಕನ್ನು ಮೂರಾಬಟ್ಟೆಯಾಗಿಸಿದೆ. ತಾಲೂಕು, ಜಿಲ್ಲಾ ಕೇಂದ್ರವಾದ ಕಾರವಾರದಿಂದ ಸರಾಸರಿ 60 ಕಿ.ಮೀ. ದೂರದಲ್ಲಿರುವ ಈ ಕುಗ್ರಾಮಗಳಿಗೆ ಹೊರ ಜಗತ್ತಿನೊಂದಿಗೆ ಸಂಪರ್ಕ ಸಾಧಿಸಲು ಇರುವುದು ಒಂದು ಬಸ್ ಮಾತ್ರ. ರಾತ್ರಿ ಬಂದು ಈ ಪ್ರದೇಶದಲ್ಲಿ ತಂಗುವ ಸರ್ಕಾರಿ ಬಸ್ ಬೆಳಗ್ಗಿನ ಜಾವ ಜನತೆಯಲ್ಲಿ ಹೊತ್ತು ಕೊಂಡು ಕಾರವಾರಕ್ಕೆ ತೆರಳಿದರೆ ಮತ್ತೆ ಬರುವುದು ರಾತ್ರಿಯೇ. ಈ ಕೆಂಪು ಬಸ್ ಕಾಡಿನ ಮಧ್ಯೆ ಕೆಟ್ಟು ಹೋದರೆ ಜನ ಕಾಡುಪಾಲು, ಅದು ಬಿಟ್ಟರೆ ಈ ಹಳ್ಳಿಗಳಲ್ಲಿ ಇರುವುದು ಒಂದೆರಡು ಮೋಟಾರ್ ಬೈಕ್‌ಗಳು ಮಾತ್ರ. ಇಲ್ಲಿ ಚಿರತೆ, ಹುಲಿ ಕಾಟದಿಂದ ಜಾನುವಾರುಗಳನ್ನು ಸಾಕಲಾಗದೆ ಎತ್ತಿನಬಂಡಿಗಳು ಇಲ್ಲಿ ಕಾಣಸಿಗುವುದಿಲ್ಲ. ಇಲ್ಲಿನ ಮಕ್ಕಳು ಶಾಲಾ ಕಾಲೇಜುಗಳಿಗೆ ತೆರಳಬೇಕಾದರೆ ಇದೇ ಬಸ್ಸನ್ನು ಅವಲಂಬಿಸಿ ಕದ್ರಾ, ಕಾರವಾರ ಕಡೆ ತೆರಳ ಬೇಕಾಗುತ್ತದೆ. ಇದಕ್ಕಾಗಿ ಬೆಳಗ್ಗಿನ ಜಾವ ಮನೆ ಬಿಟ್ಟರೆ ವಾಪಾಸಾಗುವುದು ಮತ್ತೆ ರಾತ್ರಿಯೇ. ಒಂದು ಉದಾಹರಣೆ ನೋಡಿ ಬಾಳೆಮನೆ ಗ್ರಾಮದ ಶಹೀನಾಬಿ ಎಂಬ ಹುಡುಗಿ ಈಗ ಕಾರವಾರದ ಕಾಲೇಜೊಂದರಲ್ಲಿ ಪದವಿ ಓದುತ್ತಿದ್ದಾರೆ. ಅದಕ್ಕಾಗಿ ಬೆಳಗಿನ ಜಾವ ನಾಲ್ಕುಗಂಟೆಗೆ ಎದ್ದು ತಯಾರಾಗಿ ಆರುಗಂಟೆಯ ಬಸ್ಸಿನಲ್ಲಿ ಕಾರವಾರಕ್ಕೆ ತೆರಳಿದರೆ ಮತ್ತೆ ವಾಪಾಸಾಗುವುದು ರಾತ್ರಿ ಎಂಟು ಗಂಟೆಯ ನಂತರ– ಊರಿಗೆ ಬರುವ ಬಸ್ಸಿನಲ್ಲಿ. ಆ ದಟ್ಟ ಕಾಡಿನ ಮಧ್ಯೆಯೇ ಕಡುಕತ್ತಲೆಯಲ್ಲಿ ಬಸ್ಸಿಳಿದು ನಡೆದು ಮನೆ ಸೇರಬೇಕು. ಇಂತಹ ಸವಾಲನ್ನು ಸ್ವೀಕರಿಸಿ ಉನ್ನತ ವಿದ್ಯಾಭ್ಯಾಸ ಪಡೆಯುವ ಆ ಮುಸ್ಲಿಂ ಹುಡುಗಿಯ ಹುಮ್ಮಸ್ಸಿಗೆ ಬೆರಗಾಗಲೇಬೇಕು. ಇಂತಹ ಗಂಭೀರ ಪರಿಸ್ಥಿತಿಯಲ್ಲಿ ಇಲ್ಲಿನ ಮಕ್ಕಳು ಎಂತಹಾ ವಿದ್ಯಾಭ್ಯಾಸ ಪಡೆಯಲು ಸಾಧ್ಯ ? ಶಾಹಿನಾಬಿಯಂತೆ ಎಷ್ಟು ಮಕ್ಕಳು ಧೈರ್ಯ ತೋರಿಸಿಲು ಸಾಧ್ಯ. ಇದು ಇಲ್ಲಿನ ಮಕ್ಕಳ ವಿದ್ಯಾಭ್ಯಾಸದ ಮೇಲೆ ಗಂಭೀರ ಪರಿಣಾಮ ಬೀರಿದೆ. ಹಾಗೆಯೇ ಇಲ್ಲಿನ ಜನಾರೋಗ್ಯ ಸಮಸ್ಯೆ ಉಂಟಾದರೆ ಸಾಮಾನ್ಯ ವೈದ್ಯರನ್ನು, ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ತಲುಪಬೇಕಾದರೆ 20 ಕಿ.ಮೀ. ದೂರ ವಿರುವ ಕದ್ರಾವನ್ನು ಸಂಪರ್ಕಿಸಬೇಕು. ಗರ್ಭಿಣಿ ಮಹಿಳೆಯರದ್ದಂತೂ ಇಲ್ಲಿ ನಾಯಿಪಾಡು, ಸಾವಿನೊಂದಿಗೆ ಸರಸ.

ಈ ವ್ಯಾಪ್ತಿಗೆ ಬರುವ ಸುಳಗೇರಿಯ ಜನರ ಬದುಕು ಎಂತಹವರಲ್ಲೂ ಕರುಣೆಯನ್ನು ಉಕ್ಕಿಸೀತು. ಇಲ್ಲಿಯ ಜನ ತಮ್ಮ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಬರುವ ಉಳವಿಯ ಸರ್ಕಾರಿ ರೇಷನ್ ಅಂಗಡಿಗೆ ಹೋಗ ಬೇಕಾದರೆ ಸುತ್ತು ಬಳಸಿ ಕನಿಷ್ಟ 120 ಕಿ.ಮೀ. ಕ್ರಮಿಸಬೇಕು. ಅದೂ ಮೂರು ಬಸ್ ಬದಲಾಯಿಸಿ ಹುಲಿ ಯೋಜನೆಯಿಂದಾಗಿ ಹತ್ತಿರದ ಕಾಲ್ದಾರಿಗಳು ನಡೆಯಲು ಅಸಾಧ್ಯದ ಪರಿಸ್ಥಿತಿಗೆ ತಲುಪಿದೆ. ಇನ್ನು ಇವರ ಊರಿಗೆ ಪೋಸ್ಟ್‌ಮ್ಯಾನ್ ಬರುವುದು ತೀರಾ ಅಗತ್ಯ ಬಿದ್ದರೆ ತಿಂಗಳಿಗೆ ಒಂದು ಬಾರಿ. ಇಲ್ಲದಿದ್ದಲ್ಲಿ ಇವರಿಗೆ ಪತ್ರ ತಲುಪುವುದು ಎರಡೋ, ಮೂರೋ ತಿಂಗಳಿಗೆ. ಇವರಾಗಿ ಪೋಸ್ಟ್ ಆಫೀಸಿಗೆ ಖುದ್ದು ಹೋಗಿ ಬರ ಬೇಕಾದರೆ ಪೋಸ್ಟ್ ಆಫೀಸು ಇರುವ ಮಲವಳ್ಳಿಗೆ ತಲುಪ ಬೇಕು ಮತ್ತು ಅದೇ ದಾರಿಯಲ್ಲಿ ವಾಪಸ್ ಬರಬೇಕು. ಎಂದರೆ ಇದು ಬರೋಬ್ಬರಿ ಎರಡು ದಿನದ ಕೆಲಸ !! ಹುಲಿಯೋಜನೆ, ಸುರಕ್ಷತಾ ವಲಯ ಮುಂತಾದ ಕಾರಣಗಳಿಂದ ಬೆಟ್ಟದ ಮೇಲೆ ಇರುವ ಇವರ ಅಲ್ಪ ಸ್ವಲ್ಪ ಜಮೀನಿಗೂ ಇರುವ ಕಾಲು ದಾರಿಗಳನ್ನು ನಿರ್ಮಿಸಲು ಅವಕಾಶಗಳಿಲ್ಲ. ಇದರಿಂದಾಗಿ ಈ ಜಮೀನುಗಳು ಪಾಳು ಬೀಳುವಂತಾಗಿದೆ. ಇದೇ ಸುಳಗೇರಿಯಲ್ಲಿ ರಸ್ತೆಯಿಂದ ಆರೇಳು ಕಿ.ಮೀ. ದೂರದಲ್ಲಿ, ಕಡಿದಾದ ಬೆಟ್ಟದಲ್ಲಿ

ಪುಟ 14ಕ್ಕೆ.....





JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE No. 12 18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH